ಬೆಲೆ: ಎರಡು ಆಣೆ

ಕರ್ಮವೀರ

ಸಂಪಾದಕರು: ಹ. ರಾ. ಪುರೋಹಿತ ಎಂ. ಎ.

—ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ—

Editor: H. R. Purohit, M. A.

---(ಸಂಪುಟ ೧೯)---   ಹುಬ್ಬಳ್ಳಿ ಸೋಮವಾರ ತಾರೀಖು ೧೬---೬---೧೯೪೭   ---(ಸಂಚಿಕೆ ೧೧)---

ಪೂರ್ವ ಆಫ್ರಿಕೆಯಲ್ಲಿ ಬಿಳಿಯರ ದಬ್ಬಾಳಿಕೆ

ಕೆನ್ಯಾ, ಯುಗಾಂಡ, ಟಾಂಗನೀಕ, ಜಾಂಜೀಬಾರುಗಳಲ್ಲಿ ಮೂಲನಿವಾಸಿಗಳ ಮತ್ತು ಹಿಂದೀಯರ ಮೇಲೆ ಅಸಮರ್ಥನೀಯ ನಿರ್ಬಂಧಗಳು—

ಪೂರ್ವ ಆಫ್ರಿಕೆಯಲ್ಲಿ ಅನೇಕ ವರ್ಷಗಳಿಂದ ವಲಸೆ ನಿಂದು ಅಲ್ಲಿಯ ಜನಜೀವನದಲ್ಲಿ ಬೆರೆತುಹೋಗಿ ತಮ್ಮ ಸಾಹಸ ಸತ್ಪ್ರಯತ್ನಗಳಿಂದ ಅಲ್ಲಿಯ ಪ್ರದೇಶಗಳ ಆರ್ಥಿಕ ಪ್ರಗತಿಯನ್ನೂ ಸುಖ ಸೌಲಭ್ಯಗಳನ್ನೂ ಹೆಚ್ಚಿಸಿದ ಹಿಂದೀಯರನ್ನು ಓಡಿಸಲು ವಿರುದ್ಧ ಕಾಯಿದೆಗಳನ್ನು ಪಾಸು ಮಾಡಿಕೊಂಡು ಮನಬಂದಂತೆ ಕಾರಭಾರ ನಡೆಸಲು ಹೊರಟಿದ್ದಾರೆ. ಇದನ್ನು ತಡೆಯಲು ಚಳುವಳಿ ಹೂಡಲು ಒಟ್ಟಾದ ಬಣ್ಣದ ಜನರು ಅವಿದ್ಯಾವಂತರಿರುವುದರಿಂದ ಅಲ್ಲಿಯ ಮತ್ತು ಭಾರತದ ಹಿಂದೀಯರ ಬೆಂಬಲವನ್ನು ಕೋರುತ್ತಾರೆ. ಭಾರತವು ಅತ್ತ ಲಕ್ಷ್ಯಕೊಡುವುದು ಅಗತ್ಯವಿಲ್ಲವೆ?

ಹಿಂದುಸ್ತಾನವು ಇಲ್ಲಿಯ ವರೆಗೆ ತನ್ನ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುವುದರಲ್ಲೇ ಮಗ್ನವಾಗಿತ್ತು. ಆದುದರಿಂದ ಹೊರನಾಡುಗಳಲ್ಲಿ ನೆಲಸಿದ ಹಿಂದೀಯರ ಸ್ಥಿತಿಗತಿಗಳತ್ತ ಲಕ್ಷ್ಯವಿಡಲು ಸಾಧ್ಯವಾಗಲಿಲ್ಲ; ಲಕ್ಷ್ಯವಿಟ್ಟಾಗಲೂ ಪರದಾಸ್ಯದಲ್ಲಿರುವುದರಿಂದ ಅವರ ಕಷ್ಟಗಳನ್ನು ನಿವಾರಿಸಲು ರಾಜಕೀಯ ಶಕ್ತಿಯನ್ನು ಪ್ರಯೋಗಿಸಲಾರದೆ ಕೇವಲ ಮಾತಿನಲ್ಲಿ ಮಾತ್ರ ಸಹಾನುಭೂತಿ ತೋರಿಸಬೇಕಾಗಿತ್ತು. ಇಂದು ಸ್ವತಂತ್ರ ಹಿಂದುಸ್ತಾನವು ಅತ್ತಕಡೆ ಲಕ್ಷ್ಯಕೊಡುವುದು ಬಹಳ ಅಗತ್ಯ.

ಹಿಂದುಸ್ತಾನವು ಸ್ವತಂತ್ರವಾಗುವದೆಂಬ ಕಾರಣದಿಂದಲೇ ಪೂರ್ವ ಆಫ್ರಿಕೆಯಲ್ಲಿರುವ ಆಂಗ್ಲರು ಆ ಪ್ರದೇಶವನ್ನು ಕೇವಲ ತಮ್ಮ ಆಸ್ತಿಯಾಗಿಟ್ಟುಕೊಳ್ಳುವ ದೃಷ್ಟಿಯಿಂದ ಮೊದಲೇ ಅನೇಕ ನಿರ್ಬಂಧಗಳಿಗೊಳಗಾಗಿ ಬಾಳುತ್ತಿದ್ದ ಹಿಂದೀಯರ ಮೇಲೆ ಮತ್ತೂ ಉಗ್ರತರವಾದ ನಿರ್ಬಂಧಗಳನ್ನು ಈಗ ಹೇರತೊಡಗಿದ್ದಾರೆ. ಪೂರ್ವ ಆಫ್ರಿಕದ ನಾಲ್ಕು ಪ್ರದೇಶಗಳಲ್ಲಿ ಹಿಂದೀಯರು ನೆಲಸಿದ್ದಾರೆ. ಅವು ಯಾವುವೆಂದರೆ ಕೆನ್ಯಾ, ಯುಗಾಂಡ, ಟಾಂಗನೀಕ ಮತ್ತು ಜಾಂಜೀಬಾರಗಳು. ಈ ಪ್ರತಿಯೊಂದು ಪ್ರದೇಶದಲ್ಲೂ ಆಫ್ರಿಕದ ಮೂಲನಿವಾಸಿಗಳಾದ ನೀಗ್ರೋ ಜನರು ಬಹುಸಂಖ್ಯಾಕರು. ಜನಸಂಖ್ಯೆಯ ಪ್ರಮಾಣದಲ್ಲಿ ಹಿಂದೀಯರು ಹೆಚ್ಚು ಕಡಿಮೆ ದ್ವಿತೀಯ ಸ್ಥಾನವನ್ನು ಪಡೆದಿದ್ದಾರೆ. ಯುರೋಪಿಯನ್ನರು ಎಲ್ಲೆಲ್ಲೂ ಅತ್ಯಲ್ಪಸಂಖ್ಯಾಕರಾಗಿದ್ದಾರೆ; ಆದರೂ ಆಳಿಕೆ ಅವರದು, ಅಧಿಕಾರ ಅವರದು, ಐಶ್ವರ್ಯ ಅವರದು!

ಜನಸಂಖ್ಯೆಯ ಪಟ್ಟಿ

	ಕೆನ್ಯಾ	ಯುಗಾಂಡ	ಟಾಂಗನೀಕ	ಜಾಂಜೀಬಾರ
ಯುರೋಪಿಯನ್ನರು	೩೨೦೫೪	೨೫೮೩	೧೬೧೧೨	೨೫೦
ಹಿಂದೀಯರು	೬೧೦೦೦	೨೬೦೦೦	೪೮೫೦೦	೧೬೦೦೦
ಏಶಿಯನ್ನರು	೬೧೧೨೭	೨೬೦೦೦	೨೮೧೨೪	
ಅರಬರು	೧೯೦೧೨	೫೧೫		೪೪೦೦೦
ಆಫ್ರಿಕನ್ನರು	೪೮೩೫೫೪೪	೪೬೦೪೦೬೪	೫೮೪೭೬೬೯	೨೦೦೦೦೦

ಐತಿಹಾಸಿಕ ತಳಹದಿ

ಹಿಂದೀಯರು ಬಹು ಪ್ರಾಚೀನಕಾಲದಲ್ಲೇ ಪೂರ್ವ ಆಫ್ರಿಕದಲ್ಲಿ ನೆಲೆಸಿದರೆಂಬುದಕ್ಕೆ ಐತಿಹಾಸಿಕ ಆಧಾರವಿದೆ. ಒಬ್ಬ ರೋಮನಗರದ ಇತಿಹಾಸಜ್ಞನು ಜಾಂಜೀಬಾರಿನಲ್ಲಿ ಹಿಂದೀಯರಿರುವರೆಂಬುದನ್ನು ಉಲ್ಲೇಖಿಸಿದ್ದಾನೆಂದು ತಿಳಿದುಬರುತ್ತದೆ. ಜಾಂಜೀಬಾರನ್ನು ಪರ್ಶಿಯನ್ನರು ಆಳುತ್ತಿದ್ದರು. ಅನಂತರ ೧೬ ನೇಯ ಶತಮಾನದಲ್ಲಿ ಅವರನ್ನು ಪೋರ್ಚುಗೀಸರು ಸೋಲಿಸಿ ಆ ನಡುಗಡ್ಡೆಯನ್ನು ವಶಪಡಿಸಿಕೊಂಡರು.

ಅದಾದ ಮೇಲೆ ೧೮೩೭ರಲ್ಲಿ ಕೆನ್ಯಾವನ್ನು ಗೆದ್ದು ಜಾಂಜೀಬಾರನ್ನು ಪೋರ್ಚುಗೀಸರಿಂದ ಕಸಿದುಕೊಂಡು ಆಳಲುಪಕ್ರಮಿಸಿದ ಅರಬರು ಹಿಂದೀಯರು ಅಲ್ಲಿ ಬಂದು ನೆಲಸುವುದಕ್ಕೆ ಬಹಳ ಪ್ರೋತ್ಸಾಹವಿತ್ತರು. ಹೀಗೆ ಸುಮಾರು ೨೦೦೦ ವರ್ಷಗಳಿಂದ ಅಲ್ಲಿಯ ಹಿಂದೀಯರು ಪೂರ್ವ ಆಫ್ರಿಕವನ್ನು ತಮ್ಮ ನಿವಾಸವನ್ನಾಗಿ ಮಾಡಿಕೊಂಡಿದ್ದಾರೆ.

ನಾಡಿನ ಸಂಪದಭಿವೃದ್ಧಿಗಾಗಿ ಹಿಂದೀಯರ ದುಡಿಮೆ

ಅರಬರ ಆಳಿಕೆ ಕ್ರಮೇಣ ಸಡಿಲವಾಗುತ್ತ ಬಂತು. ಆಗಲೆ ಕೆನ್ಯಾವನ್ನು ಬ್ರಿಟನ್ನೂ ಟಾಂಗನೀಕವನ್ನು ಜರ್ಮನಿಯೂ ಆಕ್ರಮಿಸಿದವು. ಆಗ ಜಾಂಜೀಬಾರಿನ ಸುಲ್ತಾನನಿಗೆ ಸರ್ ಥೇರಿಯ ತೋಪನನೆಂಬ ಹಿಂದೀಯ ಖೋಜಾ ವ್ಯಾಪಾರಿಯು ಮಂತ್ರಿಯಾಗಿದ್ದನು. ಅವನು ಬ್ರಿಟಿಶರಿಗೆ ಗುಲಾಮರ ವ್ಯಾಪಾರವನ್ನು ನಿಲ್ಲಿಸುವ ಪ್ರಯತ್ನದಲ್ಲಿ ಬಹಳ ಸಹಾಯ ಮಾಡಿದನು. ಎರಡನೆಯ ಗಣ್ಯಹಿಂದೀಯನೆಂದರೆ ಜಯರಾಮ ಶಿವಜಿ ಎಂಬವನು; ಅವನೊಬ್ಬ ಭಾಟಿಯದ ವ್ಯಾಪಾರಿ. ಅತನು ಸುಲ್ತಾನನ ಸಲಹೆಗಾರನಾಗಿದ್ದನು; ಮತ್ತು ಸುಲ್ತಾನನ ರಾಜ್ಯದಲ್ಲಿ ಆಯಾತದ ಮೇಲೆ ಸುಂಕ ವಸೂಲ ಮಾಡುವ ಅಧಿಕಾರ ಪಡೆದಿದ್ದನು. ಅಲ್ಲದೆ ಸುಲ್ತಾನನಿಗೆ ಹೇರಳವಾಗಿ ಸಾಲಕೊಟ್ಟು ಪ್ರತಿಫಲವಾಗಿ ಅನೇಕ ಸವಲತ್ತುಗಳನ್ನು ಪಡೆದಿದ್ದನು. ಕ್ರಮೇಣ ಬ್ರಿಟಿಶರ ಕೈವಾಡ ಹೆಚ್ಚಾಗಿ ೧೮೯೦ರಲ್ಲಿ ಜಾಂಜೀಬಾರೂ ಬ್ರಿಟಿಶರ ಕೈಸೇರಿತು. ಜಾಂಜೀಬಾರಿಗೂ ಹಿಂದುಸ್ತಾನಕ್ಕೂ ವ್ಯಾಪಾರ ವ್ಯವಹಾರಗಳಲ್ಲಿ ನಿಕಟವಾದ ಸಂಬಂಧವಿದ್ದುದರಿಂದ ಹಿಂದೀಯ ರೂಪಾಯಿಗಳನ್ನೇ ಅಲ್ಲಿ ಚಲಾವಣೆಗೆ ತರಲಾಯಿತು. ಆ ಕಾಲದಲ್ಲಿ ಜರ್ಮನರ ಅಧೀನದಲ್ಲಿದ್ದ ಟಾಂಗನೀಕದ ಹಿಂದೀಯರು ಬಹಳ ಅಭಿವೃದ್ಧಿ ಹೊಂದಿದ್ದರು. ಮತ್ತು ಮೂಲನಿವಾಸಿಗಳಿಂದಲೂ ಜರ್ಮನರಿಂದಲೂ ಮರ್ಯಾದೆಯಿಂದ ಕಾಣಲ್ಪಡುತ್ತಿದ್ದರು. ೧೯೧೧—೩೦ರ ವರೆಗೆ ಹಿಂದೀಯರ ವ್ಯಾಪಾರೋದ್ಯಮಗಳಲ್ಲಿ ಅಷ್ಟು ಊರ್ಜಿತಾವಸ್ಥೆಯಿರಲಿಲ್ಲ. ೧೯೩೭ರಲ್ಲಿ ಬ್ರಿಟಿಶ ಕಂಪನಿಗಳು ಹಿಂದೀಯ ಲವಂಗ ವ್ಯಾಪಾರಿಗಳ ಮೇಲೆ ಸ್ಪರ್ಧೆ ನಡೆಸಬಂದರು. ಪಾರ್ಲಿಮೆಂಟಿನಲ್ಲಿ ಹಿಂದೀ ವ್ಯಾಪಾರಿಗಳ ವಿರುದ್ಧ ಕಾಯಿದೆಯೊಂದು ಪಾಸಾಯಿತು. ಪೂರ್ವ ಆಫ್ರಿಕವೇ ಸ್ವಂತದೇಶವೆಂದು ತಿಳಿದು ಅಲ್ಲಿಯ ಸಂಪದಭಿವೃದ್ಧಿಗಾಗಿ ದುಡಿದು ಜನೋಪಕಾರಿಗಳಾಗಿ ಬಾಳಿದ ಹಿಂದೀಯ ವ್ಯಾಪಾರಿಗಳಿಗೆ ಇದರಿಂದ ಬಹಳ ಕೋಪ ಬಂದಿತು. ಅವರೆಲ್ಲರೂ ಒಕ್ಕಟ್ಟಾಗಿ ಬ್ರಿಟಿಶ ದಲ್ಲಾಲರನ್ನು ಬಹಿಷ್ಕರಿಸಿದರು. ಭಾರತದ ಕಾಂಗ್ರೆಸ್ಸಿಗೆ ಬಿನ್ನವಿಸಿಕೊಳ್ಳಲು ಪಂ. ನೆಹರೂರವರು ಜಾಂಜೀಬಾರಿನ ಲವಂಗವನ್ನು ಬಹಿಷ್ಕರಿಸಲು ಹಿಂದೀಯ ವ್ಯಾಪಾರಿಗಳಿಗೆ ಸಲಹೆಯಿತ್ತರು. ಇದರಿಂದ ಬ್ರಿಟಿಶರು ಹಣ್ಣಾಗಿ ಒಪ್ಪಂದಮಾಡಿಕೊಂಡರು. ಹಿಂದೀಯ ವ್ಯಾಪಾರಿಗಳಿಗೆ ಸುಮಾರು ನೂರಕ್ಕೆ ೮೦ ರಷ್ಟು ಸವಲತ್ತುಗಳು ದೊರೆತವು. ಈಗ ನೂರಕ್ಕೆ ೯೫ ರಷ್ಟು ವ್ಯಾಪಾರೋದ್ಯಮಗಳು ಹಿಂದೀಯರ ಕೈಯಲ್ಲಿವೆ; ಅಲ್ಲದೆ ಅಲ್ಲಿಯ ವೈದ್ಯರು, ಶಿಕ್ಷಕರು, ವಕೀಲರು, ಕಮ್ಮಾರರು, ಕುಂಬಾರರು, ಯಂತ್ರವಿಜ್ಞಾನಿಗಳು, ಮೋಟಾರ ಡ್ರೈವರರು, ಅಂಗಡಿಕಾರರು ಎಲ್ಲರೂ ಹಿಂದೀಯರೇ ಆಗಿದ್ದಾರೆ. ಹಿಂದೀಯರಲ್ಲಿ ಕುಲಭೇದದ ವೈಷಮ್ಯ ಭಾವನೆಯಿಲ್ಲ; ಎಲ್ಲರೂ ಐಕ್ಯದಿಂದ ಬಾಳುತ್ತಿದ್ದಾರೆ. ಪಾಕಿಸ್ತಾನ ಭಾವನೆ ಈಗೀಗ ಕೆಲವರ ಬುದ್ಧಿ ಕೆಡಿಸಿದರೂ ಅದು ಕೇವಲ ತಾತ್ಕಾಲಿಕವೇ ಹೊರತು ರೂಢಮೂಲವಾಗುವಂತಿಲ್ಲ. ಹೀಗೆ ಇಷ್ಟು ದೀರ್ಘಕಾಲ ಪೂರ್ವ ಆಫ್ರಿಕದ ಜೀವನಕ್ಕೆ ಹೊಂದಿಕೊಂಡು ಬಾಳಿ ಅಲ್ಲಿಯವರೇ ಆಗಿರುವ ಹಿಂದೀಯರನ್ನು ಪರಕೀಯರೆಂದು ಬ್ರಿಟಿಶರು ಸಾರುವುದರಲ್ಲಿ ಯಾವ ನ್ಯಾಯವಿದೆ?

ಆಂಗ್ಲ ವ್ಯಾಪಾರಿಗಳ ಮಾತ್ಸರ್ಯ

ಮೇಲೆ ವಿವರಿಸಿದಂತೆ ಪೂರ್ವ ಆಫ್ರಿಕದ ವಾಣಿಜ್ಯ ಕ್ಷೇತ್ರದಲ್ಲಿ ಹಿಂದೀಯರು ಬಹಳ ಪ್ರಗತಿ ಪ್ರತಿಷ್ಠೆಗಳನ್ನು ಹೊಂದಿರುವುದನ್ನು ನೋಡಿ ಆಂಗ್ಲರಿಗೆ ಅಸೂಯೆ ಉಂಟಾಗಿದೆ. ಇಲ್ಲಿಯ ವರೆಗೆ ಸಾಮ್ರಾಜ್ಯವಾದಿತ್ವದ ಸ್ವಚ್ಛಂದ ಕಾರ್ಯಗಳಿಗೆ ಹಿಂದುಸ್ತಾನವೇ ಕ್ಷೇತ್ರವಾಗಿತ್ತು. ಈಗ ಅದು ಅವರ ಕೈತಪ್ಪಿ ಹೋಗಲಿರುವದರಿಂದ ಬ್ರಿಟಿಶ ಸೇನಾನಿಗಳು ಪೂರ್ವ ಆಫ್ರಿಕದಲ್ಲಿ ತಳವೂರಲು ಸನ್ನಾಹ ನಡೆಸಿದ್ದಾರೆ. ತಮ್ಮನ್ನು ಅಲ್ಲಿಂದ ಓಡಿಸಲು ಬ್ರಿಟಿಶರು ನಾನಾ ವಿಧವಾದ ಉಪಾಯಗಳನ್ನು ಕೈಗೊಳ್ಳುತ್ತಿರುವುದರಿಂದಲೇ ಹಿಂದೀಯರು ಭಾರತದ ನೆರವನ್ನು ಇಂದು ಕೋರುತ್ತಿದ್ದಾರೆ.

ಹಿಂದೀಯರ ಪ್ರಗತಿಯನ್ನು ತಡೆಯಲು ಪಾಸಾದ ಕಾಯಿದೆಗಳು

ಹಿಂದೀ ನಿವಾಸಿಗಳನ್ನೂ ಮೂಲ ನಿವಾಸಿಗಳನ್ನೂ ಪೀಡಿಸಿ ಮೂಲೆಗೊತ್ತುವುದರ ಸಲುವಾಗಿ ಸರಕಾರ ಅನೇಕ ಕಾಯಿದೆಗಳನ್ನು ಪಾಸು ಮಾಡಿದೆ. ಅವುಗಳಲ್ಲಿ ಇನ್ನು ಮುಂದೆ ಭಾರತೀಯರು ಪೂರ್ವ ಆಫ್ರಿಕದೊಳಗೆ ಬಂದು ನೆಲಸದಂತೆ ಮಾಡುವ ಕಾಯಿದೆ ಮತ್ತು ಬಹುಸಂಖ್ಯಾಕರಾಗಿರುವ ಮೂಲ ನಿವಾಸಿಗಳನ್ನೂ ಹಿಂದೀಯರನ್ನೂ ಶಾಶ್ವತವಾಗಿ ಆಡಳಿತದ ಪ್ರಾತಿನಿಧಿಕ ಸಭೆಗಳಲ್ಲಿ ಅಲ್ಪ ಸಂಖ್ಯಾಕರನ್ನಾಗಿ ಇಡುವ ಕಾಯಿದೆ—ಈ ಎರಡು ಬಹು ಮುಖ್ಯವಾದವು. ಕೆನ್ಯಾ, ಯುಗಾಂಡ, ಟಾಂಗನೀಕ ಮತ್ತು ಜಾಂಜೀಬಾರುಗಳ ಒಟ್ಟು ಕ್ಷೇತ್ರವಿಸ್ತಾರ ೬,೮೫,೯೬೦ ಚದರ ಮೈಲುಗಳಿದ್ದು ಜನವಸತಿಗೆ ಬೇಕಾದಷ್ಟು ಸ್ಥಳವಿದೆ. ಆದರೆ ಇದ್ದ ಸ್ಥಳವೆಲ್ಲವನ್ನೂ ಬ್ರಿಟಿಶರು ಬಂದು ನೆಲಸುವುದಕ್ಕಾಗಿ ಕಾಯ್ದಿಡಬೇಕೆಂದು ಹಿಂದೀಯರ ಮೇಲೆ ಮೇಲಿನ ನಿರ್ಬಂಧವನ್ನು ಹಾಕಲಾಗಿದೆ.

ಅತ್ಯಲ್ಪ ಸಂಖ್ಯಾಕರೂ ಬಹಳ ಹಿಂದೆ ಅಲ್ಲಿಗೆ ಬಂದವರೂ ಸುಖಲೋಲುಪರಾಗಿ ಹಿಂದೀಯರ ಮತ್ತು ಆಫ್ರಿಕನ್ನರ ದುಡಿತದಿಂದ ಬಾಳುತ್ತಿರುವವರೂ ಆದ ಬಿಳಿಯರ ಈ ಮತ್ಸರಭಾವನೆಗೆ ಸ್ಥಳೀಯರೆನಿಸಿದ ಬಹುಸಂಖ್ಯಾಕರಾದ ಹಿಂದೀಯರೂ ಆಫ್ರಿಕನರೂ ಬಲಿಯಾಗುವುದನ್ನು ಸಹಿಸಿ ಸುಮ್ಮನಿರುವುದು ಧೀರತ್ವದ ಲಕ್ಷಣವೇ? ೧೯೩೩ರಲ್ಲಿ ಪೂ. ಆಫ್ರಿಕ ಶಾಸನ ಸಭೆಗಳಲ್ಲಿ ಬಹುಮತ ಪಡೆದ, ಹಿಂದೀಯರ ವಿರುದ್ಧ ತಂದ ಮೇಲೆ ಹೇಳಿದ ಠರಾವು ಭಾರತ ಸರಕಾರದ ಮಧ್ಯಸ್ಥಿಕೆಯಿಂದ ಕಾಯಿದೆಯಾಗಿ ಪಾಸಾಗಲಿಲ್ಲ. ಆಗಲೇ ಅತೃಪ್ತರಾದ ಬಿಳಿಯರು ಹೊಟ್ಟೆಕಿಚ್ಚಿನಿಂದ ಕುದಿದು ಕುದಿದು ೧೯೪೪ರಲ್ಲಿ ಕೆನ್ಯಾದ ರಕ್ಷಣಾಶಾಸನಗಳನ್ನು ತಯಾರಿಸುವಲ್ಲಿ ಸ್ಥಳೀಯರಲ್ಲದವರ ಪ್ರವೇಶವನ್ನು ನಿರ್ಬಂಧಿಸುವ ಕಾಯಿದೆಯನ್ನು ಪಾಸು ಮಾಡಿಕೊಳ್ಳಲು ಶಕ್ತರಾದರು. ಅದೇ ತರಹದ ಕಾಯಿದೆಗಳು ಯುಗಾಂಡ ಟಾಂಗನೀಕಗಳಲ್ಲೂ ಪಾಸಾದವು. ಮೊದಲು ಇವು ಕೇವಲ ಯುದ್ಧಕಾಲೀನ ಶಾಸನಗಳೆಂದೇ ಎಲ್ಲರೂ ತಿಳಿದರು. ಆದರೆ ೧೯೪೬ರಲ್ಲಿ ಎಲ್ಲ ಪ್ರದೇಶಗಳ ಶಾಸನ ಸಭೆಗಳಲ್ಲೂ ಉಕ್ತಶಾಸನಗಳು ಸಾರ್ವಕಾಲಿಕವೆಂದು ಮೂಡಲು ಠರಾವುಗಳು ಬಂದಿವೆ. ಎಲ್ಲೆಲ್ಲೂ ಈ ಠರಾವುಗಳ ವಿರುದ್ಧ ಟೀಕೆ ಹೊರಟಿದ್ದರಿಂದ ಅದನ್ನು ಸುಧಾರಿಸುವ ಯತ್ನ ನಡೆದಿದೆ; ಆದರೆ ಆ ಸುಧಾರಣೆಗಳಾವುವೂ ಹಿಂದೀಯರ ಬೇಡಿಕೆಗಳನ್ನು ಪೂರೈಸಲು ಸಮರ್ಥವಾದವುಗಳಲ್ಲ.

ಇದಲ್ಲದೆ ಪ್ರಾಂತದಲ್ಲಿ ನಿರುದ್ಯೋಗ ಹೆಚ್ಚುತ್ತಿದೆಯೆಂಬ ಹೆದರಿಕೆ ಹಾಕಿ ಅನ್ಯರು ಬರಬಾರದೆಂದು ತಡೆಯುತ್ತಿದ್ದು ಯುದ್ಧಕಾಲದಲ್ಲಿ ಕೆಲಸಕ್ಕಿಟ್ಟುಕೊಳ್ಳಲು ಬಂದಿದ್ದ ೨೫೦೦೦ ಬಿಳಿಯರು ಅಲ್ಲೇ ಉಳಿಯಲು ಸರಕಾರ ಅಪ್ಪಣೆಯಿತ್ತಿದೆ. ಉಳಿಯಲು ಜಾಗವಿಲ್ಲವೆಂದೂ ನಿರುದ್ಯೋಗ ಹೆಚ್ಚಿದೆಯೆಂದೂ ಹೇಳುವುದಲ್ಲದೆ ಮೂಲ ನಿವಾಸಿಗಳ ಹಿತರಕ್ಷಣೆಗೋಸ್ಕರವಾಗಿಯೂ ಅನ್ಯರು (ಅರ್ಥಾತ್ ಹಿಂದೀಯರು) ಒಳಗೆ ಪ್ರವೇಶಮಾಡಬಾರದೆಂದು ಯೂರೋಪಿಯನ್ನರು ಹಗಲಿರುಳೂ ಪ್ರಚಾರ ಮಾಡತೊಡಗಿದ್ದಾರೆ. ಮೂಲ ನಿವಾಸಿಗಳ ಹಿತರಕ್ಷಣೆಗಾಗಿ ಹೊಸಬರು ಬರದಂತೆ ತಡೆಯಬೇಕೆಂಬ ವಾದದ ಮೂಲಪುರುಷನಾದ ನಾರ್ಥಿಯೆಂಬ ಗವರ್ನರನ ಚಾಣಾಕ್ಷ ತಂತ್ರವು ಫಲಿಸಿಯೇಬಿಟ್ಟಿತು. ಪೂರ್ವ ಆಫ್ರಿಕದ ಸಾರ್ವತ್ರಿಕ ಅಭಿವೃದ್ಧಿಗೆ ಹಿಂದೀಯರ ದುಡಿಮೆಯೇ ಕಾರಣವೆಂದು ವಿನ್‌ಸ್ಟನ್ ಚರ್ಚಿಲ್ಲರೂ ಕೂಡ ಒಪ್ಪಿಕೊಂಡಿದ್ದಾರೆ. ಕೆನ್ಯಾ ಯುಗಾಂಡ ರೈಲು ರಸ್ತೆಯ ನಿರ್ಮಾಣದಲ್ಲಿ ೮೦ ಸಾವಿರ ಹಿಂದೀ ಕೂಲಿಕಾರರು ದುಡಿದರೆಂಬುದು ಮೇಲಿನ ಮಾತಿಗೆ ಸಮರ್ಥ ನಿದರ್ಶನವಲ್ಲವೆ? ಹೀಗಿದ್ದರೂ ಶಾಸನ ಸಭೆಗಳಲ್ಲಿ ಯುರೋಪಿಯನ್ನರ ಬಹುಮತವನ್ನು ಕಾಯ್ದುಕೊಳ್ಳುವವರ ಸಲುವಾಗಿ ಘಟನಾತ್ಮಕ ಬದಲಾವಣೆಗಳನ್ನು ಮಾಡಲು ಸಿದ್ಧತೆಗಳು ನಡೆಯುತ್ತಿವೆ. ಕಾಯಿದೆಯಮೂಲಕ ಬಹುಸಂಖ್ಯಾಕರನ್ನು ಅಲ್ಪಸಂಖ್ಯಾಕರಂತೆ ನಡೆಸಿಕೊಳ್ಳುವ ದುರುಪಾಯದ ಕಾರ್ಯವನ್ನು ಎಷ್ಟು ಬಣ್ಣಿಸಿದರೂ ಸಾಲದು. ಮೂಲನಿವಾಸಿಗಳಲ್ಲಿ ಬಹಳ ಜನರು ಅವಿದ್ಯಾವಂತರು. ಕಾಯಿದೆಗಳ ಮೂಲಕ ಬಹುಕಾಲದಿಂದ ಅವರ ಆಸ್ತಿಗಳನ್ನು ಬಿಳಿಯರು ವಶಪಡಿಸಿಕೊಳ್ಳುತ್ತ ಬಂದರು. ಹೆಚ್ಚಿನ ಆಸ್ತಿಯುಳ್ಳವರು ಮಾತ್ರ ಮತದಾರರಾಗಬಲ್ಲರೆಂದು ವಿಧಿಸಿ ಅವರಲ್ಲಿ ಬಹುಸಂಖ್ಯಾಕರಿಗೆ ಮತಕೊಡುವಹಕ್ಕೇ ಇಲ್ಲದಂತೆ ಮಾಡಿದರು. ಅಷ್ಟಲ್ಲದಿದ್ದರೂ ಅದೇರೀತಿಯಿಂದ ಶಾಸನಸಭೆಗಳಲ್ಲಿ ಹಿಂದೀಯ ಪ್ರತಿನಿಧಿಗಳ ಸಂಖ್ಯೆಯನ್ನು ಬಹಳ ಕಡಿಮೆಮಾಡಿ ಸರಕಾರದಲ್ಲಿ ತಾವೇ ತಾವಾಗಿ ಸ್ವಚ್ಛಂದ ಕಾರಭಾರನಡೆಸಲು ಕಳಕಳಿ ಹಾಕುತ್ತ ಬಂದಿದ್ದಾರೆ.

—೧೬ನೇ ಪುಟಕ್ಕೆ

(ಹೊಟ್ಟು) ತವಡಿನ ಉಪಯೋಗ

ಬರೆದವರು– ಆಂಜನೇಯ ಗುಪ್ತ B. A.

(The uses of Bran)

ಆಧುನಿಕ ಮನುಷ್ಯನು ಉಪಯೋಗಿಸದೆ ಬಿಟ್ಟಿರುವ, ದೇಹದ ಬೆಳವಣಿಗೆಗೆ ಬೇಕಾದ, ಅತಿ ಮುಖ್ಯ ಪದಾರ್ಥಗಳಲ್ಲಿ ತವಡು ಒಂದು. ಅಕ್ಕಿಯನ್ನು ಗಿರಣಿಯಲ್ಲಿ "ಪಾಲಿಷ್" ಹಾಕಿಸುವುದರಿಂದ "ವಿಟಮಿನ್" ಯುಕ್ತವಾದ ತವಡು ಬೇರೆಯಾಗುತ್ತದೆ. ಹಾಗೆಯೇ, ಗೋದಿಯಲ್ಲೂ ವಿಟಮಿನ್‌ಯುಕ್ತ ತವಡು ಇರುತ್ತದೆ. ತವಡನ್ನು ತೆಗೆದು, ಕೇವಲ ಹಿಟ್ಟನ್ನು ಉಪಯೋಗ ಮಾಡಿದರೆ, ಅತ್ಯಾವಶ್ಯಕವಾಗಿ ಬೇಕಾದ "ವಿಟಮಿನ್" ದೇಹಕ್ಕೆ ಸಿಗುವದಿಲ್ಲ. ತವಡು ಸಹಿತ ಉಪಯೋಗಿಸಿದರೆ, ತಿಂದ ಆಹಾರವು ಸುಲಭವಾಗಿ ಜೀರ್ಣವಾಗುತ್ತದೆ ಮತ್ತು ದೇಹಕ್ಕೂ ಒಳ್ಳೆಯದಾಗುತ್ತದೆ.

ಉತ್ತರ ಹಿಂದುಸ್ತಾನದವರು, ದಕ್ಷಿಣದವರಿಗಿಂತ ಹೆಚ್ಚಾಗಿ ಗೋದಿ ಉಪಯೋಗಿಸುತ್ತಾರೆ. ಆದರೆ ಭಾರತದ ಹಲವತ್ತು ಕೋಟಿ ಜನರೂ ತವಡನ್ನು ಚೆಲ್ಲದೆ ಪೂರ್ತಿ ಧಾನ್ಯವನ್ನು ಉಪಯೋಗಿಸಿದರೆ ಟನ್ನುಗಟ್ಲೆ ಆಹಾರವು ಉಳಿಯುತ್ತದೆ. ನಲವತ್ತು ಕೋಟಿ ಜನರು ಪ್ರತಿವಾರ ಒಂದು ಹೊತ್ತು ಉಪವಾಸ ಮಾಡಿದರೆ ಲಕ್ಷಾಂತರ ಜನರಿಗೆ ಆಹಾರ ಸಿಕ್ಕುವಂತಾಗುತ್ತದೆ ಮತ್ತು ಆಹಾರಕ್ಕಾಗಿ ಉಪಯೋಗಿಸುವ ಯಾವ ಪದಾರ್ಥವನ್ನೂ ಹಾಳು ಮಾಡಬಾರದೆಂದು ಮಹಾತ್ಮರು ಹೇಳಿದ್ದಾರೆ.

ಆಧುನಿಕ ಮನುಷ್ಯನು, ತವಡು ದನಗಳಿಗೆ ಮಾತ್ರ ತಕ್ಕುದು ಎಂದು ತಪ್ಪು ತಿಳಿದಿದ್ದಾನೆ. ಸಾವಿರಾರು ವರ್ಷಗಳಿಂದಲೂ ತವಡು ಉಪಯೋಗದಲ್ಲಿದ್ದಿತು ಮತ್ತು ಪುರಾತನ "ಈಜಿಪ್ತ" ರೋಗಿಗಳೂ ತವಡಿನಿಂದ ಕೂಡಿದ ಧಾನ್ಯಪನ್ನೇ ಉಪಯೋಗಿಸುತ್ತಿದ್ದರೆಂದು "ಗ್ರಾಂಬರ್ಸ" ಎಂಬ ಆಹಾರ ತಜ್ಞನು ಹೇಳಿದ್ದಾನೆ.

ಹಿಂದಿನ ಕಾಲದವರು ತವಡನ್ನು ಪ್ರತ್ಯೇಕ ಆಹಾರವಾಗಿ ಉಪಯೋಗಿಸುತ್ತಿರಲಿಲ್ಲ. ಆದರೆ ಹಿಟ್ಟಿನಿಂದ ಪ್ರತ್ಯೇಕ ಮಾಡದೆ ಹಾಗೆಯೇ ಉಪಯೋಗಿಸುತ್ತಿದ್ದರು. ಹಿಟ್ಟು ಮಾಡುವ, ಪಾಲಿಷ ಹಾಕುವ ಯಂತ್ರಗಳು ಬಂದ ಮೇಲೆ ಹಿಟ್ಟನ್ನು ಬೇರೆ ಮಾಡಿ ಉಪಯೋಗಿಸುವ ದುರಭ್ಯಾಸ ಜನರಲ್ಲಿ ಮನೆಮಾಡಿಕೊಂಡಿದೆ.

ತವಡಿನಲ್ಲಿ ಅರ್ಧಭಾಗ ಸುಲಭವಾಗಿ ಜೀರ್ಣಿಸುವವಸ್ತುಗಳಾದ ಲವಣ ಮತ್ತು "ವಿಟಮಿನ್" ಇದೇ. ಇನ್ನು ಉಳಿದ ಅರ್ಧಭಾಗ "ಸೆಲುಲೋಜ್" ಎಂಬ ವಸ್ತುವಿನಿಂದ ಕೂಡಿದೆ. "ಸೆಲುಲೋಜ್" ದೇಹದ ಬೆಳವಣಿಗೆಗೆ ಸಹಾಯ ಮಾಡದಿದ್ದರೂ ಕಾಲಕ್ಕೆ ಸರಿಯಾಗಿ ಮಲಪ್ರವೃತ್ತಿಯಾಗಲು ಸಹಾಯ ಮಾಡುತ್ತದೆ. ಈ ವಸ್ತು ದೇಹಕ್ಕೆ ಅತ್ಯಾವಶ್ಯಕ.

ಹತ್ತಿಯಲ್ಲಿ "ಸೆಲುಲೋಸ್" ತುಂಬಾ ಇದೆ. ಆದರೆ ಹತ್ತಿಯನ್ನು ಮನುಷ್ಯನು ತಿನ್ನಲಾರ. ಆದರೆ ನಾವು ತಿನ್ನುವ ಧಾನ್ಯದಲ್ಲಿಯೇ, ತವಡಿನ ರೂಪದಲ್ಲಿ "ಸೆಲುಲೋಸ್" ನ್ನು ಪ್ರಕೃತಿದೇವಿಯು ಕೊಟ್ಟಿರುವಾಗ ತವಡನ್ನು ಬಿಸಾಡುವದು ಮೂರ್ಖತನ.

ಪುಸ್ತಕ ಮತ್ತು ವಿಮರ್ಶೆ

ಮೆರೆವಣಿಗೆ

ಬರೆದವರು ಶ್ರೀ ಗೊರೂರು ರಾಮಸ್ವಾಮಯ್ಯಂಗಾರರವರು, ಪ್ರಕಟಿಸಿದವರು ಸತ್ಯಶೋಧನ ಪ್ರಕಟನಾಲಯ ಕೋಟೆ, ಬೆಂಗಳೂರು ನಗರ, ಅವರು; ಪುಟಗಳು ೬೪೪; ಬೆಲೆ ರೂ. ೮—೮—೦

'ನಮ್ಮ ಊರಿನ ರಸಿಕರು' 'ಹಳ್ಳಿಯ ಚಿತ್ರಗಳು', ಮೊದಲಾದ ಗ್ರಂಥಗಳ ಮೂಲಕ ಶ್ರೀ ಗೊರೂರರು ಕನ್ನಡ ರಸಿಕರಿಗೆ ಸುಪರಿಚಿತರಾಗಿದ್ದಾರೆ. ತಿಳಿ ಹಾಸ್ಯದ ಲೇಖನಗಳಲ್ಲಿ ಅವರದು ತಿದ್ದಿದ ಕೈ. ಹಳ್ಳಿಯ ವ್ಯಕ್ತಿಗಳನ್ನು ಗುಣದೋಷ ಸಹಿತವಾಗಿ ಚಿತ್ರಿಸಿದರೂ ಅವು ನಮ್ಮ ಮನಸ್ಸಿನಲ್ಲಿ ಪ್ರಿಯವಾಗಿ, ಆಕರ್ಷಕವಾಗಿ ಉಳಿಯುವಂತೆ ಮಾಡಿರುವುದು ಅವರ ನೈಪುಣ್ಯದ ನಿದರ್ಶನ.

ಪ್ರಸ್ತುತ ಗ್ರಂಥದ ಪೂರ್ವಾರ್ಧ ೪೩೦ ಪುಟಗಳನ್ನಾವರಿಸಿದೆ. ಇಂಗ್ಲರ ಆಳಿಕೆ ಆರಂಭವಾದಂದಿನಿಂದ ಇಡಿಯ ಹಿಂದುಸ್ತಾನದಲ್ಲೆಲ್ಲಾ ವ್ಯಾಪಿಸಿದ ನೌಕರಶಾಹಿಯಿಂದ ಹಳ್ಳಿಗಾಡ ಜನರು ಹೇಗೆ ನಿತ್ಯ ಹಿಂಸೆಯಲ್ಲಿ ನರಳುತ್ತ ಬಂದಿದ್ದಾರೆಂಬುದಕ್ಕೆ ಇಲ್ಲಿ ಬಹಳ ಉದಾಹರಣೆಗಳು ಸಿಗುತ್ತವೆ. ನೌಕರರ ಅಜ್ಞಾನಭಂಡಾರದ ವಿಶ್ವರೂಪ ದರ್ಶನವನ್ನೇ ಅಯ್ಯಂಗಾರರು ಮಾಡಿಸಿದ್ದಾರೆಂದರೆ ಹೆಚ್ಚಿಗೆ ಹೇಳಿದಂತಾಗಲಾರದು. ಅವರ ಕ್ಷುದ್ರತ್ವ, ಸ್ವಾರ್ಥ, ಮಾತ್ಸರ್ಯ, ಅಹಂಕಾರ, ವಂಚನೆ—ಈ ಗುಣರತ್ನಗಳನ್ನು ಪ್ರಕಟಿಗೊಳಿಸುವ ಅವರ ವ್ಯವಹಾರವನ್ನು ಬಹಳ ಸ್ವಾಭಾವಿಕವಾಗಿ ಸೊಗಸಾಗಿ ವರ್ಣಿಸಿದ್ದಾರೆ. "ಅದರಲ್ಲಿಯೂ ಹಳ್ಳಿಗಳಿಗೆ ಬರುವಾಗ ಅವರು ಮೀಸೆಗಳನ್ನು ಹೆಚ್ಚಾಗಿ ಹುರಿ ಮಾಡಿಕೊಂಡು ಜನರನ್ನು ದನಗಳಂತೆ ಅಡ್ಡಿಸಬೇಕೆಂದು ಬರುತ್ತಾರೆ" ಎಂಬ ಮಾತಿಗೆ ಅನೇಕ ದೃಷ್ಟಾಂತಗಳನ್ನು ರಸವತ್ತಾಗಿ ಓದುಗರ ಮುಂದಿಟ್ಟಿದ್ದಾರೆ. ಶಾನುಭೋಗರ ಘಾಟಿತನಕ್ಕಂತೂ ಮಿತಿಯೇ ಇಲ್ಲ. "ಅಮಲ್ದಾರರು ವಾಯಿದೆ ಕೊಡದೆ ಹಸುವನ್ನು ಜಪ್ತಿಯನ್ನೇ ಮಾಡಿ ಪಟೇಲನ ವಶದಲ್ಲಿ ನಿಲ್ಲಿಸಿದರೆ, ರಾತ್ರಿ ಆ ಹಸುವನ್ನು ಹಾರಿಸಿ, ಅದರ ಜಾಗದಲ್ಲಿ ಗೂನು ಬೆನ್ನಿನ ಹೊಟ್ಟೆ ಬೆನ್ನು ಒಂದಾಗಿ ಸೇರಿ ಚಕ್ಕಳವಾದ ಬಲರಾಮುಗೋವನ್ನು ನಿಲ್ಲಿಸುತ್ತಾರೆ" ಇತ್ಯಾದಿ.

ಒಂದು ವಿಧದ ಕುಚೋದ್ಯ (Mischief) ಹೊಳೆಯುವ ಹಾಸ್ಯದ ಮಿರುಗು ಮಾತು ಗ್ರಂಥಕರ್ತರದೊಂದು ವೈಶಿಷ್ಟ್ಯ. ಅಲ್ಲಿಯೂ ಸ್ವಾಭಾವಿಕತೆಯನ್ನು ಬಿಡದೆ ವರ್ಣಿಸಿರುವುದು ಮತ್ತಷ್ಟು ಚಮತ್ಕಾರಕಾರಿಯಾಗಿದೆ. "ಒಬ್ಬ ಎಲೆ ಅಡಿಕೆ ಹಾಕಿಕೊಂಡು ಹೊಗೆಸೊಪ್ಪು ಅಗಿಯುತ್ತಿರುವವನು ಪಿತೃಗಳಿಗೆ ಪಿಂಡವನ್ನು ಕೊಡುವ ವೀರಾಸನದಲ್ಲಿ ಕುಳಿತು ತುಟಿಯ ಮೇಲೆ ಎರಡು ಬೆರಳಿಟ್ಟು ಅದರ ನಡುವಿನಿಂದ ಕೆಂಪು ರಸವನ್ನು ಪಿಚಕಾರಿಯಿಂದ ಬಿಡುವಂತೆ ಹೊರಕ್ಕೆ ಬಿಡುತ್ತಾನೆ.', ಹಳ್ಳಿಯ ವಿದ್ವಾಂಸರನ್ನು 'ಮಿತಾಕ್ಷರಿ (ಎಂದರೆ ಮಿತವಾದ ಅಕ್ಷರಜ್ಞಾನ ಉಳ್ಳವನು) ಹತಾಕ್ಷರಿ (ಕಲಿತದ್ದೆಲ್ಲವನ್ನೂ ಮರೆತು ಬಿಟ್ಟವನು) ಅಕ್ಷರ ಲಂಬಕ (ಅಕ್ಷರವನ್ನು ಎಳೆದೆಳೆದು ಬರೆವವನು) ಅಕ್ಷರ ಹಿಂಸಕ (ಅಕ್ಷರಗಳಿಗೆ ತಲೆ ಕಟ್ಟು, ಜಾಲ ಇತ್ಯಾದಿಗಳಿಲ್ಲದಂತೆ ವಿರೂಪ ಮಾಡಿಬರೆವವನು) ಅಕ್ಷರ ಭಕ್ಷಕ (ಬರೆವಾಗ ಅಕ್ಷರಗಳಲ್ಲಿ ಹಲವನ್ನು ಫಲಾಹಾರ ಮಾಡುವವನು) ಎಂದು ವರ್ಣಿಸಿರುವದು ತಮಾಷೆಯಾಗಿದೆ. "ಅಮಲ್ದಾರರು ಶಾನುಭೋಗ ಸಿದ್ಧಮಾಡಿದ್ದ ರೊಟ್ಟಿಯನ್ನೂ ಸೀಕರಣೆಯನ್ನೂ ಹೊಡೆಯುವುದು, ಶಾನುಭೋಗರು ಹಳ್ಳಿಯಲ್ಲಿ ಪ್ರವಾಸ ಕೈಕೊಂಡಾಗ ಹಳ್ಳಿಗರಿಂದ ವಸ್ತು ಸಂಗ್ರಹ ಮಾಡಿ ಅವಲಕ್ಕಿ ಮೊಸರು ಕತ್ತರಿಸುವುದು—ಇವೆಲ್ಲ ಇಂದಿಗೂ ನಡೆಯುತ್ತಿರುವ ಸಂಗತಿಗಳೇ. ಕೆಳರಾರು ತಪ್ಪಿಗಳಿಂದ ಶಾನುಭೋಗರೂ ಮೇಲಧಿಕಾರಿಗಳೂ ಪರಸ್ಪರರ ಲಾಭಕ್ಕಾಗಿ ರೈತರನ್ನು ಹಿಂಡುವುದೂ ಮಾಮೂಲಿನ ವಿಷಯವೇ. "ಬೇದಿಫೋ" ದಲ್ಲಿ ನೌಕರರು ಪ್ರದರ್ಶಿಸಿದ ಅಜ್ಞಾನ ಅಪಾಸ್ತವವಲ್ಲ. ಸರಕಾರ ಹಳ್ಳಿಗರ ಉದ್ಧಾರದ ಬಗ್ಗೆ ಕಾಗದದ ಮೂಲಕ ಅಧಿಕಾರಿಗಳಿಗೆ ಎಚ್ಚರ ಕೊಡಲಿ ಅವರು ಹೀಲೆ ಹೇಳಿದಂತೆ ಪರಿಸ್ಥಿತಿಯ ಅರಿವಿಲ್ಲದೆ ಅನುಭವ ದಾರಿದ್ರ್ಯದಿಂದ ಅಪನ್ಯಯ ಮಾಡಿ ಹಳ್ಳಿಗರಿಗೆ ತ್ರಾಸ ಕೊಟ್ಟು ಮೇಲಿನವರಿಗೆ ಒಂದು ಉದ್ದವಾದ 'ರಿಪೋರ್ಟ್, ಬರೆದು ಕಳುಹಿಸಿ ಅವರ ಶಿಫಾರಸು ಪಡೆಯುವುದನ್ನು ಇಂದಿಗೂ ಕಾಣಬಹುದಾಗಿದೆ.

ಅದಲ್ಲದೆ ಸರಕಾರೀ ನೌಕರರ ಧರ್ಮಪತ್ನಿಯರು ಸ್ವಪ್ರತಿಷ್ಠೆಗಾಗಿ ಒದ್ದಾಡುವದನ್ನು ಸಹ ಬಹು ಸರಸವಾಗಿ ಚಿತ್ರಿಸಲಾಗಿದೆ. ಇದು ಇಂದು ಸರ್ವಸಾಧಾರಣವಾಗಿ ಬಿಟ್ಟಿದೆ. ಅನುಭವ, ಜ್ಞಾನ, ವಾಕ್ಚಾತುರ್ಯ ಒಂದೂ ಇಲ್ಲದಿದ್ದರೂ ಕೇವಲ ದೊಡ್ಡ ನೌಕರರ ಹೆಂಡತಿಯರೆಂಬ ಕಾರಣದಿಂದ ಮಹಿಳೆಯರ ಸಭೆ ಸಮ್ಮೇಲನಗಳ ಅಧ್ಯಕ್ಷಪಟ್ಟವನ್ನೇರಿ ಏನಾದರೂ ಹೇಳಿ ಯಾರಾದರೂ ಏನಾದರೂ ಅಂದರೆ ಕೋಪಿಸಿಕೊಂಡು ನಡೆವ ಸತ್ಯಭಾಮೆಯರ ಸ್ವಭಾವ ಪರಿಚಯವನ್ನು ಅಯ್ಯಂಗಾರರು ಚೆನ್ನಾಗಿ ಮಾಡಿಕೊಟ್ಟಿದ್ದಾರೆ. ಇನ್ನು ಈ ಮೇಲು ಕೆಳಗಿನ ನೌಕರರ ಪತ್ನಿಯರಲ್ಲಿ ಮೇಲು ಕೀಳು ಭಾವನೆಗಳಿಂದ ಮತ್ಸರ ಉಂಟಾಗಿ ತನ್ಮೂಲಕ ಕೆಳ ನೌಕರನಿಗೆ ಫಜೀತಿಯುಂಟಾಗುವುದಕ್ಕೂ ಒಳ್ಳೆಯ ಉದಾಹರಣೆಗಳನ್ನು ಕೊಟ್ಟಿದ್ದಾರೆ; ಮಾನವನ ಮನಸ್ಸಿನ ವಿವಿಧಮುಖದ ಸಣ್ಣತನವನ್ನು ಅಧಿಕಾರಿ ವರ್ಗದವರಲ್ಲಿ ಹೇಗೆ ಸ್ಪಷ್ಟವಾಗಿ ಕಾಣಬಹುದೆಂಬದನ್ನು ತೋರಿಸಿದ್ದಾರೆ.

ಹಳ್ಳಿಯ ಶಾಲೆಯ ಮಾದರಿಯೊಂದನ್ನು ವಿನೋದವಾಗಿ ವರ್ಣಿಸಿದ್ದಾರೆ. ಹಳ್ಳಿಗಳಲ್ಲಿ ಅಂತಹ ಶಾಲೆಗಳು ಪ್ರತ್ಯಕ್ಷ ನೋಡಸಿಗುತ್ತವೆ. ಇಂದಿನ ಸರಕಾರ ಮತ್ತು ಶಿಕ್ಷಣಪ್ರವರ್ತಕರು ಅಯ್ಯಂಗಾರರು ವಿವರವಾಗಿ ಕೊಟ್ಟ ವರದಿಯಿಂದ ನಿಜಸ್ಥಿತಿಯನ್ನು ಅರಿತುಕೊಳ್ಳಲು ಪ್ರಯತ್ನಪಡಬಹುದಾಗಿದೆ. ತಿಪ್ಪಯ್ಯ ಉಪಾಧ್ಯಾಯ ಘಾಟಿತನವನ್ನು ಇನಸ್ಪೆಕ್ಟರರು ಮೆಚ್ಚಿದಂತೆ ಎಲ್ಲ ರಸಿಕರೂ ಮೆಚ್ಚಬಹುದಾಗಿದೆ; ಆ 'ಅಸಲ್ ಕೊರವು' 'ಕನ್ನೋಜಿ' ಯ ಚಿತ್ರ ಬಹಳ ಚೆನ್ನಾಗಿದೆ.

ಇಷ್ಟಲ್ಲದೆ ಗೊರೂರರು ಆಧುನಿಕ ನಾಗರಿಕತೆಯ ಹಲವಾರು ದುರ್ವ್ಯಾಮೋಹಗಳನ್ನು ಸರಸವಾಗಿ ಟೀಕಿಸಿದ್ದಾರೆ. ಹೆಂಗಸರ ಹಿಂದಿಯ ಹುಚ್ಚು, ಮಂತ್ರಗಳು ಪುರೋಹಿತರಿಗೆ ಕಂಠಸ್ಥವಿರದೆ ಗ್ರಂಥಸ್ಥವಾಗಿರುವುದು ಇವುಗಳಿಗೆ ವಿನೋದಕರವಾದ ಆದರೆ ಕರ್ತವ್ಯೋದ್ಬೋಧಕವಾದ ದೃಷ್ಟಾಂತಗಳನ್ನು ಕೊಡಲಾಗಿದೆ. ಇದರ ಜೊತೆಗೆ ಸನಾತನಿಗಳ ವಿಧವಾವಿವಾಹವಿರೋಧ, ವಿಷಮ ವಿವಾಹ ಪುರಸ್ಕಾರ ಮೊದಲಾದ ಅಂಧಾನುಕರಣ ಬುದ್ಧಿಯನ್ನು ಟೀಕೆ ಮಾಡಿದ ಸನ್ನಿವೇಶಗಳೂ ಬಂದಿವೆ. ಒಟ್ಟಿನಮೇಲೆ ಉತ್ತರಭಾಗವು ಸಹೃದಯರಿಗೆ ಆಹ್ಲಾದಕರವಾಗಿದೆಯೆನ್ನಲು ಅಭ್ಯಂತರವಿಲ್ಲ.

ಆದರೆ ಹೆಬ್ಬೊತ್ತಿಗೆ ಬರೆವ ಉತ್ಕಂಠೆಯಿಂದಲೋ ಎಂಬಂತೆ ಬರೆದು ಜೋಡಿಸಿದ ಕಾಂಗ್ರೆಸ್ಸು, ಜೈಲು, ದೇಶಪ್ರೇಮಗಳ ರಗಳೆ ೨ ನೆಯ ಭಾಗವೆಂದು ಕರೆಯಲ್ಪಡುವ ಉತ್ತರಾರ್ಧದಲ್ಲಿ ತುಂಬಿದೆ. ತಮ್ಮ ಸೆರೆಮನೆಯ ಅನುಭವವನ್ನು ಬರೆವ ಆಸೆಯಿದ್ದರೆ ಅಯ್ಯಂಗಾರರು ಅದನ್ನು ಬೇರೆಯೇ ಬರೆದು ಪ್ರಕಟಿಸಬಹುದಿತ್ತು. ಹೆಬ್ಬೊತ್ತಿಗೆ ಬರೆವ 'ಆಸೆಗೆ ಪ್ರಾರ್ಥನೆ' 'ಕೆಸರಿನಲ್ಲಿ ಕಮಲ' ಎಂಬ ಅಧ್ಯಾಯಗಳಲ್ಲಿ ಉದ್ದವಾದ ಪದ್ಯಗಳನ್ನು ಪವಣಿಸಿರುವುದು ಹೆಚ್ಚಿನ ಸಾಕ್ಷಿ. ಕಡೆಗೊಂದು ಇಂಗ್ಲೀಷ ಪದ್ಯವನ್ನು ಕೂಡ ಅನನುವಾದಿತವಾಗಿ ಕೊಟ್ಟಿದೆ. ಅಲ್ಲದೆ ಮೊದಲು ಮಲ್ಲಿಗೆ ಹಳ್ಳಿಯ ತಿಳಿನಗೆಯ ಮಧುರವಾರ್ತೆಗಳನ್ನೋದಿ ಬಳಿಕ ಆ ಹಳ್ಳಿಯನ್ನು ಸಂಪೂರ್ಣವಾಗಿ ಮರೆಯಿಸಿ ಬಿಡುವ ಶುಷ್ಕ ವರದಿಯನ್ನು ಓದುವುದು ಬೇಸರಕ್ಕೆ ಕಾರಣ. ೮॥ ರೂಪಾಯಿಗಳ ತೂಕದ ಪುಸ್ತಕವಿರಬೇಕೆಂಬ ಗುರಿಯನ್ನು ಬಿಟ್ಟು ಮೊದಲ ಭಾಗವಷ್ಟನ್ನೇ ಪ್ರಕಟಿಸಿದ್ದರೆ ೪॥ ರೂಪಾಯಿಗಳದ್ದಾದರೂ ರಸಿಕರ ದೃಷ್ಟಿಯಿಂದ ಹೆಚ್ಚು ಬೆಲೆಯದಾಗುತ್ತಿತ್ತು.

ಒಟ್ಟಿನ ಮೇಲೆ ಶ್ರೀ ಗೊರೂರರವರು ಶ್ರಮಪಟ್ಟು ಬರೆದ ಈ ಹೆಬ್ಬೊತ್ತಿಗೆಯನ್ನು ಎಲ್ಲ ಪುಸ್ತಕಭಂಡಾರಗಳೂ ತರಿಸಬಹುದಾಗಿದೆ. ಇವರ ಸರಸಶೈಲಿಯ ಪರಿಚಯವಾದರೆ ಕನ್ನಡದ ಪರಿಚಯ ಸಾಕಷ್ಟಿರದವರಿಗೂ ಕೂಡ ಮತ್ತೆ ಓದೋಣ, ಕನ್ನಡ ಒಳ್ಳೆಯ ಸೊಗಸಾದ, ತಿಳಿಯಾದ ನುಡಿ ಎನ್ನಿಸದಿರದು. ಈ ದೃಷ್ಟಿಯಿಂದ ಮತ್ತು ನಿಜಸ್ಥಿತಿಯನ್ನು ಬೆಳಕಿಗೆ ತರುವ ಸನ್ನಿವೇಶ ಚಿತ್ರಣದ ದೃಷ್ಟಿಯಿಂದ ಈ ಗ್ರಂಥ ಎಲ್ಲರಿಗೂ ಬೇಕಾದುದೆಂದು ಘಂಟಾಘೋಷವಾಗಿ ಹೇಳಬಹುದು.

ಸಾದರ ಸ್ವೀಕಾರ

೧ ಮಹಾತ್ಮರ ಸ್ವತಂತ್ರ ಭಾರತದ ರಾಜ್ಯಘಟನೆ

ಲೇಖಕರು— ಶ್ರೀಮನ್ನಾರಾಯಣ ಅಗರವಾಲ್. ಅನುವಾದಕರು— ಶ್ರೀ ಜಿ. ವಿ. ನಾರಾಯಣಮೂರ್ತಿ ಬಿ. ಎ. ಪ್ರಕಾಶಕರು– ಮಿಂಚಿನಬಳ್ಳಿ ಕಾರ್ಯಾಲಯ ಧಾರವಾಡ. ಪುಟಗಳು— ೧೧೦ ಬೆಲೆ ೧—೪—೦

೨ ಭಾರತೀಯರ ವಿಜ್ಞಾನೋಪಾಸನೆ

ಲೇಖಕರು—ಪದ್ಮನಾಭ ಪುರಾಣಿಕ, ಪ್ರಕಾಶನ–ಕರ್ನಾಟಕ ಸಾಹಿತ್ಯ ಮಂದಿರ ಹೈದರಾಬಾದ. ಪುಟಗಳು ೧೫೦. ಬೆಲೆ ೧-೮-೦

3. India's Insoluble Hunger

By John Fisher

ಪ್ರಕಾಶಕರು — ಓರಾ ಮತ್ತು ಕಂಪನಿ— ಮುಂಬಯಿ ನಂ. ೨. ಪುಟಗಳು ೩೬, ಬೆಲೆ ೧-೦-೦.

೪. ಲೇಖನ ಕಲೆ

ಲೇಖಕರು— ಮಿರ್ಜಿ ಅಣ್ಣಾರಾಯರು. ಪ್ರಕಾಶನ-ಶಾಂತಿ ಸೇವಾ ಸದನ ಸೇಡಬಾಳ. ಪುಟಗಳು ೨೧೦. ಬೆಲೆ ೨.೪.೦

ಸಂಪಾದಕೀಯ ಟೀಕೆಟಿಪ್ಪಣಿಗಳು

ಮುಸ್ಲಿಮಲೀಗಿನ ಒಪ್ಪಿಗೆ

ಭಾರತವನ್ನು ವಿಭಜಿಸಬೇಕೆಂಬ ಬ್ರಿಟಿಶ್ ಸರಕಾರದ ಹೊಸ ಯೋಜನೆಗೆ ಮುಸ್ಲಿಂ ಲೀಗ ಕಾರ್ಯಕಾರೀ ಮಂಡಳವು ಸಶರ್ತ ಒಪ್ಪಿಗೆಯನ್ನು ಕೊಟ್ಟಿತು, ಇದೇ ೯ ನೆಯ ತಾರೀಕು ದಿಲ್ಲಿಯಲ್ಲಿ ಇಂಪೀರಿಯಲ್ ಹೋಟೆಲಿನಲ್ಲಿ ಬ್ಯಾ. ಜಿನ್ನಾರ ಅಧ್ಯಕ್ಷತೆಯಲ್ಲಿ ಸೇರಿದ್ದ ಲೀಗ ಕಾರ್ಯಕಾರಿ ಮಂಡಳದಲ್ಲಿ ಸ್ವೀಕೃತವಾದ ಈ ಗೊತ್ತುವಳಿಯಲ್ಲಿ ಒಡಂಬಡಿಕೆಯೆಂದು ಈ ಗೊತ್ತುವಳಿ ಸ್ವೀಕರಿಸಲಾಗಿದೆಯೆಂದು ಉಲ್ಲೇಖವಿದೆ. ಪಂಜಾಬ ಬಂಗಾಲಗಳನ್ನು ತುಂಡರಿಸಿದ್ದು ಯೋಗ್ಯವಲ್ಲೆಂದು ಲೀಗಿನ ಅಭಿಪ್ರಾಯ. ಆದರೂ ದೇಶದ ಶಾಂತತೆಯ ದೃಷ್ಟಿಯಿಂದ ಈ ಯೋಜನೆಯನ್ನು ಒಪ್ಪಲಾಗಿದೆಯೆಂದು ಈ ಗೊತ್ತುವಳಿಯಲ್ಲಿ ಹೇಳಿದೆ. ವಿಭಜನೆಯಿಂದ ಉದ್ಭೂತವಾಗುವ ಎಲ್ಲ ವಿಷಯಗಳನ್ನು ಚರ್ಚಿಸುವ ಅಧಿಕಾರ ಬ್ಯಾ. ಜಿನ್ನಾರಿಗೆ ಕೊಡಲಾಗಿದೆ. ಲೀಗು ಈರೀತಿ ಅಧಿಕೃತವಾಗಿ ಬ್ರಿಟಿಶ್ ಯೋಜನೆಯನ್ನು ಸ್ವೀಕರಿಸಿದ್ದರಿಂದ ಮುಂದಿನ ಕಾರ್ಯಕಲಾಪಗಳಲ್ಲಿ ಅಡ್ಡಗಾಲು ಹಾಕದೆ ಬ್ರಿಟಿಶರು ಇಲ್ಲಿಂದ್ಕಾಲ್ದೆಗೆದು ಅಧಿಕಾರವನ್ನು ಒಪ್ಪಿಸಿಕೊಡುವದಕ್ಕೆ ಸಹಾಯಮಾಡಬೇಕು. ಪಂಜಾಬ ಬಂಗಾಲ ವಿಭಜನೆಯ ಕಹಿಗುಳಿಗೆಗಳನ್ನು ಲೀಗು ನುಂಗಲಿಕ್ಕೆಬೇಕು. ಯಾವ ತತ್ವದನ್ವಯ ಅವರು ಪಾಕಿಸ್ತಾನವನ್ನು ಬೇಡುತ್ತಿರುವರೊ ಆ ತತ್ವಕ್ಕನುಗುಣವಾಗಿಯೇ ಪಂಜಾಬ ಬಂಗಾಲಗಳನ್ನು ವಿಭಜಿಸಬೇಕೆಂದು ಕಾಂಗ್ರೆಸ್ಸು ಕೇಳಿದ್ದನ್ನು ಬ್ರಿಟಿಶರು ತಮ್ಮ ಯೋಜನೆಯಲ್ಲಿ ಹಾಕಿದ್ದಾರೆ. ಈ ಪರಿಸ್ಥಿತಿಯಲ್ಲಿ ಅದನ್ನು ವಿರೋಧಿಸುವದು ಯಾವ ರೀತಿಯಿಂದಲೂ ನ್ಯಾಯ್ಯವಲ್ಲ. ಬ್ಯಾ. ಜಿನ್ನಾರು ಶಾಂತಿ ಸ್ಥಾಪನೆಯ ಬಗ್ಗೆ ತಮ್ಮ ಆಕಾಶವಾಣಿಯಲ್ಲಿ ಕೇಳಿಕೊಂಡಿದ್ದರೂ ಇನ್ನೂ ಅಲ್ಲಲ್ಲಿ ಇರಿತ ಮೊದಲಾದವು ನಡೆದುದು ದುರ್ದೈವದ ಸಂಗತಿ. ಲೀಗ ಧುರೀಣರು ಶಾಂತಿಸ್ಥಾಪನೆಗಾಗಿ ಹೆಚ್ಚು ಪ್ರಯತ್ನಿಸಬೇಕು. ಶಾಂತಿ ಸ್ಥಾಪನೆಯಾಗದೆ ವಿಭಜನೆಯ ಸಂಬಂಧದ ಮುಂದಿನ ಕಾರ್ಯಕಲಾಪಗಳು ಸುಸೂತ್ರ ಸಾಗಲಾರವೆಂಬುದು ಖಂಡಿತ. ಒಡಂಬಡಿಕೆಯೆಂದು ಇದನ್ನು ಸ್ವೀಕರಿಸಿದ್ದರಿಂದ ಈ ಪ್ರಶ್ನೆ ಪೂರ್ಣ ಬಗೆಹರಿದಿಲ್ಲೆಂದು ಗೊತ್ತಾಗುವದು ಆದರೂ ಮುಸ್ಲಿಂ ಲೀಗ ಧುರೀಣರು ಇನ್ನು ಹೋರಾಟದ ಮಾತನ್ನು ಬಿಟ್ಟುಗೊಡಬೇಕು.? ಪರಸ್ಪರ ವಿಚಾರ ವಿನಿಮಯ, ಕೊಡತಕ್ಕೊಳ್ಳುವ ಧೋರಣವನ್ನಿಟ್ಟುಕೊಂಡೇ ನಡೆಯಬೇಕು. ಇನ್ನು ಮುಂದೆ ಸಮಿತಿ ಮಂಡಲಗಳಲ್ಲಿ ಹೋರಾಟ ಪ್ರಾರಂಭವಾಗುವದು ಎಂದು ಮುಂತಾಗಿ ಲೀಗಿನ ಮುಖಪತ್ರವಾದ ಡಾನ ಬರೆಯುತ್ತಿರುವದು ಸಮಂಜಸವಲ್ಲ, ಈ ಬಗೆಯ ಹೋರಾಟ ಮನೋವೃತ್ತಿಯಿಂದ ಉದ್ದಿಷ್ಟ ಸಾಧಿಸಲಾರದು. ಪರಕೀಯರು ತಮ್ಮ ಪ್ರಸ್ಥ ಬೆಳಿಸಲು ಅನುಕೂಲವಾಗುವದು. ಹಿಂದುಸ್ತಾನ ವಿಭಜಿಸಲ್ಪಟ್ಟರೂ ಪರಸ್ಪರ ಬಾಂಧವರಂತೆ ಇರಲು ಯಾವ ಪ್ರತ್ಯವಾಯವೂ ಇಲ್ಲ.

ಸಂಸ್ಥಾನಿಕರ ಕರ್ತವ್ಯ

ಈ ಸಮಯದಲ್ಲಿ ಸಂಸ್ಥಾನಿಕರ ಕರ್ತವ್ಯ ನಿಚ್ಚಳವಾಗಿದೆ. ಸ್ವತಂತ್ರ ಸಾರ್ವಭೌಮತ್ವದ ಖಾಲಿ ಪ್ರತಿಷ್ಠೆಗೊಳಗಾಗಿ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಕಡಿಮೆ ಮಾಡಿಕೊಳ್ಳದೆ ಒಕ್ಕೂಟದಲ್ಲಿ ಸೇರಿ ತಮ್ಮ ಮತ್ತು ತಮ್ಮ ಪ್ರಜರ ಹಿತವನ್ನು ಸಾಧಿಸುವದು ಅವಶ್ಯವಾಗಿದೆ. ಪರದೇಶಗಳಲ್ಲಿಯ ಸಣ್ಣ ಸಣ್ಣ ಸ್ವತಂತ್ರ ರಾಷ್ಟ್ರಗಳನ್ನು ನೋಡಿ ತಾವೂ ಹಾಗೆ ಸ್ವತಂತ್ರರಾಗಿ ಉಳಿಯಬಯಸಿದರೆ ಅಹಿತವೆ ಅಗುವದು. ಈಬಗೆಯಾಗಿ ಸ್ವತಂತ್ರವುಳಿಯುವದರಿಂದ ತಮ್ಮ ರಕ್ಷಣೆಗಾಗಿ ಯಾವಾಗಲೂ ಪರಕೀಯರನ್ನೆ ಅವಲಂಬಿಸಬೇಕಾಗುವದು. ಇದರಿಂದ ಹೊರಗಿನವರಿಗೆ ಕೈವಾಡ ನಡೆಸಲು ಅವಕಾಶ ಸಿಕ್ಕುವದು ಒಕ್ಕೂಟದಲ್ಲಿ ಸೇರದಿದ್ದ ಸಂಸ್ಥಾನಿಕರನ್ನು ಪ್ರಜೆಗಳು ಹಾಗೆ ಮಾಡಹಚ್ಚುವರೆಂಬಲ್ಲಿ ಸಂದೇಹವಿಲ್ಲ. ಬ್ರಿಟಿಶರ ಕಡೆಗಿದ್ದ ಸ್ವತಂತ್ರ ಸಾರ್ವಭೌಮಾಧಿಕಾರವು ಮರಳಿ ಸಂಸ್ಥಾನಗಳ ಕಡೆಗೆ ಬರುವದೆಂದು ಬ್ರಿಟಿಶರು ಘೋಷಿಸಿದ್ದುದರ ಅರ್ಥ ಅದು ಕೇವಲ ನರೇಂದ್ರರ ಕಡೆಗೆ ಬರುವದೆಂದಲ್ಲ. ಸಂಸ್ಥಾನಗಳ ಪ್ರಜರಿಗೂ ಆ ಸಾರ್ವಭೌಮಾಧಿಕಾರದಲ್ಲಿ ಪಾಲು ಸಿಕ್ಕುವದೆಂಬುದು ನಿಶ್ಚಿತ. ಪ್ರಜರ ಅನುಮತಿಯನ್ನು ಪಡೆದೆ ಸಂಸ್ಥಾನಗಳು ಸ್ವತಂತ್ರವಾಗುಳಿಯಬಲ್ಲವು. ಹಾಗೆ ಪ್ರಜರನ್ನು ಕೇಳದೆ ಈಗಲೆ ಹಲವು ಸಂಸ್ಥಾನಗಳು ಸ್ವತಂತ್ರ ಸಾರ್ವಭೌಮತ್ವವನ್ನು ಸಾರಲು ಮುಂದೆ ಬಂದುದು ಯಾವ ರೀತಿಯಿಂದಲೂ ನ್ಯಾಯ್ಯವಾಗಲಾರದು. ಸಂಸ್ಥಾನಿಕರು ಈ ಬಗೆಯಾಗಿ ಆತುರತೆಯಿಂದ ಪ್ರಜೆಗಳ ಒಪ್ಪಿಗೆಯನ್ನು ಪಡೆಯದೆ ಸ್ವತಂತ್ರರಾಗುವ ಧೋರಣವನ್ನು ಸ್ವೀಕರಿಸಿದರೆ ಪ್ರಜೆಗಳು ಅಹಿಂಸಾತ್ಮಕ ಅಸಹಕಾರವನ್ನು ಹೂಡಬೇಕಾಗುವದೆಂದು ಡಾ. ಪಟ್ಟಾಭಿಯವರು ಈಗಾಗಲೆ ಅಭಿಪ್ರಾಯಪಟ್ಟಿದ್ದಾರೆ. ಹಿಂದಿನಂತೆ ನಿರಂಕುಶ ಆಡಳಿತವನ್ನು ಸಾಗಿಸುವ ಧೋರಣವನ್ನು ಸಂಸ್ಥಾನಿಕರು ಇಟ್ಟುಕೊಂಡರೆ ಎಂದಿಗೂ ನಡೆಯದು. ಸಂಸ್ಥಾನ ಪ್ರಜರೀಗ ಜಾಗ್ರತರಾಗಿದ್ದು ನೆರೆಯಪ್ರಾಂತಗಳಂತೆ ತಾವೂ ಪ್ರಗತಿಪರ ಧೋರಣವನ್ನಿಟ್ಟುಕೊಳ್ಳಬೇಕೆಂಬ ವೃತ್ತಿ ಅವರಲ್ಲಿ ಉಂಟಾಗಿದೆ. ಈ ಸಮಯದಲ್ಲಿ ನರೇಂದ್ರರು ಪ್ರಜಾಭಿಪ್ರಾಯವನ್ನು ಧಿಕ್ಕರಿಸಿ ನಡೆದರಾದರೆ ಅವರ ಉದ್ದಿಷ್ಟವೆಂದಿಗೂ ಸಾಧಿಸಲಾರದು. ಸರ್ ಅಲ್ಲಾಡಿ ಕೃಷ್ಣಸ್ವಾಮಿ ಮೊದಲಾದ ಘಟನಾ ಪಂಡಿತರೂ ಇದೇ ಬಗೆಯ ಅಭಿಪ್ರಾಯಪಟ್ಟಿದ್ದಾರೆ. ನಾವು ಮೇಲೆ ಹೇಳಿದಂತೆ ಸಂಸ್ಥಾನಿಕರು ಸ್ವತಂತ್ರ ಸಾರ್ವಭೌಮತ್ವದ ಭ್ರಾಮಕಕಲ್ಪನೆಗಳ ಮೋಹಕ್ಕೆ ಬಿದ್ದು ತಿಕ್ಕಾಟಕ್ಕವಕಾಶ ಕೊಡದೆ ಹಿಂದೀ ಒಕ್ಕೂಟದಲ್ಲಿ ಸೇರಿ ತಮ್ಮ ಮತ್ತು ತಮ್ಮ ಪ್ರಜರ ಹಿತವನ್ನು ಸಾಧಿಸಬೇಕೆಂದು ಅಗ್ರಹಪಡಿಸುತ್ತೇವೆ.

ವಿರೋಧದಿಂದ ಪ್ರಯೋಜನವಿಲ್ಲ

ಬ್ರಿಟಿಶರ ಈ ಹೊಸ ಯೋಜನೆಯನ್ನು ವಿರೋಧಿಸಬೇಕೆಂದು ಇನ್ನೂ ಹಲವು ಮಹನೀಯರು ಅಭಿಪ್ರಾಯಪಡುತಿರುವರು. ಕಾಂಗ್ರೆಸ್ಸಿನ ಧುರೀಣರೂ ಈ ಯೋಜನೆಯನ್ನು ಹಾರ್ದಿಕವಾಗಿ ಸ್ವೀಕರಿಸಿಲ್ಲ. ಅನಿರ್ವಾಹವೆಂದೇ ಇದ ಕೊಪ್ಪಿಕೊಂಡಿದ್ದಾರೆ. ಇದರಲ್ಲಿಯ ಲೋಪದೋಷಗಳ ಅರಿವು ಅವರಿಗಿಲ್ಲೆಂದಿಲ್ಲ. ಆದರೆ ಪ್ರಸ್ತುತ ಪರಿಸ್ಥಿತಿಯಲ್ಲಿ ಇದರ ಹೊರತು ಅನ್ಯಮಾರ್ಗವಿಲ್ಲೆಂದು ಮನವರಿಕೆಯಾದ್ದರಿಂದ ಹಿಂದುಸ್ತಾನವನ್ನು ತುಂಡರಿಸುವ ಯೋಜನೆಗೆ ಒಪ್ಪಿಗೆ ಕೊಟ್ಟಿದ್ದಾರೆ. ಹಿಂದುಸ್ತಾನದ ಅಖಂಡತ್ವದ ರಕ್ಷಣೆಗಾಗಿ ಕೊನೆಯವರೆಗೆ ಹೋರಾಡುವ ತಮ್ಮ ನಿರ್ಧಾರವನ್ನು ಈಗ ಬಿಟ್ಟುಗೊಟ್ಟಿದ್ದಾರೆ. ತುಂಡರಿಸಲ್ಪಟ್ಟ ಹಿಂದುಸ್ತಾನವು ಬೇಗ ಮತ್ತೆ ಒಂದುಗೂಡುವದೆಂಬ ಆಸೆಯನ್ನೂ ಇಟ್ಟುಕೊಂಡಿರುವರು. ಈ ಪರಿಸ್ಥಿತಿಯಲ್ಲಿ ಸಾಮ್ಯವಾದಿಗಳಾಗಲಿ ಪುರೋಗಾಮೀ ಪಕ್ಷದವರಾಗಲಿ ಹಿಂದುಮಹಾಸಭೆಯವರಾಗಲಿ ಈ ಯೋಜನೆಯನ್ನು ವಿರೋಧಿಸಿ ಪ್ರಗತಿಮಾರ್ಗದಲ್ಲಿ ಅಡ್ಡ ಬರುವದು ಸರಿಯಲ್ಲ. ಈಬಗೆಯ ಧೋರಣದಿಂದ ಹಿಂದೀ ಒಕ್ಕೂಟ ಸ್ಥಾಪನೆಗೆ ಕೆಲಮಟ್ಟಿಗೆ ವ್ಯತ್ಯಯವುಂಟಾಗುವದು ಅಲ್ಲದೆ ನಿರರ್ಥಕ ವಾದದಲ್ಲಿ ರಾಷ್ಟ್ರದ ಉತ್ಸಾಹ ಹಾಳಾಗುವದು. ಆದುದರಿಂದ ಈಬಗೆಯ ವಾದವನ್ನು ಬಿಟ್ಟುಗೊಡುವದು ಉಚಿತ. ಹಿಂದೀ ಒಕ್ಕೂಟವನ್ನು ಎಂತು ಭದ್ರವಾಗಿಸಿಕೊಳ್ಳಬೇಕೆಂದು ಪ್ರತಿಯೊಬ್ಬ ಭಾರತೀಯ ಹಗಲಿರುಳು ಚಿಂತಿಸಬೇಕು. ಶರಚ್ಚಂದ್ರ ಪ್ರಭೃತಿಗಳು ಸ್ವತಂತ್ರ ಬಂಗಾಲದ ಹುಚ್ಚನ್ನೂ ಬಿಟ್ಟುಗೊಡಬೇಕು. ಅವರ ಕೆಲ ಅನುಯಾಯಿಗಳನ್ನು ಬಿಟ್ಟರೆ ಬೇರೆ ಯಾವ ಬಂಗಾಲಿಗಳಿಗೂ ಅದು ಒಪ್ಪಿಗೆಯಿಲ್ಲ. ಸುರ್ಹವರ್ದಿ ಯೋಜನೆಗೆ ಲೀಗಿನ ಬೆಂಬಲವೂ ಸಿಕ್ಕಿಲ್ಲ. ಆದುದರಿಂದ ಬ್ರಿಟಿಶ್ ಯೋಜನೆಯನ್ನು ಕಾರ್ಯಕಾರಿ ಮಾಡುವಲ್ಲಿಯೆ ಎಲ್ಲ ಉತ್ಸಾಹಶಕ್ತಿಯನ್ನು ವ್ಯಯ ಮಾಡಬೇಕಲ್ಲದೆ ನಿರರ್ಥಕವಾದ ಎಬ್ಬಿಸಿ ಪ್ರಗತಿಯನ್ನು ಕುಂಠಿಸುವದು ಸರಿಯಲ್ಲ.

ಪ್ರಾಂತಗಳ ಪುನರ್ಘಟನೆ

ಹಿಂದುಸ್ತಾನದ ಹೊಸ ಘಟನೆ ಸಿದ್ಧವಾಗುತಿರುವ ಈ ಸಮಯದಲ್ಲಿ ಭಾಷಾನ್ವಯ ಪ್ರಾಂತ ರಚನೆಯ ಪ್ರಶ್ನೆಯನ್ನು ಬಿಡಿಸಿಬಿಡುವದವಶ್ಯವಾಗಿದೆ. ಈ ಭಾಷಾನ್ವಯ ಪ್ರಾಂತ ರಚನೆಯ ತತ್ವಕ್ಕೆ ಸಮಂಜಸ ಬುದ್ಧಿಯವರಾರೂ ವಿರೋಧಿಸುವದಿಲ್ಲ. ಕೆಲವೊಂದು ನಿಜ ಇಲ್ಲವೆ ಭ್ರಾಮಕ ಕಲ್ಪನೆಗಳನ್ನು ಮುಂದೆ ಮಾಡಿ ಇದನ್ನು ಮುಂದೆ ಹಾಕಲಾಗಿತ್ತು. ಆದರೆ ಈಗ ಈ ಪ್ರಶ್ನೆಯನ್ನು ಘಟನಾ ಸಮಿತಿಯ ಒಕ್ಕೂಟ ರಾಜ್ಯ ಘಟನಾ ಸಮಿತಿ ಮತ್ತು ಪ್ರಾಂತಿಕ ಘಟನಾ ಸಮಿತಿಗಳು ತಮ್ಮ ಸಂಯುಕ್ತ ಸಭೆಯಲ್ಲಿ ಇದೇ ೧೧ ನೇ ತಾರೀಕು ಚರ್ಚಿಸಿದವು. ಶ್ರೀ ದಿವಾಕರ ರಂಗರಾಯರು ಭಾಷಾನ್ವಯ ಪ್ರಾಂತ ರಚನೆಯ ಪ್ರಶ್ನೆಯನ್ನು ವಿಚಾರಿಸಲು ಅನುಕೂಲವಾಗುವಂತೆ ೧೯೩೫ ರ ಹಿಂದುಸ್ತಾನ ಸರಕಾರದ ಕಾಯಿದೆಯ ೪೬ ನೇ ಕಲಮಿನಂಥ ಕಲಮನ್ನು ಈ ಘಟನೆಯಲ್ಲಿ ಸೇರಿಸಬೇಕೆಂದು ಅಗ್ರಹ ಕೊಟ್ಟರು. ಈ ಬಗೆ ಚರ್ಚೆ ನಡೆದು ಈ ವಿಷಯಗಳನ್ನು ಪರಿಶೀಲಿಸಲು ಸಮಿತಿಯೊಂದು ನೇಮಿಸಲ್ಪಟ್ಟಿತು. ಆ ಸಮಿತಿಯ ನಿರ್ಣಯವೂ ಈ ಸಂಚಿಕೆ ವಾಚಕರ ಕೈಸೇರುವಷ್ಟರಲ್ಲಿ ಹೊರಬೀಳಬಹುದು. ಭಾಷಾನ್ವಯ ಪ್ರಾಂತ ರಚನೆಯ ಈ ಪ್ರಶ್ನೆ ಎಷ್ಟು ಮಹತ್ವದ್ದು ಮತ್ತು ಅವಶ್ಯಕವಾಗಿದೆಂಬುದನ್ನು ಈಗ ವಿವರಿಸಿ ಹೇಳಬೇಕಿಲ್ಲ. ಒಂದೇ ಭಾಷೆಯಾಡುವ ಜನರು ಒಂದೇ ಆಡಳಿತದಲ್ಲಿ ಸೇರುವದರಿಂದ ಆ ಪ್ರಾಂತದ ಪ್ರಗತಿ ಭರದಿಂದ ಆಗುವದೆಂಬುದು ನಿರ್ವಿವಾದವಾಗಿದೆ ಆದುದರಿಂದ ಘಟನಾ ಸಮಿತಿಯ ಸದಸ್ಯರು ಈ ತತ್ವಮಾನ್ಯ ತತ್ವಕ್ಕೊಪ್ಪಿಕೊಂಡು ಭಾರತದ ಹೊಸ ಘಟನೆಯಲ್ಲಿ ಭಾಷಾನ್ವಯ ಪ್ರಾಂತಗಳ ರಚನೆಗೆ ಅವಕಾಶ ಕೊಡಬೇಕೆಂದು ಸೂಚಿಸಬಯಸುತ್ತೇವೆ.

ಭಟಕಳ ಬಂದರದ ಪ್ರಶ್ನೆ

ಭಟಕಳ ಬಂದರವನ್ನಭಿವೃದ್ಧಿಪಡಿಸುವ ಸಂಬಂಧದಲ್ಲಿ ಮೈಸೂರು ಮದ್ರಾಸ ಮತ್ತು ಮುಂಬಯಿ ಪ್ರಾಂತಗಳ ಪ್ರತಿನಿಧಿಗಳ ಪರಿಷತ್ತು ನಡುಗಾಲ ಸರಕಾರದ ಸಾರಿಗೆ ಮಂತ್ರಿಗಳಾದ ಜಾನ ಮಥಾಯಿ ಇವರ ಅಧ್ಯಕ್ಷತೆಯಲ್ಲಿ ಕೂಡಿ ವಿಚಾರ ವಿನಿಮಯ ಮಾಡಿತು. ಮುಂಬಯಿ ಪ್ರಾಂತದಲ್ಲಿಯ ಕಾರವಾರ ಭಟಕಳ ಬಂದರಗಳನ್ನಭಿವೃದ್ಧಿಪಡಿಸಬೇಕೊ ಮದ್ರಾಸ ಪ್ರಾಂತದಲ್ಲಿಯ ಮಲ್ಪೆ ಮಂಗಳೂರು ಬಂದರಗಳನ್ನೊ ಎಂಬ ಬಗ್ಗೆ ವಾದವೆದ್ದಿದೆ. ಅಗಸ್ಟ ೧೫ ರ ನಂತರ ಹೊಸ ಸರಕಾರ ಸ್ಥಾಪಿಸಲ್ಪಡುವ ಸಂಭವವಿದ್ದುದರಿಂದ ಅಲ್ಲಿಯವರೆಗೆ ದಾರಿ ನೋಡಬೇಕಾಗುವದೆಂದು ಮುಂತಾಗಿ ಸಾರಿಗೆ ಮಂತ್ರಿಗಳು ಅಭಿಪ್ರಾಯ ಪಟ್ಟರು. ಪಶ್ಚಿಮ ಕರಾವಳಿಯ ಬಂದರದ ಅಭಿವೃದ್ಧಿಯ ಪ್ರಶ್ನೆಯನ್ನು ವಿಚಾರಿಸುವಾಗ ಮೈಸೂರಿನ ಅಭಿವೃದ್ಧಿಯೊಂದನ್ನೇ ಲಕ್ಷಿಸದೆ ಇಡೀ ಪ್ರದೇಶದ ಅಭಿವೃದ್ಧಿಯನ್ನು ಲಕ್ಷಿಸಬೇಕಾಗಿದೆಂದು ಮುಂಬಯಿ ಮದ್ರಾಸ ಪ್ರತಿನಿಧಿಗಳು ಅಭಿಪ್ರಾಯಪಟ್ಟರೆಂದು ತಿಳಿಯುತ್ತದೆ. ಈ ಬಂದರದ ಮೇಲೆ ತಮಗೇನು ಸ್ವಾಮಿತ್ವ ಬೇಕಿಲ್ಲ, ವ್ಯಾಪಾರ ಸಂಬಂಧ ಬೆಳಿಸಿಕೊಳ್ಳುವದಷ್ಟೆ ತಮ್ಮ ಮನೀಷೆ. ರೇಲ್ವೆಯನ್ನಾದರೂ ತಮ್ಮ ಹಣದಿಂದಲೆ ಹಾಕಿಸಿಕೊಳ್ಳಲಾಗುವದು ಎಂದು ಮುಂತಾಗಿ ಮೈಸೂರಿನ ಪ್ರತಿನಿಧಿಗಳು ಅಭಿಪ್ರಾಯಪಟ್ಟರೆಂದು ಪ್ರಸಿದ್ಧವಾಗಿದೆ. ಎಲ್ಲವನ್ನೂ ಕೂಲಂಕಷವಾಗಿವಿಚಾರ ಮಾಡಿ ವರದಿ ಮಾಡಲು ಸಲಹೆ ಕೊಡಲಾಯಿತು. ಈ ಬಂದರದ ಪ್ರಶ್ನೆಯನ್ನು ಬಿಡಿಸುವಾಗ ನಾವು ಇಡೀ ಕರ್ನಾಟಕದ ದೃಷ್ಟಿಯನ್ನಿಟ್ಟುಕೊಳ್ಳಬೇಕಲ್ಲದೆ ಕೇವಲ ಭಾವನಾವಶರಾಗಿ ತಮ್ಮದೊಂದು ಜಿಲ್ಹೆಯ ಇಲ್ಲವೆ ಭಾಗದ ಹಿತವನ್ನು ನೋಡಬಾರದು. ಯಾವ ಬಂದರವನ್ನು ಅಭಿವೃದ್ಧಿಪಡಿಸುವದರಿಂದ ಕರ್ನಾಟಕದ ಹೆಚ್ಚು ಭಾಗಕ್ಕೆ ಹಿತವಾಗುವದೆಂಬುದನ್ನು ಗಮನಿಸಬೇಕು. ಮೈಸೂರು ಇಂದು ಸಂಸ್ಥಾನವಿದ್ದು ಸ್ವತಂತ್ರ ಇಲ್ಲವೆ ಹಿಂದೀ ಒಕ್ಕೂಟದಲ್ಲಿ ಸೇರಬಹುದಾದರೂ ಅದು ಕರ್ನಾಟಕದ ಭಾಗವೆಂಬುದನ್ನು ಯಾರೂ ಮರೆಯಬಾರದು. ಮೈಸೂರಿನ ಅಭಿವೃದ್ಧಿಗೆ ಭಟಕಳ ಬಂದರದ ಸಹಾಯ ಸಿಕ್ಕರೆ ಅದೇನು ಅನವಶ್ಯಕವಲ್ಲ. ಭಟಕಳ ಬಂದರವೆ ಕರ್ನಾಟಕದ ಅಭಿವೃದ್ಧಿಗೆ ಹೆಚ್ಚು ಸಹಾಯಕವಾಗಬಲ್ಲದೆಂದು ಈ ಮೊದಲು ನಾವು ಅನೇಕ ಸಲ ಅಭಿಪ್ರಾಯ ವ್ಯಕ್ತಪಡಿಸಿದ್ದೇವೆ. ಸಂಕುಚಿತ ಸ್ಥಳಾಭಿಮಾನಕ್ಕೆ ಒಳಗಾಗಿ ಭಟಕಳ ಬಂದರಕ್ಕೆ ವಿರೋಧ ಮಾಡುವದು ಸರಿಯಲ್ಲ. ನಿಜವಾಗಿ ವಿಚಾರ ಮಾಡಿದರೆ ಈ ಪ್ರಶ್ನೆಯ ವಿಚಾರ ಮಾಡುವಾಗ ಮುಂಬೈ ಮದ್ರಾಸ ಪ್ರತಿನಿಧಿಗಳ ಅಭಿಪ್ರಾಯ ಪಡೆಯದೆ ಮುಂಬಯಿ ಕರ್ನಾಟಕ ಮದ್ರಾಸ ಕರ್ನಾಟಕದ ಪ್ರತಿನಿಧಿಗಳ ಅಭಿಪ್ರಾಯವನ್ನು ಪಡೆಯುವದು ಅವಶ್ಯ. ಏಕೆಂದರೆ ಕರ್ನಾಟಕ ಇನ್ನು ಬಹುಕಾಲ ಮುಂಬೈ ಮದ್ರಾಸ ಪ್ರಾಂತಗಳಲ್ಲಿ ಉಳಿಯಲಾರದು. ಸ್ವತಂತ್ರ ಏಕೀಕೃತ ಕರ್ನಾಟಕ ಪ್ರಾಂತದ ರಚನೆ ತೀವ್ರದಲ್ಲಿಯೆ ಆಗುವದಿದೆ. ಆ ಏಕೀಕೃತ ಕರ್ನಾಟಕದ ದೃಷ್ಟಿ ಮುಂಬಯಿ ಮದ್ರಾಸದ ಸದ್ಯದ ಪ್ರತಿನಿಧಿಗಳಿಗೆ ಇರಲಾರದೆಂಬುದು ನಿಶ್ಚಿತ.

ಹಳ್ಳಿಬಾವಿಗಳು

ಹಳ್ಳಿಗಳಲ್ಲಿ ಕುಡಿಯುವ ನೀರಿನ ಕೊರತೆ ಬಹಳದೆಂಬುದು ಅನುಭವದ ಮಾತಾಗಿದೆ. ಅಂತೆಯೆ ಸರಕಾರದವರು ಮುಂಬಯಿ ಪ್ರಾಂತದಲ್ಲಿ ೪೧೪೬ ಹಳ್ಳಿಗಳಲ್ಲಿ ಬಾವಿ ತೋಡಬೇಕೆಂದು ಯೋಜಿಸಿದ್ದರು. ಆದರೆ ಹಳ್ಳಿಗರು ಈ ಯೋಜನೆಯಲ್ಲಿ ಸಹಕರಿಸಲಿಲ್ಲ. ಕೇವಲ ೬೦ ಬಾವಿಗಳನ್ನು ಅಗೆಯುವದರಲ್ಲಿ ಮಾತ್ರ ಹಳ್ಳಿಗಳ ಸಹಕಾರ ಸಿಕ್ಕಿತೆಂದು ಕಂಡು ಬರುತ್ತದೆ. ಉಳಿದ ೩೬೪ ಬಾವಿಗಳಲ್ಲಿ ೨೦೧ ಸಂದರ್ಭಗಳಲ್ಲಿ ಕಂತ್ರಾಟದಾರರು ಟೆಂಡರುಗಳನ್ನು ಕೂಡ ಕೊಡಲಿಲ್ಲೆಂದು ತಿಳಿಯುತ್ತದೆ. ಈ ರೀತಿ ಹಳ್ಳಿಗರು ತಮ್ಮ ಹಿತದ ಯೋಜನೆಯಲ್ಲಿಯೂ ಸರಕಾರದ ಜೊತೆ ಅಸಹಕಾರ ಮಾಡುತಿರುವುದನ್ನು ನೋಡಿದರೆ ಸರಕಾರದವರು ಈ ಬಗ್ಗೆ ಕೂಡಲೆ ವಿಚಾರಣೆ ನಡೆಸುವದು ಅವಶ್ಯವಾಗಿದೆ. ಪರಕೀಯ ಸರಕಾರವಿರುವಾಗ ಭಾರತೀಯರು ಅದರಜೊತೆ ಅಸಹಕಾರ ಮಾಡುತ್ತಿದ್ದರು, ಅದು ಯೋಗ್ಯವೇ ಆಗಿದ್ದಿತು. ಆದರೆ ಈಗ ಜನತಾ ಪ್ರತಿನಿಧಿಗಳೆ ಆಡಳಿತವನ್ನು ಸಾಗಿಸುತ್ತಿರುವಾಗ ಜನರು ಅಸಹಕರಿಸುವದೆಂದರೆ ಆಡಳಿತದಲ್ಲಿಯೆ ಎಲ್ಲಿಯಾದರೂ ದೋಷವಿರಬಹುದೆಂದು ತೋರುತ್ತದೆ. ಇದನ್ನು ಸರಕಾರದವರು ಕಂಡು ಹಿಡಿದು ನಿವಾರಿಸಬೇಕಾದುದು ಕರ್ತವ್ಯ. ಸರಕಾರದವರು ಹಳ್ಳಿಗರ ಉದ್ಧಾರಕ್ಕೆಂದು ಎಷ್ಟೇ ಪ್ರಯತ್ನಿಸಿದರೂ ಇಂದಿನ ಅವರ ಯೋಜನೆಗಳಿಂದ ಯಾವದೂ ಶಕ್ಯವಿಲ್ಲದಂತಾಗಿದೆ. ಹಳ್ಳಿಗಳಿಂದು ಸೋಟರ, ಉಪದ್ವ್ಯಾಪಿಗಳ ಬೀಡಾಗಿದೆ. ಸಚ್ಚರಿತ್ರರ, ಸತ್‌ಶೀಲರ ಆಟ ಸ್ವಲ್ಪೂ ನಡೆಯದಂತಾಗಿದೆ. ನಿಯಂತ್ರಣಗಳ ಮೂಲಕ ಹಳ್ಳಿಗರ ಗೋಳು ಹೆಚ್ಚಿದೆ. ಎಣ್ಣೆ ಸಕ್ಕರೆ ಅಕ್ಕಿ ಬಟ್ಟೆ ಮೊದಲಾದ ಆವಶ್ಯಕ ಪದಾರ್ಥಗಳು ಕೂಡ ಸಿಕ್ಕದಂತಾಗಿವೆ. ಲಂಚಗುಳಿತನ ಸ್ವಲ್ಪವೂ ಕಡಮೆಯಾಗಲೊಲ್ಲದು. ರಾಮರಾಜ್ಯ ಬಂದರೂ ರಾಗಿ ಬೀಸುವದು ತಪ್ಪಲಿಲ್ಲೆಂದು ಜನರು ಗೋಳಿಡುತಿದ್ದಾರೆ. ಈ ಪರಿಸ್ಥಿತಿ ಸುಧಾರಿಸುವವರೆಗೆ ಹಳ್ಳಿಗಳ ಸಂಪೂರ್ಣ ಸಹಕಾರ ಸರಕಾರಕ್ಕೆ ಸಿಕ್ಕಲಾರದು. ಇದನ್ನು ನೆನೆದು ಸರಕಾರದವರು ಹಳ್ಳಿಗರಿಗೆ ಅವಶ್ಯಕ ಪದಾರ್ಥ ಸಿಕ್ಕುವಂತೆ ಯೋಜಿಸಿ ಅವರ ಸಹಕಾರ ಪಡೆಯಬೇಕೆಂದು ಸೂಚಿಸುತ್ತೇವೆ.

ಸೀದಾಪ್ರಮಾಣದಲ್ಲಿ ಮತ್ತೆ ಕಡಿತ?

ಮುಂಬಯಿ ಸರಕಾರದವರು ಸೀದಾ ಪ್ರಮಾಣದಲ್ಲಿ ಮತ್ತೆ ಕಡಿತವನ್ನು ಮಾಡಬೇಕಾಗುವದೆಂದು ಪೂರೈಕೆ ಮಂತ್ರಿಗಳಾದ ಶ್ರೀ ದಿನಕರರಾವ ದೇಸಾಯರು ಒಂದು ಸಂದರ್ಶನದಲ್ಲಿ ಹೇಳಿದರು. ಅಂದಾಜು ಮಾಡಿದಷ್ಟು ಕಾಳು ರೈತರಿಂದ ಎತ್ತಲ್ಪಡಲಿಲ್ಲೆಂದೂ ಹೊರಗಿನಿಂದ ಸಾಕಷ್ಟು ಕಾಳು ಬರಲಿಲ್ಲೆಂದೂ ಆದುದರಿಂದ ಆಹಾರ ಧಾನ್ಯಗಳ ಕೊರತೆಯಾಗಿ ಕಡಿತವನ್ನು ಮಾಡಬೇಕಾಗಿ ಬಂದಿದೆಯೆಂದೂ ಹೇಳಲಾಗುತ್ತದೆ. ಆದರೆ ಈ ರೀತಿ ಕಡಿತವನ್ನು ಮಾಡುವ ಮೊದಲು ಮಂತ್ರಿಗಳು ಜನತೆಯ ಪರಿಸ್ಥಿತಿಯನ್ನು ಲಕ್ಷ್ಯದಲ್ಲಿ ತೆಗೆದುಕೊಳ್ಳುವುದವಶ್ಯವಾಗಿದೆ. ಈಗ ಕೊಡುತ್ತಿರುವ ಸೀದಾ ಸಾಕಷ್ಟು ಇರುವದಿಲ್ಲ. ಅದರಲ್ಲಿಯೂ ಕೆಂಪು ಜೋಳದಂಥ ಹಿಟ್ಟು ಬಳೆದ ಹರಳುಗಳಿಂದ ತುಂಬಿದ ಕಾಳು ಕೊಡುತಿರುವದರಿಂದ ಕೊಟ್ಟಷ್ಟು ಕೂಡ ಪೂರ್ಣ ಜನತೆಯ ಹೊಟ್ಟೆಯಲ್ಲಿ ಹೋಗುವದಿಲ್ಲ. ಹೀಗಾಗಿ ಜನತೆಯ ಆರೋಗ್ಯ ಪರಿಸ್ಥಿತಿ ಬಹಳಮಟ್ಟಿಗೆ ಕೆಟ್ಟಿದೆ. ಇದರಲ್ಲಿ ಮತ್ತೆ ಸೀದಾ ಪ್ರಮಾಣ ಕಡಿಮೆಯಾದರೆ ಪರಿಸ್ಥಿತಿ ಮತ್ತಷ್ಟು ಕೆಡುವದರಲ್ಲಿ ಸಂದೇಹವಿಲ್ಲ. ಆದುದರಿಂದ ಸೀದಾ ಪ್ರಮಾಣವನ್ನು ಕಡಿಮೆ ಮಾಡುವ ಧೋರಣವನ್ನು ಸರಕಾರ ವಹಿಸದೆ ಹೆಚ್ಚು ಕಾಳು ಸಂಗ್ರಹಿಸುವತ್ತ ಲಕ್ಷ್ಯ ಕೊಡಬೇಕಾದುದು ಕರ್ತವ್ಯವಾಗಿದೆ. ೬ ಲಕ್ಷ ಟನ್ ಧಾನ್ಯ ಎತ್ತುವಳಿಯಾಗಬಹುದೆಂದು ಅಂದಾಜುಮಾಡಲಾಗಿತ್ತು ಕೇವಲ ೪ ಲಕ್ಷ ಟನ್ ಮಾತ್ರ ಎತ್ತಲ್ಪಟ್ಟಿದೆಯೆಂದು ಮಂತ್ರಿಗಳು ಹೇಳುತ್ತಾರೆ. ಇಷ್ಟು ಕಡಿಮೆ ಎತ್ತುವಳಿ ಹೇಗಾಯಿತೆಂಬುದನ್ನು ವಿಚಾರಿಸುವದು ಕರ್ತವ್ಯವಾಗಿದೆ. ರೈತರಿಂದ ಅಂದಾಜು ಮಾಡಿದಷ್ಟು ಕಾಳು ಎತ್ತಲ್ಪಟ್ಟಿರದಿದ್ದರೆ ಆ ಬಗ್ಗೆ ಈಗಲೂ ಪ್ರಯತ್ನಿಸುವದವಶ್ಯವಾಗಿದೆ. ರೈತರಾದರೂ ತಮಗೆ ಅವಶ್ಯವಿದ್ದುದಷ್ಟನ್ನು ಇಟ್ಟುಕೊಂಡು ಉಳಿದುದನ್ನು ಸರಕಾರಕ್ಕೆ ಮಾರಲೇಬೇಕು. ಹೀಗೆ ಮಾಡದಿದ್ದರೆ ಸರಕಾರದವರು ಉಳಿದವರಿಗೆ ಧಾನ್ಯದ ಸೀದಾ ಎಲ್ಲಿಂದ ಪೂರೈಸಬೇಕು? ಕಾಂಗ್ರೆಸ್ ಸಮಿತಿಗಳಾದರೂ ಈ ಸಂಬಂಧದಲ್ಲಿ ಸರಕಾರಕ್ಕೆ ಸಹಾಯ ಮಾಡುವದವಶ್ಯವಾಗಿದೆ. ಈ ರೀತಿ ಪ್ರಯತ್ನ ಮಾಡಿ ಹೆಚ್ಚು ಕಾಳು ಸಂಗ್ರಹಿಸುವದನ್ನು ಕೂಡಲೆ ಯೋಜಿಸಬೇಕು.

ಪಂ. ಜವಾಹರರು ಹಿಂದುಸ್ತಾನದ ಪ್ರಥಮ ಅಧ್ಯಕ್ಷರು

ಅಗಸ್ಟ ೧೫ ರೊಳಗೆ ಸಾಮಂತ ಸ್ವರಾಜ್ಯ—ಮೌಂಟಬ್ಯಾಟನ ಯೋಜನೆಗೆ ಲೀಗ ಕೌನ್ಸಿಲಿನ ಸಮ್ಮತಿ—ಘಟನಾ ಉಪಸಮಿತಿಗಳ ಮಹತ್ವದ ನಿರ್ಣಯಗಳು

ಬ್ರಿಟಿಶ ಸರಕಾರದ ಸದ್ಯದ ಯೋಜನೆಗಳು ಫಲಕಾರಿಯಾದರೆ ಸ್ವತಂತ್ರ ಹಿಂದುಸ್ತಾನದ ಮೊದಲನೆ ಒಕ್ಕೂಟ ಸರಕಾರಕ್ಕೆ ಪಂಡಿತ ಜವಾಹರಲಾಲರು ಅಧ್ಯಕ್ಷರಾಗಿ ಆರಿಸಲ್ಪಡಬಹುದೆಂದು ತಿಳಿಯುತ್ತದೆ. ಪ್ರಾಂತಿಕ ಗವರ್ನರರು ಅಗಸ್ಟ ೧೫ ಕ್ಕೆ ರಾಜೀನಾಮೆ ಕೊಡಬಹುದೆಂದೂ ಅವರ ಸ್ಥಾನದಲ್ಲಿ ಹೊಸ ಗವರ್ನರರನ್ನು ಆರಿಸುವ ಅಧಿಕಾರ ಒಕ್ಕೂಟದ ಅಧ್ಯಕ್ಷನದೆಂದೂ ಹೇಳಲಾಗಿದೆ. ಪ್ರಾಂತಗಳ ಗವರ್ನರರೆಂದು ಈಗಿನ ಮುಖ್ಯ ಮಂತ್ರಿಗಳೇ ಆರಿಸಲ್ಪಡಬಹುದು. ಮುಂಬಯಿಗೆ ಮುರಾರಜಿ ದೇಸಾಯಿರೂ ಮದ್ರಾಸಿಗೆ ರಾಜಾಜಿಯವರೂ ಗವರ್ನರರಾಗಬಹುದೆಂದೂ ಸುದ್ದಿಯೆದ್ದಿದೆ.

ಮೌಂಟಬ್ಯಾಟನ್ನರ ಅಧಿಕಾರದಾನ ಯೋಜನೆಗೆ ಎಲ್ಲಿಂದಲೂ ಸಂತೋಷದ ಸ್ವಾಗತ ದೊರೆತಿಲ್ಲ. ಆದರೆ ಸಾಮಾನ್ಯವಾಗಿ ಎಲ್ಲ ದೇಶಗಳಲ್ಲೂ ಹಿಂದುಸ್ತಾನದ ವಿಭಜನೆ ಅನಿವಾರ್ಯ ಅನಿಷ್ಟವೆಂದು ಅದನ್ನು ಸ್ವಾಗತಿಸಿದ್ದಾರೆ. ಬ್ರಿಟಿಶ ಪತ್ರಿಕೆಗಳು ವಿಭಜನೆಯ ಬಗ್ಗೆ ವ್ಯಸನವನ್ನು ಸೂಚಿಸಿವೆಯಾದರೂ ಕೊನೆಗೊಮ್ಮೆ ಹಿಂದೀ ಮುಂದಾಳುಗಳು ಐಕ್ಯದಿಂದ ಯೋಜನೆ ಸ್ವೀಕರಿಸಿದ್ದಕ್ಕೆ ಸಂತೋಷ ವ್ಯಕ್ತಗೊಳಿಸಿವೆ. ಅಮೇರಿಕೆಯಲ್ಲಿಯೂ ಇದೇ ತೆರನಾದ ವಿಚಾರ ಪ್ರಕಟಿಸಲ್ಪಟ್ಟಿತೆನ್ನಬಹುದು. ಮಾಸ್ಕೋ ಪತ್ರಿಕೆಗಳು ಇದು ಖೊಟ್ಟಿ ಸ್ವಾತಂತ್ರ್ಯವೆಂದು ಟೀಕಿಸಿವೆ. ಆದರೆ ಮುಖ್ಯವಾದುದು ಬ್ರಿಟಿಶ ಪಕ್ಷಗಳ ಅಭಿಪ್ರಾಯ ಯೋಜನೆಯನ್ನು ಪಾರ್ಲಮೆಂಟಿನಲ್ಲಿ ಮುಖ್ಯಮಂತ್ರಿ ಅಟ್ಲಿಯವರು ಬಿತ್ತರಿಸಿದಾಗ ಯಾವ ಪಕ್ಷವೂ ಅದಕ್ಕೆ ಎದುರಾಡಲಿಲ್ಲ. ಹಿಂದುಸ್ತಾನದಲ್ಲಿ ಪ್ರಮುಖ ಪಕ್ಷಗಳು ಅದನ್ನು ಒಪ್ಪಿದಂತೆ ಇಂಗ್ಲಂಡಿನಲ್ಲಾದರೂ ಅದುದರಿಂದ ಕೆಸುಬ್ಯಾಲೆಯ ಆಟ ಮುಗಿದು ಇನ್ನು ಗಂಭೀರ ಕಾರ್ಯತತ್ಪರತೆ ನಿಜವಾಗಿ ಪ್ರಾರಂಭವಾಗುವಂತೆ ತೋರುತ್ತದೆ. ಹಿಂದೀ ಸ್ವಾತಂತ್ರ್ಯಕ್ಕೆ ಮೊದಲಿಂದ ವಿರೋಧಿಗಳಾಗಿದ್ದ ವಿನ್‌ಸ್ಟನ್ ಚರ್ಚಿಲ್ಲರ ಮನೋವೃತ್ತಿಯಲ್ಲಿ ಕೂಡ ಸ್ಪಷ್ಟವಾದ ಬದಲಾವಣೆ ಕಾಣುತ್ತಿದೆಯೆಂದು ವರದಿಯಾಗಿದೆ.

ಹಿಂದುಸ್ತಾನದಲ್ಲಿ

ಹಿಂದುಸ್ತಾನದಲ್ಲಿ ಪ್ರಮುಖ ಪಕ್ಷಗಳ ಯೋಜನೆಯನ್ನು "ಸಂಧಾನ ಮಾರ್ಗ"ವೆಂದು ಸ್ವೀಕರಿಸಿದ್ದರೂ ತೀಕ್ಷ್ಣವಾದ ಖಂಡನೆ ಏಳದೆ ಇಲ್ಲ. ಪ್ರಸಿದ್ಧ ರಾಜಕೀಯ ವಿದ್ವಜ್ಜನರ ಸಂಘವಾದ ಹಿಂದೀ ಲಿಬರಲ್ಲರು ಈ ಯೋಜನೆಯನ್ನು ಖಂಡಶಃ ಕತ್ತರಿಸಿದ್ದಾರೆ. ಶ್ರೀ ಕೆ ನಟರಾಜನ್ನರು ಹೇಳುವಂತೆ "ಇದು ರೋಗಕ್ಕಿಂತ ಭಯಂಕರವಾದ ಔಷಧ"ವೆಂದು ಅವರ ಸಾಮಾನ್ಯಮತ. ಶ್ರೀ ಶರಚ್ಚಂದ್ರ ಬೋಸರೂ ಇದನ್ನು ವಿರೋಧಿಸಿ ಅವಿಭಕ್ತ ಹಿಂದುಸ್ತಾನಕ್ಕೇ ಅಂಟಿಕೊಳ್ಳಬೇಕೆಂದು ಸಾರಿದ್ದಾರೆ "ಅಖಂಡ ಸ್ವತಂತ್ರ ಬಂಗಾಲ" ದ ಕನಸನ್ನು ಅವರು ಇನ್ನೂ ತ್ಯಜಿಸಿಲ್ಲ. ಆದರೆ ಬಂಗಾಲದ ಬಹುಜನ ಹಿಂದುಗಳು ಶರಚ್ಚಂದ್ರರ ಹಿಂದೆ ಮತ್ತು ಬಹುಜನ ಮುಸ್ಲಿಮರು ಸುಹ್ರವರ್ದಿಯವರ ಹಿಂದೆ ಇರುವಂತೆ ತೋರುವದಿಲ್ಲ. ಆದರಿಂದ ಅವರ ಯೋಜನೆ ಗಾಳಿ ಗೋಪುರವಾಗುವಂತೆ ಕಾಣುತ್ತದೆ. ಹಿಂದೂ ಮಹಾಸಭೆಯವರೂ ಯೋಜನೆಗೆ ವಿರೋಧವನ್ನು ವ್ಯಕ್ತಗೊಳಿಸಿದ್ದಾರೆ. ಆದರೆ ಎಂದಿನಂತೆ "ಸಿಕ್ಕದ್ದನ್ನು ತೆಗೆದುಕೊಂಡು ಹೆಚ್ಚಿನದಕ್ಕೆ ಕೈಯೊಡ್ಡು" ಎಂಬ—ತಿಲಕರ—ಪ್ರಮೇಯದ ಪುರಸ್ಕರ್ತರಾದ ಅವರು ಯೋಜನೆಯ ವಿರುದ್ಧ ದಂಗೆಯೇಳುವ ಲಕ್ಷಣವೇನೂ ಇಲ್ಲ. ವೀರ ಸಾವರಕರರು ಸಿಂಧ ಪ್ರಾಂತವನ್ನು ವಿಭಜಿಸಬೇಕೆಂದು ಕೇಳಿದಾಗ ಯೋಜನೆಗೆ ಅಪ್ರತ್ಯಕ್ಷ ಒಪ್ಪಿಗೆ ಕೊಟ್ಟಾರೆಂದೇ ಹೇಳಬಹುದು. ಡಾ. ಶ್ಯಾಮ ಪ್ರಸಾದ ಮುಖರ್ಜಿಯವರೂ ಎಷ್ಟು ಕೆಟ್ಟದ್ದಿದ್ದರೂ ಇದು ಮೇ ೧೬ ರ ಯೋಜನೆಗಿಂತ ಸುಖ ಎಂದಿದ್ದಾರೆ. ಎಲ್ಲರೂ ಕೈಬಿಟ್ಟ ಧ್ಯೇಯಗಳ ಬೆಂಬಲಿಗರಾದ (ಬಂಡೆ ಕಾಂಗ್ರೆಸ್) ಸಾಮ್ಯವಾದಿಗಳೇನೋ ಇದನ್ನು ವಿರೋಧಿಸಿ ಅಖಂಡ ಹಿಂದುಸ್ತಾನಕ್ಕಾಗಿಯೇ ಇನ್ನೂ ಹೋರಾಡುವ ನಿರ್ಧಾರವನ್ನು ವ್ಯಕ್ತಗೊಳಿಸಿದರು.

ಕಾಂಗ್ರೆಸ್—ಲೀಗ—ಸೀಖರು

ಕಾಂಗ್ರೆಸ್ ಕಾರ್ಯಸಮಿತಿಯು ಈ ಯೋಜನೆಯನ್ನು ಅಂಗೀಕರಿಸಿದೆ. ಈ ಪತ್ರಿಕೆ ಓದುಗರ ಕೈಸೇರುವ ಮೊದಲೇ ಅ ಭಾ ಕಾಂಗ್ರೆಸ್ಸು ದಿಲ್ಲಿಯಲ್ಲಿ ತಾ ೧೪—೧೫ ಪರಿಷ್ಕರ ನಿರ್ಣಯದ ಮೇಲೆ ತನ್ನ ತೀರ್ಮಾನ ಕೊಡಲಿದೆ. ಅದು "ಅಸ್ತು" ಎನ್ನುವದೆಂಬ ಬಗ್ಗೆ ಯಾರೂ ಗಂಭೀರ ಸಂಶಯವನ್ನೆತ್ತಿಲ್ಲ. ಆದರೂ ಅ ಭಾ ಕಾಂಗ್ರೆಸ್ಸಿನಲ್ಲಿ ಅದು ಎದುರಿಲ್ಲದೆ ಪಾಸಾಗುವದೆಂದು ನಿರೀಕ್ಷಿಸಲು ಕಾರಣವಿಲ್ಲ. ನಿಜವಾಗಿ ಕಾಂಗ್ರೆಸ ಪರಿಷ್ಕರು ಬಾಯಲ್ಲಿ ಹುಂಕಾರ ಮಾತ್ರ, ಪೂರ್ತಿಯಾಗಿ ಶರಣಾಗತರಾದರೆಂದು ಅನೇಕ ಉತ್ಸಾಹಿ ಕಾಂಗ್ರೆಸ್ ಕ್ರಾಂತಿವಾದಿಗಳು ಭಾವಿಸಿದ್ದಾರೆ. ಅ. ಭಾ. ಕಾಂಗ್ರೆಸ್ಸಿನಲ್ಲಿ ಇದಕ್ಕೆ ಉಗ್ರವಿರೋಧ ತೋರಿದರು ಸಂಯಮದಿಂದಲೇ ಇರಬೇಕು, ಗಾಂಧೀಜಿಯವರು "ಪರಿಷ್ಕರ ವಿರುದ್ಧ ದಂಗೆಯೇಳಬೇಡಿರಿ, ಬೇಕಾದರೆ ಅವರನ್ನು ಕಿತ್ತು ಹಾಕಿರಿ" ಎಂದುಪದೇಶಿಸಿಕೊಡಗಿದ್ದಾರೆ.

ಸೀಖ ಮುಂದಾಳುಗಳು ಬಹಳ ವಿಚಾರವೂಡಿದ ನಂತರ ಮೌಂಟಬ್ಯಾಟನ್ ಯೋಜನೆಯನ್ನು ಸ್ವೀಕರಿಸಿದರು. ಲಾಹೋರ ಗುರುದಾಸಪುರ ಜಿಲ್ಲೆಗಳನ್ನು ಪೂರ್ವ ಪಂಜಾಬದಲ್ಲಿಯೆ ಸೇರಿಸಲು ಇನ್ನೂ ಅವರು ಹೆಣಗುವರು.

ಮುಸ್ಲಿಂ ಲೀಗ ಕೌನ್ಸಿಲ ಸಭೆ ತಾ ೯ ಕ್ಕೆ ದಿಲ್ಲಿಯಲ್ಲಿ ಸೇರಿದುದು "ಯೋಜನೆ ತೃಪ್ತಿಕರವಾಗಿರದ್ದರೂ ಸಂಧಾನ ದೃಷ್ಟಿಯಿಂದ ಅಂಗೀಕರಿಸುವ ಗೊತ್ತುವಳಿಯನ್ನು ಮಾಡಿತು. ಸಭೆ ಗುಪ್ತವಾಗಿ ಸೇರಿದ್ದುದರಿಂದ ಅಧಿಕೃತ ವರದಿಗಳುದೊರೆತಿಲ್ಲ. ಆದರೂ ಕೆಲವು ಪ್ರಮುಖಸದಸ್ಯರು ಯೋಜನೆಯನ್ನು ತೀಕ್ಷ್ಣವಾಗಿ ವಿರೋಧಿಸಿದರೆಂದೂ ಬಂಗಾಲ ಪಂಜಾಬಗಳ ವಿಭಜನೆಗೆಜಿನ್ನಾರು ಒಪ್ಪಿಗೆ ಕೊಟ್ಟದ್ದಕ್ಕೆ ಅವರು ಟೀಕೆಗೊಳಗಾಗಬೇಕಾಯಿತೆಂದೂ ಸೋರು ಸುದ್ದಿಗಳು ಬಂದಿವೆ. "ಹಿಂದುಸ್ತಾನ ಭಾಗದ ಲೀಗ ಸದಸ್ಯರು ಮುಂದಿನ ಅಧಿವೇಶನದಲ್ಲಿ ಘಟನಾ ಸಮಿತಿಗೆ ಹಾಜರಾಗುವರೆಂದು ತಿಳಿಯುತ್ತದೆ.

ಅಧಿಕಾರ ದಾನದ ಸಿದ್ಧತೆಗಳು

ಇತ್ತ ಲಾರ್ಡ ಲುಯಿ ಮೌಂಟಬ್ಯಾಟನ್ನರು ಅಧಿಕಾರ ದಾನದ ಪೂರ್ವ ಸನ್ನಾಹಗಳನ್ನು ತೆರಪಿಲ್ಲದೆ ಮುಂದೊತ್ತುತಿದ್ದಾರೆ. ವಿಭಜನೆಯ "ಯಂತ್ರ"ವನ್ನು ಬಹಳ ಬೇಗನೆ ಕೇಂದ್ರದಲ್ಲಿ ಸ್ಥಾಪಿಸಲಾಗುವದು. ಸೈನ್ಯ, ಸಾಲ-ಆಸ್ತಿ, ಸಂರಕ್ಷಣ ವ್ಯವಸ್ಥೆಗಳು ಮೊದಲಾದವುಗಳ ವಿಭಜನೆಯ ವಿವರಗಳನ್ನೂ ಗಡಿ ಗುರುತನ್ನೂ ಮಾಡಲು ಕಡಿಮೆಯೆಂದರೆ ಒಂಭತ್ತು ತಜ್ಞ ಸಮಿತಿಗಳನ್ನು ನಿರ್ಮಿಸಲಾಗುವದು. ಅವೆಲ್ಲವುಗಳೂ ಒಂದು ಅಧಿಕಾರಸಂಪನ್ನ ಸಮಿತಿಯ ಕೈಕೆಳಗೆ ಕೆಲಸ ಮಾಡುವವು. ಅದರಲ್ಲಿ ಸರದಾರ ವಲ್ಲಭಭಾಯಿ ಪಟೇಲ, ಬಾಬು ರಾಜೇಂದ್ರ ಪ್ರಸಾದ, ಲಿಯಾಕತ ಅಲ್ಲಿಖಾನ, ಹಾಗು ಸರದಾರ ಅಬ್ದುರ್‍ರಬ ನಿಶ್ತಾರರು ಇರುವರೆಂದೂ ಊಹಿಸಲಾಗಿದೆ. ಸರದಾರ ಬಲದೇವಸಿಂಗರನ್ನೂ ಸೇರಿಸಿಕೊಳ್ಳುವ ಪ್ರಯತ್ನ ಜಿನ್ನಾ ಸಾಹೇಬರ ವಿರೋಧದಿಂದ ಅಯಶಸ್ವಿಯಾಯಿತಂತೆ. ವಿಭಜನೆಯ ಪೂರ್ಣ ವ್ಯವಸ್ಥೆಯಾದ ಹೊರತು ಸದ್ಯದ ನಡುಗಾಲ ಸರಕಾರ ದೀರ್ಘಕಾಲೀನ ಧೋರಣಗಳನ್ನು ನಿಶ್ಚಯಿಸತಕ್ಕದ್ದಲ್ಲವೆಂದು ವಾಯಿಸರಾಯರು ತಿಳಿಸಿದ್ದಾರೆಂದೂ ಭಾವಿಸಲಾಗಿದೆ. ಅಲ್ಲದೆ ಈ ನಡುಗಾಲ ಸರಕಾರ ಇಷ್ಟರಲ್ಲೇ ರಾಜೀನಾಮೆ ಕೊಡುವದೆಂದೂ ಅದರ ಸ್ಥಾನದಲ್ಲಿ ಎರಡು "ಜೋಪಾಸನಾ" ಸರಕಾರಗಳು ಅಸ್ತಿತ್ವಕ್ಕೆ ಬರುವವೆಂದೂ ಅಗಸ್ಟ ೧೫ ರಷ್ಟು ಹೊತ್ತಿಗೆ ಎರಡು "ಸಾಮಂತ ಸ್ವರಾಜ್ಯ" ಸರಕಾರಗಳು ಸ್ಥಾಪಿತವಾಗುವ ವರೆಗೆ ಅವು ಹಿಂದುಸ್ತಾನ ಪಾಕಿಸ್ತಾನಗಳ ಆಡಳಿತಗಳನ್ನು ನೋಡಿಕೊಳ್ಳುವವೆಂದೂ ನಂಬಲಾಗಿದೆ. ಹಿಂದುಸ್ತಾನ ಮತ್ತು ಪಾಕಿಸ್ತಾನಕ್ಕೆ ಸಾಮಂತ ಸ್ವರಾಜ್ಯ ಕೊಡುವ ಮಸೂದೆಯನ್ನು ಬ್ರಿಟಿಶ ತಜ್ಞರು ಸಿದ್ಧಗೊಳಿಸುತಿದ್ದು ಅವು ಬೇಗನೆ ಪಾರ್ಲಿಮೆಂಟಿನ ಮುಂದೆ ಬರುವವು. ಬಂಗಾಲ ಪಂಜಾಬಗಳ ಶಾಸನಸಭೆಗಳನ್ನು ಪೂರ್ವ-ಪಶ್ಚಿಮವೆಂದು ಎರಡು "ಕಾಲೇಜ"ಗಳಾಗಿ ವಿಂಗಡಿಸುವ ಆಜ್ಞೆಯನ್ನು ಈಗಾಗಲೇ ವಾಯಿಸರಾಯರು ಪ್ರಕಟಿಸಿದ್ದು ಬಂಗಾಲ ಪ್ರಾಂತ ಹಿಂದುಸ್ತಾನದಲ್ಲುಳಿಯಬೇಕೋ ಪಾಕಿಸ್ತಾನದಲ್ಲೋ ಎಂಬ ಬಗ್ಗೆ ಮತದಾನ ಮಾಡಲು ಪ್ರಾಂತಿಕ ಶಾಸನಸಭೆಯನ್ನು ತಾ. ೨೦ ಕ್ಕೆ ಕರೆಯಲಾಗಿದೆ. ಗಡಿನಾಡಿನಲ್ಲಿ ಸಾರ್ವತ್ರಿಕ ಮತಗಣನೆಯನ್ನು ನಡೆಸಲು ಮುಪ್ಪು ಭಾಷೆ ಬಲ್ಲ ಬ್ರಿಗೇಡಿಯರ ಬೂಥರೆಂಬವರನ್ನು ನೇಮಿಸಲಾಗಿದೆ. ಅಲ್ಲಿ ಜನ ಮತಗಣನೆ ಶಾಂತಿಯಿಂದಾಗುವದು ಸಂಶಯಾಸ್ಪದ. ಉಭಯ ಪಕ್ಷಗಳ ಪ್ರಚಾರ ಭರದಿಂದ ನಡೆದಿದೆ.

ಸಂಸ್ಥಾನಿಕರ ತೊಡಕು

ಬಲಿಷ್ಠ ಹಿಂದುಸ್ತಾನದ ನಿರ್ಮಿತಿಗೆ ನರೇಂದ್ರರು ಕಾಲ್ತೊಡಕಾಗಿ ನಿಲ್ಲುವರೆಂಬ ಭೀತಿ ದಿನ ಹೋದದಂತೆ ಸತ್ಯವಾಗುತ್ತ ನಡೆದಿದೆ. ತಿವಾಂಕೂರು "ಸ್ವತಂತ್ರ"ವಾಗಿ ಉಳಿಯುವದೆಂದು ದಿವಾಣ ಸರ್ ರಾಮಸ್ವಾಮಿಯವರು ಸಾರಿದ್ದಾರೆ. ನರೇಂದ್ರರ "ಸ್ವಾತಂತ್ರ್ಯ"ಕ್ಕೆ ಎದುರಾಡುವವರನ್ನೆಲ್ಲ ಸರ್ ರಾಮಸ್ವಾಮಿ ಅಯ್ಯರರು ಟೀಕಿಸುತಿದ್ದಾರೆ ಸರ್ ಮಿರ್ಜಾ ಇಸ್ಮಾಯಿಲರನ್ನು ದಿವಾಣ ಪದವಿಯಿಂದ ಕಿತ್ತುಹಾಕಿ ಹಳೆಯ ಗೆಳೆಯರಾದ ಛತ್ತಾರಿ ನವಾಬರನ್ನೇ ಆಶ್ರಯಿಸಿದ ನಿಝಾಮ ಸಾಹೇಬರೂ ಹೈದರಾಬಾದ ಸ್ವತಂತ್ರವಾಗಿ ಉಳಿಯುವದೆಂದು ಪ್ರಸಿದ್ಧಿಸಿದ್ದಾರೆ. ಸಾಲದ್ದಕ್ಕೆ ವ್ಹರಾಡ ಪ್ರಾಂತವನ್ನೂ ಒಂದು ಬಂದರವನ್ನೂ ಅವರು ಬೇಡುವರಂತೆ! ಹೀಗೆ ಮಾಡಲು ಬ್ರಿಟಿಶ ಅಧಿಕಾರಿಗಳು ಅವರಿಗೆ ಸಲಹೆ ಕೊಟ್ಟಿದ್ದಾರಂತೆ. ಹೈದರಾಬಾದದ ಯುವರಾಜರು ಹಿಂದುಸ್ತಾನ ಪಾಕಿಸ್ತಾನಗಳಂತೆ "ರಾಜಸ್ತಾನ" ವೊಂದನ್ನು ಸಂಘಟಿಸಿ ಅದಕ್ಕೂ ಬ್ರಿಟಿಶರಿಂದ ಸಾಮಂತ ಸ್ವರಾಜ್ಯ ಪದವಿಯನ್ನು ಗಳಿಸಲು ಎಣಿಕೆ ಹಾಕುತಿದ್ದಾರೆಂದೂ ತಿಳಿಯುತ್ತದೆ. ಮೌಂಟಬ್ಯಾಟನ್ನರು, ಸಂಸ್ಥಾನಗಳು ಸಾಮೀಪ್ಯ ನೋಡಿ ಹಿಂದುಸ್ತಾನ ಇಲ್ಲವೆ ಪಾಕಿಸ್ತಾನದಲ್ಲಿ ಸೇರಿಕೊಳ್ಳುವಂತೆ ಪ್ರಯತ್ನಿಸುವದಾಗಿ ಹೇಳಿದ್ದು ಈ ಅಕಸ್ಮಾತ್ ಸ್ವಾತಂತ್ರ್ಯ ಪಿಪಾಸೆಯೆದ್ದ ನರೇಂದ್ರರ ಮನಸಿಗೆ ಬಂದಿಲ್ಲವೆಂದು ತೋರುತ್ತದೆ. ಆದುದರಿಂದ ನರೇಂದ್ರರನ್ನು ಒಕ್ಕೂಟ ಸೇರುವಂತೆ ಒತ್ತಾಯಗೊಳಿಸಲು ಸಂಸ್ಥಾನಗಳಲ್ಲಿ ಅಸಹಕಾರ ಚಳವಳಿ ಹೂಡಬೇಂದು ಅ. ಭಾ. ಸಂಸ್ಥಾನಿ ಪ್ರಜಾಪರಿಷತ್ತಿನ ಅಧ್ಯಕ್ಷರಾದ ಡಾ. ಪಟ್ಟಾಭಿಯವರು ಹೇಳಿದ್ದಾರೆ.

ಘಟನಾ ಸಮಿತಿಯ ಕಾರ್ಯಕಲಾಪ

ಹಿಂದುಸ್ತಾನಕ್ಕೆ ಒಂದಾಗಲಿ, ಎರಡಾಗಲಿ ಸಾಮಂತ ಸ್ವರಾಜ್ಯ ಸಿಗುವ ದಿನ ಸಮೀಪಿಸಿದಂತೆ ವಿಲಂಬವಿಲ್ಲದೆ ಘಟನಾ ಯೋಜನೆಗಳನ್ನು ಸಿದ್ಧಗೊಳಿಸಲು ಘಟನಾ ಸಮಿತಿಯ ಉಪಸಮಿತಿಗಳು ಮುಂದಾಗಿವೆ. ಕೇಂದ್ರ ಶಾಸನ ಸಭೆಯನ್ನು ವಿಸರ್ಜಿಸಿ ಅಧಿಕಾರವನ್ನು ಘಟನಾ ಸಮಿತಿಗಳಿಗೇ ವರ್ಗಾಯಿಸುವ ಮತ್ತು ಘಟನೆಯ ಕೊನೆಯ ಪ್ರತಿ ಸಿದ್ಧವಾಗಿ ಅದರ ಮೇರೆಗೆ ಚುನಾವಣೆಗಳು ನಡೆದು ಒಕ್ಕೂಟ ಸರಕಾರ ಸ್ಥಾಪಿತವಾಗುವ ವರೆಗೆ ಘಟನಾ ಸಮಿತಿಗಳೇ ದೇಶದ ಆಡಳಿತೆ ನೋಡಬೇಕಾಗಿರುವ ಕಾರಣ ಸಮಿತಿಯ ಮುಂಬರುವ ಅಧಿವೇಶನದ ಮಹತ್ವ ಬಹಳ ಹೆಚ್ಚಿನದು. ಅಷ್ಟರೊಳಗೆ ಘಟನೆ ಪೂರ್ತಿ ಸಿದ್ಧವಾಗಬಹುದಲ್ಲದೆ ಅದು ಜಾರಿಗೆ ಬರುವ ವರೆಗೆ ಆಡಳಿತೆ ನಡೆಸುವ ಪದ್ಧತಿಯೂ

—೧೩ ನೇ ಪುಟಕ್ಕೆ

ಹಿಂದುಸ್ತಾನದ ವಿಭಜನೆ:

ಕಾಶ್ಮೀರ

ರಜಪುತ ಸಂಸ್ಥಾನಗಳು

ಬಂಗಾಲ

ಮಧ್ಯಪ್ರಾಂತ

ಓರಿಸಾ

ಹೈದರಾಬಾದ

ಮೈಸೂರು

ಬ್ರಿಟಿಶರು ನಿರ್ಮಿಸಿದ ಇನ್ನೊಂದು ಪಾಕಿಸ್ತಾನ

ಅಯರ್ಲಂಡ

ಇಲ್ಲಿ ಜನಮತ ಗಣನೆ

ಇಲ್ಲಿ ವಿಭಜನೆ

ಇದು ಹಿಂದುಸ್ತಾನ

ಇದು ಪಾಕಿಸ್ತಾನ

ಸಂಸ್ಥಾನಗಳು

"ಅಚ್ಚಿನಲ್ಲಿ"ರುವ ಇತರ "ಪಾಕಿಸ್ತಾನ"ಗಳು

ಇಜಿಪ್ತ

ಸುದಾನ

ಫ್ರೆಂಚ ಇಂಡೋಚೈನಾ

ಪಾಲಸ್ತಾನ

ಜಾವಾ

ಹಿಂದುಸ್ತಾನದ ವಿಭಜನೆಗೆ ಅವಕಾಶ ಕೊಟ್ಟದ್ದಕ್ಕೆ ನಮ್ಮ ಮುಂದಾಳುಗಳನ್ನು ನಾವು ಬೇಕಷ್ಟು ಶಪಿಸಬಹುದು. ಆದರೆ ಸಾಮ್ರಾಜ್ಯವಾದಿಗಳು ಕಾಲು ಕೀಳುವಾಗ ಎಲ್ಲೆಡೆಗಳಲ್ಲಿಯೂ ಇದೇ ಪಾಡು ಎಂದು ತೋರಿಸಲು ಮೇಲಿನ ನಕಾಶೆಗಳನ್ನು ನೋಡಿರಿ. ● ಅಯರ್ಲಂಡಿನ ಸ್ವಾತಂತ್ರ್ಯ ಚಳವಳಿಯನ್ನು ಮುರಿಯಲಾರದೆ ಕಳೆದ ಯುದ್ಧಾನಂತರ ಅಲ್ಲಿಂದ ಹಿಂದೆಗೆಯುವಾಗ ಅಂಥ ಸಣ್ಣ ದ್ವೀಪದಲ್ಲಿ ಅಲಸ್ಟರ ಪ್ರಾಂತವನ್ನು ಒಂದು "ಪಾಕಿಸ್ತಾನ" ಮಾಡಿ ಬ್ರಿಟಿಶರು ಕಾಲ್ಕಿತ್ತರು. ● ಇಜಿಪ್ತಿಗೆ ಸೇರಿದ ಸುದಾನ ಭಾಗದ ವಿಭಜನ ಚಳವಳಿಗೆ ಉತ್ತೇಜನ ಕೊಟ್ಟು ಅದನ್ನು ಇಜಿಪ್ತಿನಿಂದ ಬೇರ್ಪಡಿಸಲು ಬ್ರಿಟಿಶರು ಹಂಚಿಕೆ ನಡೆಸಿದ್ದಾರೆ. ● ಇಂಡೋ ಚೀನದಲ್ಲಿ ಫ್ರೆಂಚರು "ಕೋಚೀನ" (ಕಪ್ಪು ಭಾಗ)ವನ್ನು ಬೇರ್ಪಡಿಸಲು ಹವಣಿಸಿದ್ದಾರೆ. ● ಪಾಲಿಸ್ತಾನವನ್ನು ಅರಬ-ಯಹೂದ್ಯರಲ್ಲಿ ಹಂಚುವ ಎತ್ತುಗಡೆ ನಡೆದಿದೆ. ● ಡಚ್ಚರು ಇಂಡೊನೇಶಿಯಾದಲ್ಲಿನ ಪ್ರತ್ಯೇಕತಾವಾದಿಗಳಿಗೆ ಬೆಂಬಲ ಕೊಟ್ಟು ಜಾವಾದ ಪಶ್ಚಿಮ ಭಾಗದಲ್ಲೊಂದು "ಸ್ವತಂತ್ರ" ರಾಜ್ಯ ಬೇಕೆಂಬ ಚಳವಳಿ ಹುಟ್ಟಿಸಿದ್ದಾರೆ.

ಟ್ರೂಮನ್ನರಿಗೆ ಉತ್ತರ

ಹಂಗೆರಿಯಲ್ಲಿ ಮುಖ್ಯ ಮಂತ್ರಿ ನಾಗಿಯವರ ಒತ್ತಾಯದ ರಾಜೀನಾಮೆಯಿಂದ ಹಿಂದಿನ ವಾರ ಪ್ರಾರಂಭವಾದ ಘಟನೆಗಳು ಅಮೇರಿಕನ್ ಅಧ್ಯಕ್ಷ ಟ್ರೂಮನ್ನರು ಜಾಗತಿಕ ಕಮ್ಯುನಿಸ್ಟರನ್ನು ತಡೆಯಲು ಕೈಕೊಂಡ ಹೊಸ ಧೋರಣೆಗೆ ಸೋವಿಯಟ್ ಸರಕಾರದ ಉತ್ತರವೆಂಬಂತೆ ರೂಪುಗೊಳ್ಳುತಿವೆ. ಟ್ರೂಮನ್ನರು ಗ್ರೀಸ್, ತುರ್ಕಿಗಳಿಗೆ ಸಹಾಯ ನೀಡುವ ಯೋಜನೆಯನ್ನು ಪ್ರಾರಂಭಿಸಿ ಯುರೋಪಿನಲ್ಲೆಲ್ಲ "ಪ್ರಜಾಸತ್ತಾತ್ಮಕ" ಸರಕಾರಗಳಿಗೆ ಸಹಾಯ ನೀಡಲು ಡಾಲರುಗಳನ್ನು ನೀರಿನಂತೆ ಸುರಿಯಲು ಸಿದ್ಧರಾಗಿರುವದನ್ನು ಪ್ರಚುರಪಡಿಸಿದ ಕೆಲ ವಾರಗಳ ತನಕ ರಶಿಯಾ ತಾಳಿಸಿದ ನಿಷ್ಕ್ರಿಯತೆಯನ್ನು ನೋಡಿ ಅನೇಕರು ರಶಿಯಾಕ್ಕೆ ಬಿಸಿ ಹತ್ತಿತೆಂದು ಭಾವಿಸಿದ್ದರು. ಅದರೆ ಹಿಂದಿನ ವಾರ (ಕರ್ಮವೀರ ತಾ. ೯-೬-೪೭) ಹಂಗೆರಿಯಲ್ಲಿ ಪ್ರಾರಂಭವಾದುದು ಟ್ರೂಮನ್ನರಿಗೆ ರಶಿಯಾದ ಪ್ರತೀಕಾರವೆಂದು ಈಗ ಸ್ಪಷ್ಟವಾಗಿದೆ. ಬಾಲ್ಕನ್ ರಾಷ್ಟ್ರಗಳಲ್ಲಿ ಘಟನೆಗಳು ಭೀಮ ವೇಗದಿಂದ ನಡೆಯತೊಡಗಿವೆ:

※ ಹಂಗೆರಿಯ ಮುಖ್ಯ ಮಂತ್ರಿ ನಾಗಿಯವರು ಸ್ವಿಝರ್ಲಂಡಿನಿಂದ ರಾಜೀನಾಮೆ ಕಳಿಸಿದ ನಂತರ ಹಂಗೇರಿಯನ್ ಪಾರ್ಲಮೆಂಟಿನ ಅಧ್ಯಕ್ಷರಾದ ಬೇಲಾ ವರ್ಗಾ ಅವರು ಕಾಣೆಯಾದರು. ನಾಗಿಯವರ ಮೇಲೆ ಹೊರಿಸಲಾದ "ಒಳಸಂಚಿ"ನ ಆರೋಪದಲ್ಲಿ ವರ್ಗಾರ ಕೈಯೂ ಇತ್ತೆಂದು ತಿಳಿದು ಬಂದುದರಿಂದ ಅವರು ಕಮ್ಯುನಿಸ್ಟ ಪೋಲೀಸರ ಕೈಗೆ ಸಿಕ್ಕುವ ಮೊದಲೇ ದೇಶಬಿಟ್ಟು ಆಸ್ಟ್ರಿಯಕ್ಕೆ ಪಲಾಯನ ಮಾಡಿದರು. ಹಂಗೆರಿಯ ಕಮ್ಯುನಿಸ್ಟ ವಿರೋಧಿ ಪಕ್ಷಗಳ ಮುಂದಾಳುಗಳನ್ನು ಸೆರೆ ಹಿಡಿಯಲಾಗುತ್ತಿದೆ.

※ ಹಂಗೆರಿಯ ಘಟನೆಯ ಬಿಸಿ ಇನ್ನೂ ಆರಿರಲಿಲ್ಲ, ಅದರ ನೆರೆ ರಾಷ್ಟ್ರವಾದ ಬಲ್ಗೇರಿಯಾದಲ್ಲಿ ವಿರೋಧಿ ರೈತಪಕ್ಷದ ಮುಂದಾಳಾದ ನಿಕೊಲಾಯಿ ಪೆಟ್ಕೋವನನ್ನು ಬಂಧಿಸಲಾಯಿತು. ಬಲ್ಗೇರಿಯನ್ ಪಾರ್ಲಮೆಂಟಿನ ವಿರೋಧಿ ಪಕ್ಷದ ಮುಂದಾಳಾದ ಇವನಿಗೆ ಪಾರ್ಲಮೆಂಟಿನ ಸದಸ್ಯತ್ವದಿಂದ ಪ್ರಾಪ್ತವಾದ ಬಂಧನಾತೀತತೆಯ ಹಕ್ಕನ್ನು ಪಾರ್ಲಮೆಂಟು ಹಿಂತೆಗೆದುಕೊಂಡಿತು. "ಸರಕಾರದೊಡನೆ ಮನಸಾ ಸಹಕರಿಸಬೇಕು, ಇಲ್ಲವೆ ಅವರ ಫಲ ಭೋಗಿಸಬೇಕು" ಎಂದು ಸರಕಾರ (ಕಮ್ಯುನಿಸ್ಟ) ಪಕ್ಷ ಒಂದೇ ಒಂದು ತಾಸಿನ ನೋಟೀಸು ಕೊಟ್ಟಿತ್ತಂತೆ! ಪೆಟ್ಕೋವನ ಮೇಲೆ ಸರಕಾರವನ್ನು ಬಲಪ್ರಯೋಗದಿಂದ ಉರುಳಿಸಲು "ಫ್ಯಾಸಿಸ್ಟ" ಗುಪ್ತ ಸೈನ್ಯವನ್ನು ಸಂಘಟಿಸಲು ಪ್ರಯತ್ನಿಸಿದನೆಂದು ಆರೋಪಿಸಲಾಗಿದೆ.

※ ಪೋಲಂಡಿನಲ್ಲಿ ಜನರಲ್ ಅಂಡರ್ಸನ ಪಕ್ಷದ ಗುಪ್ತ ದಲದವರು ಹಿಂಸಾತ್ಮಕ ಚಟುವಟಿಕೆ ನಡೆಸಿದ್ದಾರೆಂದು ಕಮ್ಯುನಿಸ್ಟಪ್ರಧಾನ ಸರಕಾರದ ಆರೋಪಾತ್ಮಕ ಪ್ರಚಾರ ಆರಂಭವಾಗಿದೆ. ಇದು ಪೋಲಂಡಿನಲ್ಲಿ ಅಳಿದುಳಿದ ಕಮ್ಯುನಿಸ್ಟ ವಿರೋಧಿಗಳನ್ನು ನೆಲಸಮ ಮಾಡುವದರ ಪೀಠಿಕೆಯಾಗಿರಬಹುದು. ಜನರಲ್ ಆ್ಯಂಡರ್ಸನು ತೀಕ್ಷ್ಣ ಕಮ್ಯುನಿಸ್ಟ ವಿರೋಧಿಯಿದ್ದು ಬ್ರಿಟಿಶರ ಆಶ್ರಯದಲ್ಲಿ ಇಟಲಿಯಲ್ಲಿ ಫ್ಯಾಸಿಸ್ಟ ಪೋಲಿಶ ಸೈನ್ಯವನ್ನು ಸಂಘಟಿಸುತಿದ್ದಾನೆಂದು ಹಿಂದೆ ಆರೋಪಿಸಲಾಗಿತ್ತು.

ಬಾಲ್ಕನ್ನಿನಲ್ಲಿ ಕೋಟೆ

ಈ ಎಲ್ಲ ಘಟನೆಗಳು ಸೋವಿಯೆಟ್ ಸರಕಾರದಿಂದ ಪ್ರಚೋದಿತವಾದವುಗಳೆಂಬುದು ಸ್ಪಷ್ಟವಾಗಿದೆ. ಗ್ರೀಸಿನಲ್ಲಿ ಅಮೇರಿಕೆಯ ಬಂಡು ಪ್ರವೇಶ, ಫ್ರಾನ್ಸ ಮತ್ತು ಇಟಲಿಯಲ್ಲಿ ಮಂತ್ರಿಮಂಡಲಗಳಿಂದ ಕಮ್ಯುನಿಸ್ಟರ ಉಚ್ಚಾಟನೆ ಮೊದಲಾದವುಗಳಿಂದ ಟ್ರೂಮನ್ನರ "ಕಮ್ಯುನಿಸ್ಟ ವಿರೋಧಿ" ಧೋರಣೆಗೆ ಯುರೋಪಿನಲ್ಲಿ ಅಭೀಷ್ಟ ದೊರೆಯುವದು ಅಸಾಧ್ಯವಲ್ಲವೆಂದು ಸಿದ್ಧವಾಯಿತು. ಸೋವಿಯೆಟ್ ಸರಕಾರ ಕ್ರಮತೆಗೆದುಕೊಳ್ಳಲು ತಡಮಾಡಲಿಲ್ಲ. ಬಾಲ್ಕನ್ ಪ್ರದೇಶದಲ್ಲಿ ತನ್ನ ಆಕ್ರಮಣ ಸೇನೆಯಿರುವದರ ಪ್ರಯೋಜನ ಪಡೆದು ಅದು ಅಲ್ಲಿ ತನ್ನ ದುರ್ಗವನ್ನು ಬಲಗೊಳಿಸಲು ಪ್ರಾರಂಭಿಸಿತು. ಬಾಲ್ಕನ್ ರಾಷ್ಟ್ರಗಳಲ್ಲಿ ಗ್ರೀಸ್ ಒಂದನ್ನು ಬಿಟ್ಟರೆ ಉಳಿದೆಲ್ಲ ರಾಜ್ಯಗಳಲ್ಲಿ ಹೆಚ್ಚು ಕಡಿಮೆ ಕಮ್ಯುನಿಸ್ಟ ಆಡಳಿತೆಯೇ ನಡೆದಿದೆ. ಹಂಗೆರಿಯೊಂದೇ ಆಸ್ಟ್ರಿಯಾಕೆ ಹತ್ತಿಕೊಂಡು ಅತಿ ಪಶ್ಚಿಮದಲ್ಲಿರುವದಲ್ಲದೆ ಅಲ್ಲಿನ ಪಾರ್ಲಮೆಂಟಿನಲ್ಲಿ ಕಮ್ಯುನಿಸ್ಟರೂ ಅವರ ಗೆಳೆಯರೂ ಅಷ್ಟೊಂದು ಪ್ರಬಲರಾಗಿದ್ದಿಲ್ಲ. ಆ ಛಿದ್ರವನ್ನು ತುಂಬದಿದ್ದರೆ ಬಾಲ್ಕನ್ನಿನಲ್ಲಿ

ಅಂತರರಾಷ್ಟ್ರೀಯ

ಆಂಗ್ಲೋ ಅಮೇರಿಕನ್ನರಿಗೆ ಇನ್ನೊಂದು ಆಶ್ರಯಸ್ಥಾನ ಸಿಗುವ ಸಂಭವವಿತ್ತು. ಅದಕಾಗಿ ಅಲ್ಲಿನ ಚಿಕ್ಕ ರೈತರ ಪ್ರಬಲ ಪಕ್ಷವನ್ನು ನೆಲಸಮಮಾಡುವ ಅವಶ್ಯಕತೆಯುಂಟಾಯಿತು. ಅದರಿಂದಲೇ ನಾಗಿ ಮತ್ತು ಅವನ ಪಕ್ಷದ ಮೇಲೆ ಜನರ ವಿರುದ್ಧ ಒಳಸಂಚು ಮಾಡಿದ ಆರೋಪಗಳನ್ನು ಸೋವಿಯಟ್ ಸೈನ್ಯಾಧಿಕಾರಿಗಳು ತಂದರು. ಬಲ್ಗೇರಿಯಾದಲ್ಲಿ ಕಳೆದ ವರ್ಷ ನಡೆದ ಚುನಾವಣೆಗಳು "ಅನಿರ್ಬಂಧ" ವಾಗಿದಿಲ್ಲವೆಂದು ಅಂಗ್ಲೋ-ಅಮೇರಿಕನ್ನರು ಪ್ರತಿಭಟಿಸಿದ್ದರು. ಅಲ್ಲಿ ಪ್ರಚಂಡ ಬಹುಮತಗಳಿಸಿದ್ದ ಕಮ್ಯುನಿಸ್ಟ ಹಾಗು ಸೋಶಲ ದೆಮಾಕ್ರೆಟ ಪಕ್ಷಗಳನ್ನು ಬಿಟ್ಟರೆ ಈಗ ಬಂಧಿಸಲ್ಪಟ್ಟಿರುವ ಪೆಟ್ಕೋವನ ರೈತಪಕ್ಷವೇ ಬಲಿಷ್ಠವಾಗಿತ್ತು. ಆಂಗ್ಲೋ ಅಮೇರಿಕನ್ನರ ಮುಖನೋಡುವ ಪಕ್ಷವೂ ಅದೇ ಆಗಿತ್ತು. ಆದುದರಿಂದ ಶಾಂತಿ ಒಪ್ಪಂದದನ್ವಯ ಆ ಎರಡು ದೇಶಗಳನ್ನು ರಶಿಯನ್ ಸೈನ್ಯಗಳು ತೆರವು ಮಾಡಿ ಹೋಗುವ ಮೊದಲು ಅಲ್ಲಿ ಕಮ್ಯುನಿಸ್ಟ ಪ್ರಭಾವವನ್ನು ಸ್ಥಿರಗೊಳಿಸಿ ಹೋಗಲು ಸೋವಿಯಟ್ ಸರಕಾರ ನಿರ್ಧರಿಸಿರಬೇಕು. ಆಗ ಬಾಲ್ಟಿಕದಿಂದ ಕಪ್ಪು ಸಮುದ್ರದ ವರೆಗೆ ರಶಿಯಾದ ಪಶ್ಚಿಮಕ್ಕೆ ಬಲಿಷ್ಠ "ಗೆಳೆಯ" ಸರಕಾರಗಳು ಸ್ಥಾಪಿತವಾದಂತಾಯಿತು. ಇದು ರಶಿಯಾದ ಲೆಕ್ಕಾಚಾರ.

ತಿಕ್ಕಾಟ

ಹೀಗೆ ಟ್ರೂಮನ್ನರ ಧೋರಣೆಯನ್ನು ರಶಿಯನ್ನರು ತೆಪ್ಪಗೆ ಸೈರಿಸುವದಿಲ್ಲೆಂಬುದು ಸ್ಪಷ್ಟವಾಗಿದೆ. ಇದರಿಂದ ಪ್ರಬಲ ರಾಷ್ಟ್ರಗಳ ವೈಷಮ್ಯ ಇನ್ನಷ್ಟು ಹೆಚ್ಚಾಗುತ್ತಿದೆ. ಹಂಗೇರಿಯ ಲ್ಲಾದ ಘಟನೆಗಳ ಬೆನ್ನಿಗೆ ಜರಗಿದ ಸಂಗತಿಗಳಿವು.

※ ಹಂಗೇರಿಯ ಮುಖ್ಯಮಂತ್ರಿ ನಾಗಿಯ ಮೇಲೆ ಹೊರಿಸಲಾದ ಆರೋಪಗಳ ಪುರಾವೆಗಳನ್ನು ತಮಗೆ ತೋರಿಸಬೇಕೆಂದು ಸೋವಿಯೆಟ ಮಿಲಿಟರಿ ಅಧಿಕಾರಿಗಳಿಗೆ ಅಂಗ್ಲೋ-ಅಮೇರಿಕನ್ನರು ರಾಯಸ ಕಳಿಸಿದರು. ಅವುಗಳನ್ನು ತೋರಿಸಲು ರಶಿಯನ್ನರು ನಿರಾಕರಿಸಿದರು.

※ ಹಂಗೆರಿಗೆ ತಾವು ಕೊಟ್ಟಿದ್ದ ಸಾಲದ ಅಸುಪಯುಕ್ತ ಭಾಗವನ್ನು ಅಮೇರಿಕನ್ನರು ತಡೆಹಿಡಿದು "ಹೆಚ್ಚು ಯೋಗ್ಯರಾದವರಿಗೆ" ಸಹಾಯವಮಾಡಲು ವಿನಿಯೋಗಿಸುವೆವೆಂದರು. ಹೇಳಿದರು ಹಂಗೇರಿಯನ್ ಕಮ್ಯುನಿಸ್ಟರು: "ಇದು ಅನ್ಯಾಯ. ಆದರೆ ಇದಕ್ಕೆ ನಾವು ಬಗ್ಗುವವರಲ್ಲ."

※ ಹಂಗೆರಿಯಲ್ಲಿ ನಡೆದುದು "ಭಯಾನಕ ಅನ್ಯಾಯ" ಎಂದರು ಅಧ್ಯಕ್ಷ ಟ್ರೂಮನ್ನರು. ಈ ವಿಚಾರವನ್ನು ಯುಕ್ತರಾಷ್ಟ್ರಸಂಘದ ಮುಂದೆ ತರುವದಾಗಿ ಅಮೇರಿಕನ್ ವಿದೇಶಖಾತೆ ಬೆದರಿಕೆ ಹಾಕಿದೆ.

※ ಅಮೇರಿಕನ್ನರು ಹಂಗೇರಿ ಪ್ರಶ್ನೆಯನ್ನು ಇಷ್ಟು ದೊಡ್ಡದು ಮಾಡಿದ್ದರಿಂದ ಬ್ರಿಟಿಶ ವಿದೇಶಖಾತೆ ಪೇಚಿನಲ್ಲಿ ಸಿಕ್ಕಿದೆ. ಹಂಗೆರಿ, ಬಲ್ಗೇರಿಯಾ ಮತ್ತು ಯುಗೊಸ್ಲೋವಿಯಾದಲ್ಲಿ (ಯುಗೊಸ್ಲೋವಿಯಾದಲ್ಲಿಯೂ ವಿರೋಧಿ ಪಕ್ಷದ ಧುರೀಣ ಯೊವನವಿಚನನ್ನು ಬಂಧಿಸಲಾಗಿದೆ) ನಾಗರಿಕ ಹಕ್ಕುಗಳನ್ನು ಹತ್ತಿಕ್ಕುತಿರುವದನ್ನು ಕೇವಲ ಪ್ರತಿಭಟಿಸಬೇಕೋ ಸಕ್ರಿಯವಾಗಿ ಎದುರಿಸಬೇಕೊ ಎಂದು ಅದಕ್ಕೆ ತೋಚದಾಗಿದೆ.

ಎರಡು ಯುರೋಪುಗಳು?

ಯುರೋಪಿನಲ್ಲಿ ಸೋವಿಯಟ್ ಪ್ರಭಾವವನ್ನು ತಡೆಯುವ ಕಾರ್ಯಕ್ರಮದ ಅಂಗವಾಗಿ ಕಳೆದವಾರ ಅಮೇರಿಕನ್ ವಿದೇಶಮಂತ್ರಿ ಜಾರ್ಜ ಮಾರ್ಶಲ್ಲರು ಯುದ್ಧವಿಧ್ವಸ್ತ ಯುರೋಪಿಯನ್ ರಾಷ್ಟ್ರಗಳಿಗೆ ಸಹಾಯ ಮಾಡುವ ಅಮೇರಿಕನ್ ಉದ್ದೇಶವನ್ನು ಪ್ರಸಿದ್ಧಗೊಳಿಸಿದರು. ಇದಕ್ಕಾಗಿ ವರ್ಷಕ್ಕೆ ೬೦೦ ಕೋಟಿ ಡಾಲರುಗಳಂತೆ ಮೂರು ವರ್ಷಗಳ ವರೆಗೆ ಸಹಾಯ ನೀಡಬಹುದೆಂದು ಊಹಿಸಲಾಗಿದೆ. ಆದರೆ ಈ ಸಹಾಯಕ್ಕಾಗಿ ರಾಷ್ಟ್ರಗಳು ತಂತಾವೇ ಅಮೇರಿಕೆಗೆ ಅರ್ಜಿ ಹಾಕಬೇಕು ಇಲ್ಲದಿದ್ದರೆ ಸೋವಿಯೆಟ್ ಪ್ರಭಾವಕ್ಕೊಳಗಾದ ರಾಷ್ಟ್ರಗಳೂ ಇದರ ಪ್ರಯೋಜನ ಪಡೆದಾವೆಂದು ಅವರ ಭಯ. ಔದಾರ್ಯದ ಪ್ರಯೋಜನ ಪಡೆಯಲು ಫ್ರಾನ್ಸ, ಇಂಗ್ಲಂಡುಗಳು ಮೊದಲು ಮುಂದೆ ಬರಬಹುದು. ಯುರೋಪಿನಲ್ಲಿ ಕಮ್ಯುನಿಸ್ಟ ಪ್ರಭಾವದ ವಿರುದ್ಧ ಗತ್ತುಗಾರಿಕೆಯೆಂದೇ ಕಳೆದವಾರ ಅಮೇರಿಕನ್ ಸಿನೇಟ ಸಭೆ ಇಟಲಿ, ಹಂಗೇರಿ, ಬಲ್ಗೇರಿಯಾ, ರುಮಾನಿಯಾಗಳ ಬಗ್ಗೆ ವಿದೇಶ ಮಂತ್ರಿಗಳು ಸಿದ್ಧಗೊಳಿಸಿದ ಶಾಂತಿ ಒಪ್ಪಂದಕ್ಕೆ ಮನ್ನಣೆ ಕೊಟ್ಟಿತು. ಅದಕ್ಕೆ ಮನ್ನಣೆ ಕೊಟ್ಟ ೯೦ ದಿನಗಳಲ್ಲಿ ಆಕ್ರಮಣ ಸೈನ್ಯಗಳನ್ನು ಹಿಂತೆಗೆದುಕೊಳ್ಳಬೇಕೆಂದಿರುವದರಿಂದ ಇಟಲಿಯಲ್ಲಿ ಕಮ್ಯುನಿಸ್ಟ ಕೈವಾಡಕ್ಕೆ ಅವಕಾಶ ದೊರೆಯುವದೆಂದು ಕೆಲ ಸದಸ್ಯರು ಭಯಪಟ್ಟರೆ ಉಳಿದ ಮೂರು ರಾಜ್ಯಗಳಿಂದ ರಶಿಯನ್ ಸೈನ್ಯಗಳೂ ಕಾಲ್ತೆಗೆಯಬೇಕಾಗುವದರಿಂದ ಅದೇ ಒಳಿತೆಂದು ಉಳಿದವರು ವಾದಿಸಿದರು.

ಈ ಗತ್ತು ಎದುರ್ಗತ್ತುಗಳಿಂದ ಪಶ್ಚಿಮ ಯುರೋಪು ಅಮೇರಿಕನ್ ಪ್ರಭಾವಕ್ಕೊಳಗಾಗಿ ಒಂದಾಗಬಹುದು. ಅದರೆ ಪೂರ್ವ ಯುರೋಪಿನಲ್ಲಿ ಅವರ ಪ್ರಭಾವ ಹಬ್ಬುವ ಮೊದಲೇ ರಶಿಯನ್ನರು ಸರ್ವ ಸ್ಲಾವ ಜನಾಂಗಗಳ ಸಂಯುಕ್ತ ರಾಜ್ಯವನ್ನೇ ಸ್ಥಾಪಿಸಿ ಬಿಡಬಹುದೆಂದು ಸಂಶಯಕ್ಕೆಡೆಯುಂಟಾಗಿದೆ. ಬಾಲ್ಕನದಲ್ಲಿ ನಡೆದಿರುವ ಘಟನೆಗಳು ಇದನ್ನೇ ಸೂಚಿಸುತ್ತಿರಬಹುದು. ರುಮೇನಿಯಾ—ಯುಗೋಸ್ಲೋವಿಯಾಗಳಲ್ಲಿ ನಿಕಟ ಸಹಕಾರ ಬೇಕೆಂದು ಸೂಚಿಸಿದ್ದು ಅರ್ಥಪೂರ್ಣವಾಗಿದೆ.

ಹೀಗೆ ಇತ್ತಂಡಗಳೂ ನಡು ಬಿಗಿಯುತಿವೆ. ಕಳೆದವಾರ ಅಧ್ಯಕ್ಷ ಟ್ರೂಮನ್ನರು ಸಾರಿದರು: "ನಾವು ಯಾವಾಗಲೂ ಬಲಿಷ್ಠರಾಗಿರಬೇಕು. ನಮ್ಮ ದೌರ್ಬಲ್ಯವನ್ನರಿತೇ ಜಪಾನ ಜರ್ಮನಿಗಳು ನಮ್ಮ ಮೇಲೆರಗಿದವು. ಇನ್ನೊಮ್ಮೆ ಅಂಥ ಅವಕಾಶ ಕೊಡೋಣ ಬೇಡ."

ಮೂರನೆಯವನ ಆಯ

ಈ ವಿಜಯಿಗಳ ನಡುವಣ ಈ ತಿಕ್ಕಾಟದ ಫಲವಾಗಿ ಬೇರಾರಿಗಲ್ಲದಿದ್ದರೂ ಜರ್ಮನಿ ಜಪಾನಗಳಿಗೆ ಲಾಭವಾಗುವಂತೆ ಕಾಣುತ್ತದೆ.

※ ಕಳೆದ ವಾರ ಜರ್ಮನಿಯ ಬ್ರಿಟಿಶ ಹಾಗು ಅಮೇರಿಕನ್ ಆಕ್ರಮಣ ವಿಭಾಗಗಳ ಸಂಗಮದ ಒಪ್ಪಂದವಾಯಿತು. ಅದರ ಪ್ರಕಾರ ಆ ಎರಡು ವಿಭಾಗಗಳಲ್ಲಿರುವ ಜರ್ಮನರಿಗೆ ಹಿಂದೆಂದೂ ಕೊಟ್ಟಿರದಷ್ಟು ಸ್ವಾಯತ್ತತೆಯನ್ನು ಕೊಡಲಾಗಿದೆ. ೫೪ ಸದಸ್ಯರುಳ್ಳ ಒಂದು ಸಮಿತಿಯನ್ನು ಸ್ಥಾಪಿಸಿ ಅದಕ್ಕೆ ಸರಕುಗಳ ಉತ್ಪಾದನ, ವಿತರಣ, ಸಂಗ್ರಹ, ಆಹಾರ ಹಂಚಿಕೆ ಮೊದಲಾದ ವಿಷಯಗಳ ಪೂರ್ಣಾಧಿಕಾರ ಕೊಡಲ್ಪಟ್ಟಿತು.

※ ಅದಾಗಿ ಕೆಲ ದಿನಗಳಲ್ಲಿ ಜರ್ಮನಿಯ ನಾಲ್ಕು ಆಕ್ರಮಣ ವಿಭಾಗಗಳಲ್ಲಿರುವ ವಿವಿಧ ಜರ್ಮನ್ ಪ್ರಾಂತಗಳ ಮುಖ್ಯ ಮಂತ್ರಿಗಳ ಸಭೆ ಸೇರಿತು. ಜರ್ಮನ್ ರಾಜಕೀಯ ಐಕ್ಯದ ಪ್ರಶ್ನೆಯನ್ನು ಚರ್ಚಿಸಕೂಡದೆಂದು ನಿರ್ಣಯಿಸಲ್ಪಟ್ಟದ್ದರಿಂದ ರಶಿಯನ್ ಭಾಗದ ಮುಖ್ಯ ಮಂತ್ರಿಗಳು ಸಭಾತ್ಯಾಗ ಮಾಡಿದರು. ಉಳಿದ ಭಾಗಗಳ ಮುಖ್ಯಮಂತ್ರಿಗಳು ಒಂದು ಗೊತ್ತುವಳಿಯ ಮೂಲಕ ಅತ್ಯಂತ ನಿರ್ದಾಕ್ಷಿಣ್ಯ ರೀತಿಯಲ್ಲಿ ಹಲವು ಬೇಡಿಕೆಗಳನ್ನು ಮಿತ್ರರ ಮುಂದೆ ಮಂಡಿಸಿದರು. ಹಿರಿ ರಾಷ್ಟ್ರಗಳಲ್ಲಿರುವ ವೈಷಮ್ಯವಲ್ಲದಿದ್ದರೆ ಅವರಿಗೀ ಧೈರ್ಯ ಬರುತಿದ್ದಿಲ್ಲ.

※ ಇದೇ ವೈಷಮ್ಯದ ಉಪಯೋಗ ಪಡೆಯಲೆತ್ನಿಸುತ್ತ, ಜಪಾನದ ಹೊಸ ಮತ್ತು ಪ್ರಥಮ ಕ್ರೈಸ್ತ ಮುಖ್ಯ ಮಂತ್ರಿಯಾದ ಕಾಟಯಾಮಾನು ರಶಿಯಾಕ್ಕೆ ಜಪಾನು ಬಿಟ್ಟುಕೊಟ್ಟ ಕುರಾಯಿಲ ದ್ವೀಪಗಳನ್ನು ತಮಗೆ ತಿರುಗಿ ಕೊಡಿಸಬೇಕೆಂದು ಕೇಳಿದ್ದಾನೆ.

ಯಹೂದ್ಯರ ಉಪದ್ವ್ಯಾಪ

ಕಳೆದ ವಾರ ಕೆಲ ಬ್ರಿಟಿಶ ಮಂತ್ರಿಗಳಿಗೂ ಇತರ ಪ್ರಮುಖ ವ್ಯಕ್ತಿಗಳಿಗೂ ಕೆಲವು ಪುಡಿಕೆಗಳು ಟಪಾಲಿನಿಂದ ಬಂದವು. ಸಂಶಯಗೊಂಡು ಅವರು ಅವನ್ನು ಪೋಲೀಸರ ಕಡೆ ಕಳಿಸಿದರು. ಒಡೆದು ನೋಡಲು ಪ್ರಾಣಘಾತಕ ಸ್ಫೋಟಕಗಳು ಅವುಗಳಲ್ಲಿರುವದು ತಿಳಿದು ಬಂತು. ಸ್ಕಾಟ್ಲಂಡ ಯಾರ್ಡ ಪೋಲೀಸರು ಎಲ್ಲರಿಗೂ ಎಚ್ಚರಿಕೆ ಕಳಿಸಿದರು. ಕೆಲ ದಿನಗಳಲ್ಲಿ ಸ್ವಿಝರ್ಲಂಡಿನಲ್ಲೊಬ್ಬ ಯಹೂದ್ಯ ಈ "ಟೈಮ ಬಾಂಬ"ನ್ನು ೨೪ ಬ್ರಿಟಿಶ ಪ್ರಮುಖರಿಗೆ ಕಳಿಸಿದವನು ತಾನೆಂದು ಅಮೇರಿಕನ್ ಸುದ್ದಿಗಾರರಿಗೆ ತಿಳಿಸಿದನಂತೆ. ಅವನು ಪಾಲಿಸ್ತೈನ ಯಹೂದ್ಯ ಕ್ರಾಂತಿಕಾರ ಸಂಸ್ಥೆಯ ಪರವಾಗಿ ಅವನ್ನು ಕಳಿಸಿದ್ದ. ಪಾಲಿಸ್ತಾನ ಯಹೂದ್ಯರು ವಾರವಾರವೂ ಏನಾದರೊಂದು ಅನಾಹುತ ನಡೆಸುತ್ತಲೇ ಇರುವರು. ಈ ವಾರದ ಯಾದಿಯಲ್ಲಿ ಇವು ಬರುತ್ತವೆ.

※ ಸ್ಫೋಟಕ ಪತ್ರ ಕಳಿಸಿದ್ದು.

※ ಹೈಫಾ (ಪಾಲಿಸ್ತಾನ) ಬಳಿ ಇರಾಕ ಪೆಟ್ರೋಲಿಯಂ ಕಂಪನಿ (ಬ್ರಿಟಿಶ ಸಂಸ್ಥೆ) ಯ ಪೆಟ್ರೋಲ ನಳಿಗೆಯನ್ನು ಧ್ವಂಸಗೊಳಿಸಿದ್ದು.

※ ಎರಡು ಸರಕಿನ ರೇಲು ಗಾಡಿಗಳನ್ನುರುಳಿಸಿದ್ದು.

ಪಾಲಿಸ್ತಾನಕ್ಕೆ ಅಕ್ರಮವಾಗಿ ವಲಸೆ ಬರುವ ಯಹೂದ್ಯರನ್ನು ತಡೆದು ಸಾಯಪ್ರಸ್ ದ್ವೀಪಕ್ಕೆ ಈಗಿನಂತೆ ಕಳಿಸುತ್ತಲೇ ಹೋದರೆ ಇನ್ನೂ ಅನಾಹುತ ಮಾಡುವದಾಗಿ ಕ್ರಾಂತಿಕಾರರು ಬೆದರಿಸಿದ್ದಾರೆ.

ಇತ್ತ ಪಾಲಿಸ್ತಾನ ಸತ್ಯಶೋಧಕಸಮಿತಿಯೊಡನೆ ಸಹಕರಿಸಬೇಕೋ ಬಹಿಷ್ಕರಿಸಬೇಕೋ ಎಂಬ ಬಗ್ಗೆ ಅರಬ ರಾಷ್ಟ್ರಗಳಲ್ಲಿ ಅನೈಕ್ಯವುಂಟಾಗಿ ನಿರ್ಣಯವನ್ನು ಆಯಾ ರಾಷ್ಟ್ರದ ಇಚ್ಛೆಗೆ ಬಿಡಲಾಯಿತು.

ಇಂಡೋನೇಶಿಯಾದ ಸಮ್ಮತಿ

ಇಂಡೊನೇಶಿಯಾದಲ್ಲಿ ಶಾಂತಿ ಸ್ಥಾಪಿಸುವ ಮತ್ತು ನಡುಗಾಲ ಸರಕಾರವನ್ನು ಸ್ಥಾಪಿಸುವ ಬಗ್ಗೆ ಡಚ್ ರಾಯಸಕ್ಕೆ ೧೪ ದಿನಗಳಲ್ಲಿ ಉತ್ತರ ಕೊಡಬೇಕೆಂಬ ಡಚ್ ಬೇಡಿಕೆಗೆ ಇಂಡೊನೇಶಿಯನ್ ಪ್ರಜಾರಾಜ್ಯದ ಮುಖ್ಯ ಮಂತ್ರಿ ಡಾ. ಶಹರೀರರು ಕಳೆದವಾರ ಒಪ್ಪಿಗೆ ಕೊಟ್ಟರು. ಹಿಂದುಸ್ತಾನದ ನಡುಗಾಲ ಸರಕಾರದ ಮಾದರಿಯಲ್ಲಿ ನಾಲ್ಕು ಪ್ರಜಾರಾಜ್ಯ ಪ್ರತಿನಿಧಿಗಳು ಇಬ್ಬರು ಡಚ್, ಒಬ್ಬ ಪೂರ್ವ ಇಂಡೊನೇಶಿಯನ್ ಹಾಗು ಒಬ್ಬ ಬೋರ್ನಿಯೋ ಪ್ರತಿನಿಧಿಗಳನ್ನೊಳಗೊಂಡ ಸರಕಾರವನ್ನು ಸ್ಥಾಪಿಸಬೇಕೆಂದೂ ಅದಕ್ಕೆ ಎಲ್ಲ ಅಧಿಕಾರಗಳನ್ನೊಪ್ಪಿಸಿ ಇಂಡೊನೇಶಿಯನ್ ಒಕ್ಕೂಟ ರಚನೆಯ ಕಾರ್ಯವನ್ನು ಅದರ ಮೇಲೆಯೆ ಬಿಡಬೇಕೆಂದೂ ಅವರು ಬೇಡಿದ್ದಾರೆ. ಡಚ್ಚರು ಇದನ್ನೆಲ್ಲ ಅಂಗೀಕರಿಸುವರೆನ್ನಬರುವದಿಲ್ಲ. ಅದರೆ ಹಿಂದೀ ಮುಂದಾಳುಗಳಂತೆ ಇಂಡೊನೇಶಿಯನ್ನರೂ "ಅರ್ಥಂತ್ಯಜತಿ ಪಂಡಿತಃ" ಎಂದಂತೆ ತೋರುತ್ತದೆ. ಇಂಡೊನೇಶಿಯನ್ನರು ಒಡಂಬಡಿಕೆಯ ಕರಾರುಗಳನ್ನು ಮುರಿಯುತಿದ್ದಾರೆಂದು ಡಚ್ಚರು ಪ್ರಚಾರ ಆರಂಭಿಸಿದರು. ಪಶ್ಚಿಮ ಜಾವಾದಲ್ಲಿ "ಪಾಕಿಸ್ತಾನಿ" ಗಳಿಗೆ ಬೆಂಬಲ ಕೊಟ್ಟರು. ಪೂರ್ವ ಇಂಡೊನೇಶಿಯನ್ ರಾಜ್ಯವೊಂದು ಬೇರೆಯೆ ಸ್ಥಾಪಿತವಾಗಲು ಅವಕಾಶ ಮಾಡಿದರು. ಅಲ್ಲದೆ ಏನಾದರೂ ನೆವ ತೆಗೆದು ಇಂಡೊನೇಶಿಯನ್ನರೊಡನೆ ಯುದ್ಧ ಹೂಡಲು ಹಾತೊರೆಯುತಿದ್ದಾರೆಂದೂ ಅದಕ್ಕೆ ಬೇಕಾದಷ್ಟು ಸಾಮರ್ಥ್ಯ ಅವರಿಗೀಗ ಒದಗಿದೆಯೆಂದೂ ಇದಕ್ಕೆಲ್ಲ ಅಧ್ಯಕ್ಷ ಟ್ರೂಮನ್ನರ ಬೆಂಬಲವೂ ಸಹಾಯವೂ ಇತ್ತೆಂದೂ ಸುದ್ದಿಯಿದೆ. ಅದರಿಂದ ಸಾಧ್ಯವಿದ್ದಷ್ಟನ್ನು ಉಳಿಸಿಕೊಳ್ಳಲು ಇಂಡೊನೇಸಿಯನ್ನರು ಡಚ್ಚರ ಸೂಚನೆಗಳನ್ನು ಮನ್ನಿಸಬೇಕಾಯಿತು.

† † †

ತುಣುಕುಗಳು

ಫ್ರೆಂಚ ಮೊರಕ್ಕೋದಲ್ಲಿ ೨೧ ವರ್ಷಗಳ ಹಿಂದೆ ದಂಗೆಯೆಬ್ಬಿಸಿ ಆ ರಿಯುನಿಯನ್ ದ್ವೀಪದಲ್ಲಿ ಸೆರೆಯಾಳಾಗಿದ್ದ ಅಬ್ದುಲ್ ಕರೀಮನನ್ನು ಫ್ರಾನ್ಸಿಗೆ ಒಯ್ಯುವಾಗ ಇಜಿಪ್ತದ ಸಮೀಪ ಅವನು ಹಡಗಿನಿಂದ ಪಾರಾಗಿ ಇಜಿಪ್ತ್ ರಾಜನ ಆಶ್ರಯ ಪಡೆದನು. ಈ ಒಳಸಂಚಿನಲ್ಲಿ ಇಜಿಪ್ತ್ ಸರಕಾರದ ಕೈಯಿದೆಯೆಂದು ಆರೋಪಿಸಿ ಫ್ರೆಂಚ ಸರಕಾರ ನಿಷೇಧ ವ್ಯಕ್ತಗೊಳಿಸಿದೆ.

† † †

ವೀಟನಾಮ ಅಧ್ಯಕ್ಷ ಹೋ ಚಿ ಮಿನ್ಹರೊಡನೆ ಫ್ರೆಂಚರು ನಡೆಸಿದ ಸಂಧಾನ ಮುರಿಯಿತು. ವೀಟನಾಮರು ಶಸ್ತ್ರತ್ಯಾಗ ಮಾಡಬೇಕು ಸ್ವಾತಂತ್ರ್ಯ ವಿರಬೇಕು ಎಂದು ಫ್ರೆಂಚರು ಕೇಳಿದ್ದರಿಂದ ಹೋ ಚಿ ಮಿನ್ಹರು ಅದನ್ನು ನಿರಾಕರಿಸಿದರು. ಅದರ ೧ ಲಕ್ಷ ಸೈನ್ಯ ಫ್ರೆಂಚರೊಡನೆ ಹೋರಾಡುತ್ತಲೇ ಹೋಗುವದು.

ನೇಕಾರಿಕೆ ಉದ್ಯಮ

ಲೇ:— ಶ್ರೀ ಎ. ಸಿದ್ದಮ್ಮನವರು, ಎಮ್ಮಿಗನೂರು

ನೇಕಾರಿಕೆಯನ್ನು ಮುಖ್ಯವಾಗಿ, ದೇವಾಂಗ ಕೋಷ್ಟಿ, ಖಾತ್ರಿ, ಮೋಮಿನ್ (ಮಹಮ್ಮದೀಯ) ಜಾತಿಯವರು ವೃತ್ತಿಯನ್ನು ಪುರಾತನ ಕಾಲದಿಂದ ಕೈಕೊಂಡಿರುವರು. ಇತ್ತೀಚೆಗೆ ಬೇರೆ ಜಾತಿಯವರು ಸಹಾ ಸೇರಿರುತ್ತಾರೆ.

ನೇಕಾರ ಪರಿಶ್ರಮ ಹುಟ್ಟಿದಂದಿನಿಂದ ಅನೇಕ ಬದಲಾವಣೆಗಳಾಗಿ, ಮಿಲ್ಲುಗಳ ಪೈಪೋಟಿ ಬಂದ ನಂತರ ಈ ಪರಿಶ್ರಮಕ್ಕೆ ಪ್ರೋತ್ಸಾಹ ಕಡಿಮೆಯಾಗುತ್ತಾ ಬಂದಿದೆ. ಈ ಪರಿಶ್ರಮವು ಗ್ರಾಮೋದ್ಯೋಗಗಳಲ್ಲಿ ಅಗ್ರಸ್ಥಾನ ವಹಿಸಿದ್ದರೂ ಇತ್ತೀಚೆಗೆ ಪಟ್ಟಣಗಳಲ್ಲಿ ಫ್ಯಾಕ್ಟರಿಗಳು ಸ್ಥಾಪಿಸಲ್ಪಟ್ಟು ಇವುಗಳ ಮೂಲಕ ಅನೇಕ ಕೈಮಗ್ಗಗಳು ನಡೆಯಿಸಲ್ಪಡುತ್ತಿವೆ:— ಏಕೆಂದರೆ ದೊಡ್ಡ ಪಟ್ಟಣಗಳಲ್ಲಿ ಬಟ್ಟೆ ತಯಾರು ಮಾಡುವುದಕ್ಕೆ ಬೇಕಾದ, ನೂಲು, ಬಣ್ಣ, ಇತರ ಸಲಕರಣೆಗಳು ಅಗ್ಗವಾಗಿ ಸಿಕ್ಕುತ್ತವೆ. ಇದಲ್ಲದೆ ತಾವು ತಯಾರು ಮಾಡಿದ ಬಟ್ಟೆಯನ್ನು ಅದೇ ಸ್ಥಳದಲ್ಲಿಯಾಗಲಿ ಅಥವಾ ಇತರ ದೊಡ್ಡ ಪಟ್ಟಣಗಳಿಗೆಯಾಗಲಿ ಸುಲಭವಾಗಿ ಹೆಚ್ಚಿನ ಧಾರಣೆಗೆ ಮಾರಲಿಕ್ಕೆ ಅನುಕೂಲಗಳುಂಟು. ಈ ಕಾರಣಗಳಿಂದ ಕೈಮಗ್ಗದ ನೇಕಾರರ ಪೈಕಿ ಈಗ ಸರಾಸರಿ ೩೦% ಪಟ್ಟಣಗಳಲ್ಲಿ ವಾಸ ಮಾಡುತಿದ್ದಾರೆ. ನೇಕಾರರನ್ನು ೪ ಪಂಗಡಗಳಾಗಿ ವಿಭಾಗಿಸಬಹುದು.

೧. ಸ್ವಂತ ಮಗ್ಗವುಳ್ಳವರು.
೨. ಸಾಹುಕಾರರಲ್ಲಿ ಕೆಲಸ ಮಾಡುವವರು.
೩. ಕಾರಖಾನೆಗಳಲ್ಲಿ ಕೆಲಸ ಮಾಡುವವರು.
೪. ಸಹಕಾರ ಸಂಘಗಳಲ್ಲಿ ಕೆಲಸ ಮಾಡುವವರು.

ನಮ್ಮ ದೇಶದಲ್ಲಿ ಯಾವ ಯಾವ ಪ್ರಾಂತದಲ್ಲಿ ಎಷ್ಟು ಮಗ್ಗಗಳಿವೆ. ಮೇಲ್ಕಾಣಿಸಿದ ಪಂಗಡಗಳಿಗೆ ಎಷ್ಟು ಶತಾಂಶಯಿರುವುದೆಂಬುದು ಈ ಕೆಳಗೆ ಕಾಣಿಸಲಾಗಿದೆ.

ಪ್ರಾಂತ	ಸ್ವಂತಮಗ್ಗ ಉಳ್ಳವರು	ಸಾಹುಕಾರರಲ್ಲಿ ಕೆಲ್ಸಮಾಡುವವರು	ಕಾರಖಾನೆಗಳಲ್ಲಿರುವವರು	ಸಹಕಾರ ಸಂಘಗಳಲ್ಲಿರುವವರು	ಒಟ್ಟು ಮಗ್ಗಗಳು
೧ ಅಸ್ಸಾಂ	೯೯ %	½ %	½ %	—	೪೨೧೦೦೦
೨ ಬಂಗಾಲ	—	—	—	—	೨೦೮೯೭೯
೩ ಬಿಹಾರ	೯೮ %	೨ %	—	—	೧೦೨೬೯೩
೪ ಬೊಂಬಾಯಿ	೨೧ %	೨೪ %	೫೪ %	೧ %	೧೭೭೦೦೦
೫ ಮಧ್ಯಪ್ರಾಂತ	೮೦ %	೧೮ %	೨ %	—	೭೦೩೯೦
೬ ಮದರಾಸ್	೨೮ %	೬೦ %	೮ %	೪ %	೪೨೭೬೦೬
೭ ಒರಿಸ್ಸಾ	೨೦ %	೭೯ %	—	—	೫೦೦೦೦
೮ ಪಂಜಾಬ್	೫೮ %	೩೯ %	೨ %	೧ %	೩೫೫೮೫೪
೯ ಸಿಂಧ್	೧೦ %	೮೦ %	೫ %	೫ %	೪೫೬೯
೧೦ ಸಂಯುಕ್ತಪ್ರಾಂತ	—	—	—	—	೨೪೪೭೧೨
೧೧ ಹೈದರಾಬಾದ	೨೬ %	೩೨ %	೪೦ %	೨ %	೧೨೯೦೧೫
೧೨ ಮೈಸೂರು	—	—	—	—	೩೫೭೦೦
೧೩ ತಿರುವಾಂಕೂರು	೪೭ %	೨೧ %	೩೨ %	—	೧೯೦೧೦

ಯುದ್ಧಕ್ಕೆ ಪೂರ್ವದಲ್ಲಿ ತಿಂಗಳೊಂದಕ್ಕೆ ಒಬ್ಬ ನೇಕಾರನು ಸರಾಸರಿ ೧೦/– ರಿಯಿಂದ ರೂ ೨೦/– ವರೆಗೂ ದುಡಿಯುತ್ತಿದ್ದನು. ಈಗ ರೂ ೩೫/–ರಿಂದ ರೂ ೫೦/— ವರಿವಿಗೆದುಡಿಯುತ್ತಿರುವನು. ಕೈಮಗ್ಗದ ಬಟ್ಟೆ ತಯಾರು ಮಾಡುವುದಕ್ಕೆ ಬೇಕಾದ ನೂಲು ವ್ಯಾಪಾರಿಗಳ ಕೈಯಲ್ಲಿರುವುದರಿಂದ ನೂಲಿನ ಧಾರಣೆ ಹೆಚ್ಚಾಗುವುದಕ್ಕೆ ಅಸ್ಪದವುಂಟಾಗಿದೆ. ಕೈಮಗ್ಗಗಳ ಮೇಲೆ ಹತ್ತಿ ನೂಲು ಮಾತ್ರವಲ್ಲದೆ, ರೇಷ್ಮೆ, ಮರ್ಸ್ರೈಜಡ್ ನೂಲು ಆರ್ಟಿಫಿಷಿಯಲ್ ಸಿಲ್ಕು ಮುಂತಾದವುಗಳನ್ನು ಉಪಯೋಗಿಸಲಾಗುತ್ತಿವೆ.

ಮಾರಾಟ

ಕೈಮಗ್ಗದ ಬಟ್ಟೆಗೆ ಸರಿಯಾದ ಮಾರ್ಕೆಟ್ಟು ಸಿಗಬೇಕಾದರೆ ಇನ್ನೂ ಹೆಚ್ಚು ಚಳವಳಿ ಅವಶ್ಯ. ಮದ್ರಾಸ್ ಪ್ರಾಂತದಲ್ಲಿ ತಯಾರಾದ ಕೆಲವು ರಕಂಗಳು ಸಿಲೋನ್, ಬರ್ಮಾ, ಆಫ್ರಿಕಾ ಮುಂತಾದ ದೇಶಗಳಿಗೆ ರವಾನೆಯಾಗುತ್ತಿದ್ದವು. ಇತ್ತೀಚೆಗೆ ಮಿಲ್ ಪೈಪೋಟಿ, ಪ್ಯಾಷನ್ ಬದಲಾವಣೆ, ರವಾನೆ ಸೌಕರ್ಯಗಳು ಸಕಾಲಕ್ಕೆ ದೊರೆಯದಂತಿರುವುದು ಮುಂತಾದ ಕಾರಣಗಳಿಂದ ಬೇರೆ ಪ್ರಾಂತಗಳಿಗೆ ಮತ್ತು ದೇಶಗಳಿಗೆ ರವಾನೆಯಾಗುತ್ತಿಲ್ಲ. ಈ ಕಾರ್ಯಕ್ಕೆ ತಕ್ಕ ಸಂಘಗಳ ಸ್ಥಾಪನೆ ಅವಶ್ಯ. ಪ್ರತಿ ಪ್ರಾಂತಕ್ಕೂ ಮಾರುವ ಸಂಘಗಳಾಗಬೇಕು.

ಸಹಕಾರ ಸಂಘಗಳು

ನೇಕಾರ ಸಹಕಾರ ಸಂಘಗಳು ಈ ಶತಮಾನದ ಆದಿಯಲ್ಲಿ ಸ್ಥಾಪಿಸಲ್ಪಟ್ಟರೂ ೧೯೩೫ ರವರೆಗೆ … ೧೯೩೫ ನೇ ವರ್ಷ

ದಲ್ಲಿ ಸೆಂಟ್ರಲ್ ಗವರ್ನಮೆಂಟ್‌ನವರು ಈ ಪರಿಶ್ರಮಕ್ಕೆ ಪ್ರತಿಪ್ರಾಂತಕ್ಕೂ ಗ್ರಾಂಟುಗಳು ಕೊಡುತ್ತಾ ಬಂದರು. ಇದರಿಂದ ಸಾಕಷ್ಟು ಉತ್ತೇಜನ ದೊರೆಯದಿದ್ದರೂ ಸಹಕಾರ ಸಂಘಗಳಿಂದ ಆಗಬಹುದಾದ ಉಪಯೋಗಗಳು ಕೆಲವು ಮಟ್ಟಿಗೆ ನೇಕಾರರು ತಿಳಿದುಕೊಳ್ಳಲು ಅವಕಾಶವುಂಟಾಗಿದೆ. ಈ ಗ್ರಾಂಟುಗಳು ಮದ್ರಾಸು ಪ್ರಾಂತ ಹೆಚ್ಚಾಗಿ ಲಾಭ ಹೊಂದಿದೆಯೆನ್ನಬಹುದು, ಮದ್ರಾಸ ಪ್ರಾಂತದಲ್ಲಿ "ಮದರಾಸ್ ಹ್ಯಾಂಡ್‌ಲೂಮ್ ವೀವರ್ಸ್ ಕೋಆಪರೇಟಿವ್ ಪ್ರೊವಿನ್ಶಿಯಲ್ ಸೊಸೈಟಿ ಯೊಂದು ೧೯೩೫ ರಲ್ಲಿ ಸ್ಥಾಪಿಸಲ್ಪಟ್ಟು ನೇಕಾರರಿಗೆ ಬೇಕಾದ ಅನುಕೂಲಗಳನ್ನು ಒದಗಿಸಿ ಕೊಡುತ್ತಿದೆ. ಅದರ ನೇತೃತ್ವದಲ್ಲಿ ಸುಮಾರು ೩೦೦ ಪ್ರೈಮರೀ ಸೊಸೈಟಿಗಳು ಕೆಲಸ ಮಾಡುತ್ತಿವೆ. ಈ ಸಂಘವು ಪ್ರೈಮರಿ ಸೊಸೈಟಿಗಳಿಗೆ ಬೇಕಾದ ನೂಲು, ಬಣ್ಣ ಮುಂತಾದವುಗಳು ಅತಿ ಯೋಗ್ಯ ಬೆಲೆಯಲ್ಲಿ ಸಕಾಲಕ್ಕೆ ಒದಗಿಸಿಕೊಟ್ಟು ಅವುಗಳಲ್ಲಿ ತಯಾರಾದ ಬಟ್ಟೆಗಳೆಲ್ಲ ಮಾರಾಟಮಾಡಿಕೊಡುತ್ತದೆ. ಈ ಸಂಘದ ಆಡಳಿತೆಯಲ್ಲಿ ಪ್ರಾಂತದ ಮುಖ್ಯ ಸ್ಥಳಗಳಲ್ಲೆಲ್ಲ ಅಂಗಡಿಗಳಿವೆ. ಈ ಸಂಘವು ಇತರ ಪ್ರಾಂತಗಳಿಗೂ ದೇಶಗಳಿಗೂ ಸಹಾ ಬಟ್ಟೆಯನ್ನು ಮಾರಾಟ ಮಾಡುತ್ತದೆ. ಪ್ರಸ್ತುತ ಪ್ರಾಂತದಲ್ಲಿರುವ ೫ ಲಕ್ಷ ಮಗ್ಗಗಳಲ್ಲಿ ೧ ಲಕ್ಷ ಮಗ್ಗಗಳು ಸಹಕಾರ ಸಂಘಗಳಲ್ಲಿ ಸೇರಿವೆ. ಉಳಿದ ಮಗ್ಗಗಳನ್ನು ಸಹಾ ಸೇರಿಸಬೇಕೆಂಬ ಯೋಜನೆ ಇದೆ. ಈಗಾಗಲೆ ಪ್ರಭುತ್ವದವರು ಅದನ್ನು ಆಚರಣೆಯಲ್ಲಿಟ್ಟಿದ್ದಾರೆ. ಇಂತಹ ಯೋಜನೆಯೇ ಇತರ ಪ್ರಾಂತಗಳಲ್ಲಿ ಸ್ಥಾಪಿಸಲ್ಪಡುವಂತೆ ಪ್ರಜಾಪ್ರತಿನಿಧಿಗಳು ಪ್ರಯತ್ನಪಡಬೇಕಾಗಿ ನನ್ನ ಪ್ರಾರ್ಥನೆ. ಈ ಪರಿಶ್ರಮವು ಅಭಿವೃದ್ಧಿ ಹೊಂದುವುದಕ್ಕೆ ಅಖಿಲ ಭಾರತ ಕೈಮಗ್ಗದ ಬೋರ್ಡಿನಲ್ಲಿ ಹೆಚ್ಚಾಗಿ ನೇಕಾರರ ಪ್ರತಿನಿಧಿಗಳೇ ಇರಬೇಕು.

ನೇಕಾರ ಪರಿಶ್ರಮ ಉಳಿಯುವುದೋ?

ಮಿಲ್ಲುಗಳ ಪೈಪೋಟಿ ಬಂದ ನಂತರ ನೇಕಾರನು ಕೈಮಗ್ಗದ ಬಟ್ಟೆ ಅಗ್ಗವಾಗಿ ಮಾರಬೇಕಾಯಿತಲ್ಲದೆ ತನಗೆ ಬರಬೇಕಾದ ಕೂಲಿ ಸಹಾ ಕಡಿಮೆ ತೆಗೆದುಕೊಳ್ಳಬೇಕಾಯಿತು. ಇದರಿಂದ ನೇಕಾರನ ಜೀವನಮಟ್ಟ (Standard of living) ಇಳಿಯುತ್ತಾ ಬಂದಿದೆ. ನಿರುದ್ಯೋಗವು ಸಹಾ ಹಬ್ಬುತ್ತಲಿದೆ. ಅನೇಕ ನೇಕಾರರು ಈಗಾಗಲೇ ಕ್ಷುಧಾರ್ತಿಯ ಗೆರೆಯನ್ನು ಸಮೀಪಿಸುತ್ತಿರುವರೆಂದರೆ ಅತಿಶಯೋಕ್ತಿಯಾಗಲಾರದು.

ದೇಶದ ಅನೇಕ ಕಡೆಗಳಲ್ಲಿ ನೇಕಾರ ಪರಿಶ್ರಮ ಇಷ್ಟು ಹೀನ ಸ್ಥಿತಿಯಲ್ಲಿರುವಾಗ ಇನ್ನು ಮೇಲೆ ಇಮ್ಮಡಿಯಾಗಿ ಬರಬಹುದಾದ ಮಿಲ್ಲುಗಳ ಪೈಪೋಟಿಯಿಂದಲೂ ಮತ್ತು ಸಾಕಷ್ಟು ಸಂಘಬಲ, ಪ್ರಭುತ್ವದವರ ಸಹಾಯ, ಇಲ್ಲದಿರುವುದರಿಂದಲೂ ಈ ಪರಿಶ್ರಮವು. ಗ್ರಾಮೋದ್ಯೋಗ ಪರಿಶ್ರಮಗಳಲ್ಲಿ ಅತಿ ಚಿಕ್ಕದಾಗಿ ಉಳಿಯುವದೆಂಬ ಅಭಿಪ್ರಾಯ ಕೆಲವರಲ್ಲಿದೆ. ಇದಕ್ಕೆ ಕಾರಣ ಇತರ ದೇಶಗಳಲ್ಲಿ ಹೀಗಾದುದರಿಂದ. ಉದಾಹರಣೆಗಾಗಿ ಜಪಾನ ದೇಶ ತೆಗೆದುಕೊಳ್ಳಿರಿ. ಅಲ್ಲಿ ೧೯೨೩ ರಲ್ಲಿ ೧,೫೦,೦೦೦ ಕೈಮಗ್ಗಗಳಿದ್ದು ೧೯೩೪ ಕ್ಕೆ ಕೇವಲ ೫೫,೦೦೦ ಮಾತ್ರ ಉಳಿದವು. ಉಣ್ಣೆ ಬಟ್ಟೆ ತಯಾರು ಮಾಡುವ ಕೈಮಗ್ಗಗಳ ಸಂಖ್ಯೆಯು ಬಹಳ ಕಡಿಮೆಯಾಗುತ್ತ ಬಂದು ೧೯೨೩ ನೇ ವರ್ಷದಲ್ಲಿ ಒಟ್ಟು ಮಗ್ಗಗಳಲ್ಲಿ ೪೭% ಪವರ್ ಲೂಮ್‌ಗಳು ೫೩% ಕೈಮಗ್ಗಗಳು ಇದ್ದವು— ೧೯೩೪ ಕ್ಕೆ ೯೯% ಪವರ್ ಲೂಮ್‌ಗಳು, ೧% ಮಾತ್ರ ಕೈಮಗ್ಗಗಳು ಉಳಿದಿವೆ. ಈ ೧% ಮಗ್ಗಗಳಲ್ಲಿಯೂ ಪವರ್ ಲೂಮ್‌ಗಳ ಮೇಲೆ ತಯಾರಾಗದಂತಹ ಬಟ್ಟೆ ನೇಯಲ್ಪಡುತ್ತಿದೆ. ಅಮೇರಿಕೆಯಲ್ಲಿಯೂ ಅಷ್ಟೇ–

ಆದರೆ ಇಂತಹ ಪರಿಸ್ಥಿತಿ ನಮ್ಮ ದೇಶದಲ್ಲಿ ಬರುವುದಿಲ್ಲ ಎನ್ನುವುದಕ್ಕೆ ಈ ಕೆಳಗೆ ಕಾಣಿಸಿದ ಕಾರಣಗಳನ್ನು ಕೊಡಬಹುದು.

ನಮ್ಮ ದೇಶದಲ್ಲಿ ಒಕ್ಕಲತನ ನಬಿಟ್ಟರೆ ನೇಕಾರ ಪರಿಶ್ರಮವು ಅಗ್ರಸ್ಥಾನ ವಹಿಸಿದೆ. ಅದು ಸುಮಾರು ಒಂದು ಕೋಟಿ ಜನರ ಮುಖ್ಯ ವೃತ್ತಿಯಾಗಿದೆ. ನಮ್ಮ ದೇಶದಲ್ಲಿರುವ ಸುಮಾರು ೨೫ ಲಕ್ಷ ಕೈಮಗ್ಗಗಳು ದೇಶದ ಅನೇಕ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ಹಬ್ಬಿವೆ. ದೇಶದಲ್ಲಿ ಉಪಯೋಗಿಸಲ್ಪಡುವ ಬಟ್ಟೆಯಲ್ಲಿ ೩೦/. ಮಾತ್ರ ಕೈಮಗ್ಗಗಳಮೇಲೆ ತಯಾರಾಗುತ್ತಿದ್ದರೂ ಮಿಲ್ಲುಗಳಲ್ಲಿ ಕೆಲಸಮಾಡುವವರಲ್ಲಿ ನೂರಕ್ಕೆ ಐದರಷ್ಟು ಕೈಮಗ್ಗದ ನೇಕಾರರಿರುತ್ತಾರೆ. ಕೈಮಗ್ಗದ ಬಟ್ಟೆಗೆ ಸಾಕಷ್ಟು ಗಿರಾಕಿಯಿದೆ.

ನಮ್ಮ ದೇಶದಲ್ಲಿ ಕೂಲಿಕಾರರು ಹಳ್ಳಿಗಳಲ್ಲಿಯೇ ಹೆಚ್ಚಾಗಿರುವರು. ಇವರಿಗೆ ಸರಿಯಾದ ಕೆಲಸ ಒದಗಿಸಿ ಕೊಡಬೇಕಾದರೆ ನೇಕಾರ ಪರಿಶ್ರಮ ಅತ್ಯುಪಕಾರಿಯಾಗಿದೆ.

ಬಡಜನರ ಸಾಮಾಜಿಕ ಮತ್ತು ಆರ್ಥಿಕಾಭಿವೃದ್ಧಿಗೆ ಈ ಪರಿಶ್ರಮವು ಹೆಚ್ಚು ಸಹಕರಿಯಾಗಿದೆ. ಹೇಗೆಂದರೆ ಮಿಲ್ಲುಗಳಲ್ಲಿ ತಯಾರಾದ ಬಟ್ಟೆಯ ಬೆಲೆಯಲ್ಲಿ ೨೫ ರಷ್ಟು ಮಾತ್ರ ಕೂಲಿಕಾರರಿಗೆ ಸಿಗುತ್ತದೆ. ಆದರೆ ಮಿಲ್ಲು ನೂಲಿನಿಂದ ಕೈಮಗ್ಗದ ಮೇಲೆ ತಯಾರಾದ ಬಟ್ಟೆಯ ಬೆಲೆಯಲ್ಲಿ ೪೦% ಕೈನೂಲಿನಿಂದ ಕೈಮಗ್ಗದ ಮೇಲೆ ತಯಾರಾದ ಬಟ್ಟೆಯ ಬೆಲೆಯಲ್ಲಿ (ಖಾದಿ) ೭೫% ಕೂಲಿಕಾರರಿಗೆ ಸೇರುತ್ತದೆ. ಅಲ್ಲದೆ ಈ ಪರಿಶ್ರಮದಲ್ಲಿ ಭಾಗ ವಹಿಸುವುದರಿಂದ ವ್ಯವಸಾಯದಾರ, ಬಡಿಗ, ಕಮ್ಮಾರ, ನೇಕಾರ ಇತ್ಯಾದಿ ವೃತ್ತಿಗಳುಳ್ಳವರಲ್ಲಿ ಸಹಕಾರಭಾವನೆ ಬೆಳೆಯುತ್ತದೆ.

೪) ವಿಕೇಂದ್ರೀಕರಣದ ಮೂಲಕ ಉಂಟಾದ ಉತ್ಪತ್ತಿಬಹಳ ಉತ್ತಮ ಮತ್ತು ಅಗ್ಗವಾದದ್ದು. ಚೈನಾ ಮತ್ತು ಜಪಾನು ದೇಶಗಳಲ್ಲಿ ಈ ತರಹದ ಯೋಜನೆಗಳು ಬಹಳ ಯಶಸ್ವಿಯಾಗಿವೆ. ನಮ್ಮ ದೇಶದಲ್ಲಿ ಅದೃಷ್ಟವಶಾತ್ ಉದ್ಯೋಗಗಳು ವಿಕೇಂದ್ರೀಕರಣವಾಗಿ ಬೇರೂರಿವೆ. ಇವುಗಳನ್ನು ಹೀನ ದಶೆಗೊಯ್ಯುವುದು ಯೋಗ್ಯವೆನಿಸಲಾರದು. ಹೇಗೆಂದರೆ ಕೇಂದ್ರೀಕರಿಸಲ್ಪಟ್ಟ ಮಿಲ್ಲುಗಳು, ದೊಡ್ಡ ಕಾರಖಾನೆಗಳು ಶತ್ರುಗಳ ಬಾಂಬುಗಳ ದಾಳಿಗೆ ಆಹುತಿಯಾಗಬಹುದು. ವಿಕೇಂದ್ರೀಕರಣವಾದ ಈ ಕೈಮಗ್ಗಗಳ ನೇಕಾರ ಪರಿಶ್ರಮಕ್ಕೆ ಈ ಬಾಂಬುಗಳಿಂದ ಯಾವ ಹಾನಿಯೂ ಆಗಲಾರದು. ಕಾರಣ ಕೈಮಗ್ಗಗಳು ದೇಶದ ಎಲ್ಲ ಭಾಗಗಳಲ್ಲಿ ಹಬ್ಬಿರುವುದರಿಂದ. ಇಷ್ಟು ಹೇಳಿದ ಮಾತ್ರಕ್ಕೆ ಮಿಲ್ಲುಗಳು ನಮ್ಮ ದೇಶದಲ್ಲಿರಬಾರದೆಂಬ ಅರ್ಥವಲ್ಲ. ದೇಶದಲ್ಲಿರುವ ಎಲ್ಲ ಕೈಮಗ್ಗದ ನೇಕಾರರಿಗೆ ಸಾಕಷ್ಟು ಕೆಲಸ ಕೊಟ್ಟು

—೧೧ನೇ ಪುಟಕ್ಕೆ

ಹಿಂದುಸ್ತಾನ—ಪಾಕಿಸ್ತಾನಗಳ ಆರ್ಥಿಕ ಶಕ್ತಿ

ಕೆಲವು ತುಲನಾತ್ಮಕ ಅಂಕೆ ಸಂಖ್ಯೆಗಳು

ಹಿಂದೀ ಉದ್ದಿಮೆದಾರರಾದ ಶ್ರೀ ಜಿ. ಡಿ. ಬಿರ್ಲಾರವರು "ಹಿಂದುಸ್ತಾನ ಹಾಗು ಪಾಕಿಸ್ತಾನಕ್ಕೆ ಸಂಬಂಧಿಸಿದ ಮೂಲಭೂತ ಸಂಗತಿಗಳು" ಎಂಬ ಪುಸ್ತಿಕೆ ಹೊರಡಿಸಿ ಅದರಲ್ಲಿ ದೇಶದ ವಿಚ್ಛೇದನೆಯಿಂದಾಗುವ ಪರಿಣಾಮಗಳನ್ನು ವಿಶೇಷತಃ ದೇಶದ ಆರ್ಥಿಕ ಪರಿಸ್ಥಿತಿಗೆ ಸಂಬಂಧಿಸಿ ಪೃಥಕ್ಕರಿಸಿದ್ದಾರೆ. ಈ ಪುಸ್ತಿಕೆಯನ್ನು ಅವರು ಹಿಂದೀ ಧುರೀಣರಿಗೂ ಕಳಿಸಿರುವರು.

ಅದರಲ್ಲಿ ಶ್ರೀ ಬಿರ್ಲಾರವರು ಸರಕಾರಿ ಅಂಕಿಗಳ ತಳಹದಿಯ ಮೇಲೆ ಕೆಳಗಿನ ಸಂಗತಿಗಳನ್ನು ಕೊಟ್ಟಿರುವರು:

ಔದ್ಯೋಗಿಕ ಕಾರಖಾನೆಗಳು (೧೯೩೯–-೪೦)

	ಹಿಂದುಸ್ತಾನ	ಪಾಕಿಸ್ತಾನ
ಜವಳಿ ಗಿರಣಿ	೩೮೦	೯
ನಾರಿನ,,	೧೦೮	೦
ಸಕ್ಕರೆ,,	೧೫೬	೧೦
ಕಬ್ಬಿಣ ಹಾಗು ಉಕ್ಕಿನ ಕಾರಖಾನೆ	೧೮	೦
ಸಿಮೆಂಟ ,,	೧೬	೩
ಕಾಗದ ,,	೧೬	೦
ಕಾಜಿನ ,,	೭೭	೨

ಉದ್ದಿಮೆ ಹಾಗು ವ್ಯವಸಾಯಿಕ ಉತ್ಪನ್ನ

ಕಣಿ ಮೊದಲಾದವು	ರೂ. ೯೪೧೪೭೬೨೪, ೨೩೫೪೦೮೮೦
ಜವಳಿ ಸರಕು	೪೪೮೬೮೭೮೬೦, ೨೭೨೧೮೨೨೩
ಲೋಹ ಹಾಗು ಲೋಹದ ಸರಕು	೬೫೨೪೪೮೩೫, ೧೮೭೩೩೯೭೪
ಕಟ್ಟಡ ಹಾಗು ಸಂಕೀರ್ಣ	೭೮೬೬೭೪೬೨, ೯೧೧೭೩೨೭೩
ವಿತರಣ ಹಾಗು ಮಾರ್ಗಸೌಕರ್ಯ ಸಾಧನಗಳು	೧೦೪೬೩೫೪೪೭೨, ೧೮೪೭೪೬೭೨೧
ಹಣಕಾಸು	೨೦೬೨೧೧೫೧೯, ೩೮೮೦೭೪೭೨

ಒಕ್ಕಲತನ ಹಾಗು ಆಹಾರ ಸಂಪತ್ತು

ಕಚ್ಚಾ ನಾರು	೯೮೩೫೧೯(ಎಕರೆ)	೧೪೦೩೭೦೦
,, ಹತ್ತಿ	೧೩೭೭೦೯೦೦	೧೬೩೦೦೦೦
ಚಹಾ	೬೪೧೨೪೩	೯೬೬೫೭
ಅಕ್ಕಿ	೧೭೨೨೯೦೦(ಟನ್)	೫೩೭೬೦೦೦
ಗೋದಿ	೪೧೯೯೭೪೦ ,,	೨೭೮೫೨೬೦
ಕಚ್ಚಾ ಸಕ್ಕರೆ	೨೬೩೧೦೦೦ ,,	೫೧೭೦೦೦
ಸೇಂಗಾ	೨೨೭೪೦೦೦ ,,	ಅಲ್ಪ, ಇಲ್ಲವೆ ಇಲ್ಲ

ಗಣಿ ಸಂಪತ್ತು

ಕಲ್ಲಿದ್ದಲಿ	೨೫೦೭೪೮೦೨(ಟನ್)	೧೯೮೪೭೬
ಪೆಟ್ರೋಲ	೬೫೯೬೮೬೫೧(ಗ್ಯಾಲನ್)	೨೧೧೧೩೪೨೦
ಕ್ರೊಮಾಯಿಟ	೫೧೯೪ (ಟನ್)	೨೧೮೯೨
ತಾಮ್ರ	೨೮೮೦೭೬ ,,	ಇಲ್ಲ
ಕಬ್ಬಿಣ	೧೪೨೧೭೦೧ ,,	೦
ಮ್ಯಾಂಗೇನೀಜ	೭೬೬೩೪೮ ,,	೦
ಮ್ಯಾಗ್ನೆಸಾಯಿಟ	೨೩೦೫೨ ,,	೦
ಅಭ್ರಕ	೧೦೮೮೩೪ (ಹಂ)	೦

ಮಾರ್ಗ ಸೌಕರ್ಯ ಸಾಧನಗಳು

ರೇಲ್ವೆ	೨೫೯೭೦ (ಮೈಲು)	೧೪೫೪೨
	೬೨೫೬೮ ಕೋಟಿ ರೂ ಬಂಡವಲು	೨೩೨೮೧ ಕೋಟಿ ರೂ
ರಸ್ತೆ	೨೪೬೬೦೫ (ಮೈಲು)	೪೯೮೬೩
ಜಲಶಕ್ತಿ	೧೩೪೩೦೦೦ (ಕಿಲೋವ್ಯಾಟ)	೨೮೪೭೦೦೦

ಆಯವ್ಯಯ

ಹಿಂದುಸ್ತಾನ ಹಾಗು ಪಾಕಿಸ್ತಾನಗಳ ಆಯವ್ಯಯಗಳನ್ನು ಕೆಳಗಿನಂತೆ ಹಿಡಿಯಲಾಗಿದೆ.

ಪ್ರಾಂತಿಕ— ಹಿಂದುಸ್ತಾನ ಆಯ ೧೪೩೩೮ ಲಕ್ಷ, ವ್ಯಯ ೧೪೨೨೭ ಲಕ್ಷ, ಉಳಿಕೆ ೧೧೧ ಲಕ್ಷ; ಪಾಕಿಸ್ತಾನ ಆಯ ೪೪೮೯ ಲಕ್ಷ, ವ್ಯಯ ೪೯೪೭ ಲಕ್ಷ, ಕೊರತೆ ೪೬೮ ಲಕ್ಷ,

ಕೇಂದ್ರ— ಹಿಂದುಸ್ತಾನ ಆಯ ೩೨೭೭೨೧ ಲಕ್ಷ, ವ್ಯಯ ೩೩೮೯೩೨ ಲಕ್ಷ, ಕೊರತೆ ೧೧೨೧೧ ಲಕ್ಷ; ಪಾಕಿಸ್ತಾನ ಆಯ ೮೨೯೫ ಲಕ್ಷ, ವ್ಯಯ ೧೧೬೨೯ ಲಕ್ಷ, ಕೊರತೆ ೩೩೩೪ ಲಕ್ಷ.

ಪ್ರಾಂತಿಕ ಹಾಗು ಕೇಂದ್ರ ಅಂಕಿಗಳನ್ನು ಕೂಡಿಸಿದಲ್ಲಿ ಹಿಂದುಸ್ತಾನಕ್ಕೆ ೧೧೧೦೦೦ ಲಕ್ಷ, ಪಾಕಿಸ್ತಾನಕ್ಕೆ ೩೮೦೨ ಲಕ್ಷ ಕೊರತೆ ಬೀಳುವದು.

ಈ ಪುಸ್ತಿಕೆಗೆ ಬಿರ್ಲಾರವರು ಒಂದು ಟಿಪ್ಪಣಿ ಜೋಡಿಸಿ ಪಾಕಿಸ್ತಾನದಲ್ಲಿ ಕನಿಷ್ಠ ಸದ್ಯದ ಮಟ್ಟದಲ್ಲಿ ಆಡಳಿತ ಹಾಗು ಸಾಮಾಜಿಕ ಕಾರ್ಯ ಸಾಗಿಸಿಕೊಂಡು ಹೋಗಬೇಕಾದರೆ ಸರಕಾರದಿಂದ ಭಾರಿ ವೆಚ್ಚ ಮಾಡಬೇಕಾಗುವದೆಂದೂ ಪಾಕಿಸ್ತಾನ ಭಾಗಗಳು ಗಡಿ ಭಾಗಗಳಾಗಿದ್ದರಿಂದ ಮಿಲಿಟರಿ ವೆಚ್ಚ ಬಹಳ ಬರುವದೆಂದೂ ಕಾಣಿಸಿದ್ದಾರೆ.

ಪಾಕಿಸ್ತಾನದಲ್ಲಿ ಕರಾಚಿ ಹಾಗು ಚಿತಗಾಂಗ ಎಂಬ ಎರಡು ದೊಡ್ಡ ಬಂದರಗಳು ಸಮಾವಿಷ್ಟವಾಗುವವು. ಈ ಬಂದರಗಳಲ್ಲಿ ೧೯೩೯—೪೦ ರಲ್ಲಿ ೨೪೪೧೦೦೦ ಟನ್ ಸರಕುಗಳ ಆಯಾತ ನಿರ್ಯಾತ ಆಗಿರುವದು. ಹಿಂದುಸ್ತಾನದಲ್ಲಿ ಮುಂಬಯಿ, ಕೋಚಿನ, ಮದ್ರಾಸ, ವಿಶಾಖಪಟ್ಟಣ ಹಾಗು ಕಲಕತ್ತಾ ಬಂದರಗಳು ಸೇರ್ಪಡೆಯಾಗುವವು. ೧೯೩೯—೪೦ ರಲ್ಲಿ ಈ ಬಂದರಗಳಲ್ಲಿ ಒಟ್ಟು ೧೬೫೮೮೦೦೦ ಟನ್ನುಗಳ ಆಯಾತ ನಿರ್ಯಾತ ಆಗಿರುವದು.

ಕರ್ಮವೀರ
ಹರಿಜನ ಪುರವಣಿ

ರಕ್ಷಾ ದುರ್ಗಗಳು

ಕಳೆದ ವಾರ ನಾನು ವಿವರಿಸಿದ ಬ್ರಹ್ಮಚರ್ಯದ ಪಾಲನೆಗಾಗಿ ಯಾವ ರಕ್ಷಾ ದುರ್ಗಗಳನ್ನು ಕಟ್ಟಿಸಬೇಕೆಂಬುದನ್ನು ನಾವು ಪ್ರಶ್ನಿಸುವಾ. ಉತ್ತರ ಸ್ಪಷ್ಟವಿದೆಂದೆನಿಸುತ್ತದೆ. ಬ್ರಹ್ಮಚರ್ಯಕ್ಕೇನು ರಕ್ಷಾ ದುರ್ಗಗಳ ಅವಶ್ಯಕತೆಯಿಲ್ಲ. ಹೀಗೆ ಹೇಳುವುದೇನೋ ಸುಲಭ ಮತ್ತು ಮನೋಹರವಾಗಿ ತೋರುತ್ತದೆ. ಆದರೆ ಆ ಹೇಳಿಕೆಯಲ್ಲಡಕವಾದ ರಹಸ್ಯವನ್ನು ತಿಳಿದುಕೊಳ್ಳುವುದು ಕಠಿನ, ಅದರಂತೆ ಆಚರಿಸುವುದಂತೂ ಅದಕ್ಕಿಂತ ಕಠಿನವಾಗಿದೆ. ನಿಜ ಬ್ರಹ್ಮಚಾರಿಗೆ ರಕ್ಷಾ ದುರ್ಗಗಳ ಅವಶ್ಯಕತೆಯಿಲ್ಲೆಂಬುದು ನಿಜ. ಆದರೆ ಆ ಅವಸ್ಥೆಯನ್ನು ಮುಟ್ಟಬೇಕೆಂದು ಬಯಸುವವನಿಗೆ, ಮಾವಿನ ಆಗಿಗೆ ಸುತ್ತಲೂ ಗಟ್ಟಿಮುಟ್ಟಾದ ಬೇಲಿ ಅವಶ್ಯವಾಗಿದ್ದಂತೆ ನಿಃಸಂದೇಹವಾಗಿ ರಕ್ಷಾ ದುರ್ಗಗಳ ಆವಶ್ಯಕತೆಯಿದೆ. ಮಗುವೊಂದು ತಾಯಿಯ ತೊಡೆಯ ಮೇಲಿಂದ ತೊಟ್ಟಿಲದಲ್ಲಿ ಒರಗುವುದು; ಅಲ್ಲಿಂದ ಒತ್ತುವ ಗಾಡಿಯಲ್ಲಿ ಕೊಡ್ರುವದು, ಯಾರ ಸಹಾಯವೂ ಇಲ್ಲದೆ ನಡೆಯಲಿಕ್ಕೆ ಬರುವ ವರೆಗೆ ಈ ಕ್ರಮ ನಡೆದೆ ಇರುವುದು. ಅನವಶ್ಯಕವಾಗಿರುವಾಗ ಸಹಾಯವನ್ನಾಶ್ರಯಿಸುವುದು ನಿಶ್ಚಿತವಾಗಿ ಅಪಾಯಕಾರಕವಾಗಿದೆ. ಹನ್ನೊಂದು ವ್ರತಗಳಲ್ಲಿ ಬ್ರಹ್ಮಚರ್ಯವೊಂದಾಗಿದೆಂದು ನಾನು ಕಳೆದ ವಾರ ಸ್ಪಷ್ಟಪಡಿಸಿದೆ. ಅದರಿಂದ ಉಳಿದ ಹತ್ತು ವ್ರತಗಳೂ ನಿಶ್ಚಯವಾಗಿ ಬ್ರಹ್ಮಚರ್ಯಕ್ಕೆ ಸಹಾಯಕವಾಗಿವೆಂಬುದು ಸಿದ್ಧವಾಗುತ್ತದೆ. ಅವುಗಳಲ್ಲಿ ಮತ್ತು ರಕ್ಷಾ ದುರ್ಗಗಳಲ್ಲಿನ ಭೇದವೆಂದರೆ ಮೊದಲನೆಯದು ಶಾಶ್ವತವಾಗಿದ್ದು ಎರಡನೆಯದು ತಾತ್ಪೂರ್ತಿಕವಾಗಿದೆ. ಬ್ರಹ್ಮಚರ್ಯದ ನಿಃಶೇಷ ಭಾಗಗಳೇ ಅವು.

ಬ್ರಹ್ಮಚರ್ಯ ಮಾನಸಿಕ ಪರಿಸ್ಥಿತಿ. ಮನುಷ್ಯನ ಬಾಹ್ಯಾಚರಣೆ ಅಂತರಾತ್ಮದ ಲಕ್ಷಣ ಮತ್ತು ಸಾಕ್ಷೀಭೂತವಾಗಿದೆ. ವಿಷಯಸುಖವನ್ನು ತೊರೆದು ಬಿಟ್ಟವನು ಯಾವದೇ ರೂಪದಲ್ಲಿ ಅದಕ್ಕೆಳಸಲಾರನು. ಹೆಣ್ಣುಮಗಳು ಎಷ್ಟೇ ಮೋಹಕಳಾಗಿದ್ದರೂ ವಿಷಯೇಚ್ಛಾರಹಿತ ಗಂಡಸಿನ ಮೇಲೆ ಅವಳ ಆ ಸೌಂದರ್ಯದಿಂದ ಯಾವ ಪರಿಣಾಮವೂ ಆಗದು. ಹೆಣ್ಣುಮಗಳಿಗೂ ಇದೇ ನಿಯಮ ಅನ್ವಯಿಸುವದು. ಆದರೆ ಈ ವಿಷಯೇಚ್ಛೆಯನ್ನು ಜಯಿಸದಿದ್ದ ಯಾವ ಗಂಡುಸಾಗಲಿ ಹೆಂಗಸಾಗಲಿ ತನ್ನ ತಂಗಿ ಇಲ್ಲವೆ ಅಣ್ಣ ಅಥವಾ ಮಗಳು ಇಲ್ಲವೆ ಮಗನನ್ನು ಕೂಡ ಕಣ್ಣೆತ್ತಿ ನೋಡಕೂಡದು. ಮಿತ್ರರಿಗೆ ಈ ಬಗೆಯ ಸಲಹೆಯನ್ನು ನಾನು ಕೊಟ್ಟದ್ದುಂಟು. ಅದರಿಂದ ಅವರ ಕಲ್ಯಾಣವೂ ಆದುದುಂಟು.

ನನ್ನ ಮಟ್ಟಿಗೆ ಹೇಳಬೇಕಾದರೆ ದಕ್ಷಿಣ ಆಫ್ರಿಕೆಯಲ್ಲಿ ನಾನಿರುವಾಗ ಹೆಂಗಸನ್ನು ನೋಡಿದ ಕೂಡಲೆ ಯಾವ ಕಾಮವಾಸನೆ ನನ್ನಲ್ಲಿ ಉಂಟಾಗುತ್ತಿದ್ದಿತೊ ನಾನು ಹಿಂದುಸ್ತಾನಕ್ಕೆ ಮರಳಿದ ಪ್ರಾರಂಭ ದಿನಗಳಲ್ಲಿ ಅದೇ ಕಾಮವಾಸನೆ ನನ್ನಲ್ಲಿ ಉಂಟಾಗುತಿದ್ದಿತು; ಇದನ್ನು ಹೊಡೆದು ಹಾಕುವದಕ್ಕಾಗಿ ನಾನು ಬಹಳ ಹೋರಾಡಬೇಕಾಯಿತೆಂಬುದನ್ನು ಲಜ್ಜೆಯಿಂದ ಒಪ್ಪಬೇಕಾಗುತ್ತದೆ. ಮನುಷ್ಯನಿಗೆ ಒಗ್ಗದಂಥ ನಿರರ್ಥಕ ಭೀತಿಗೂ ಇದೇ ಮಾತು ಅನ್ವಯಿಸುವದು.

ಸ್ವಭಾವತಃ ನಾನು ಅಂಜುಬುರುಕನು. ಕತ್ತಲೆಯಲ್ಲಿ ಮಲಗಲು ನಾನು ಅಂಜುತಿದ್ದೆನು. ಕೋಣೆಯಲ್ಲಿ ಒಬ್ಬನೇ ಮಲಗುವದೆಂದರೆ ದೊಡ್ಡದೊಂದು ಶೌರ್ಯದ ಕೆಲಸ ಮಾಡಿದಂತಾಗುತಿತ್ತು ನನಗೆ. ಆ ಬಗೆಯ ಅಂಜುಬುರುಕತನವನ್ನು ನಾನು ಕಳೆದುಕೊಂಡಿದ್ದೇನೆಂದು ಆಸಿಸುತ್ತೇನೆ. ಆದರೂ ದಾರಿಯನ್ನು ತಪ್ಪಿ ಕತ್ತಲೆಯ ರಾತ್ರಿಯಲ್ಲಿ ಒಬ್ಬನೇ ಘೋರಾರಣ್ಯದಲ್ಲಿ ಅಲೆದಾಡುವ ಪ್ರಸಂಗ ಬಂದರೆ ಮತ್ತು ಪರಮಾತ್ಮನೇ ನನ್ನ ರಕ್ಷಕನಾಗಿರುವನೆಂಬುದನ್ನು ನಾನು ಮರೆತು ಬಿಟ್ಟರೆ ನನ್ನ ಪರಿಸ್ಥಿತಿ ಏನಾಗುವುದೆಂಬುದನ್ನು ನಾನರಿಯೆ. ಬಾಲ್ಯದಲ್ಲಿಯ ನನ್ನ ಈ ಅಂಜುಬುರುಕುತನವು ಸಂಪೂರ್ಣವಾಗಿ ಹೋಗಿರದಿದ್ದರೆ, ಕಾಮವಾಸನೆಯನ್ನು ನಿಯಂತ್ರಿಸುವದಕ್ಕಿಂತ, ಘೋರಾರಣ್ಯದಲ್ಲಿ ಏಕಾಕಿಯಾಗಿರುವಾಗ ನಿರ್ಭೀತನಾಗಿರುವದು ನಿಶ್ಚಯವಾಗಿ ಹೆಚ್ಚು ಕಠಿನವಾಗುತಿದ್ದಿತು.

ಬ್ರಹ್ಮಚಾರಿಯಾಗತಕ್ಕವನು ಪಾಲಿಸತಕ್ಕ ಕೆಲ ವ್ರತ ನಿಯಮಗಳನ್ನು ಹಿಂದುಸ್ತಾನದಲ್ಲಿ ಹಿಂದಿನವರು ಹಾಕಿಕೊಟ್ಟದ್ದುಂಟು. ಅವನು ಹೆಂಗಸರ, ಪ್ರಾಣಿಗಳ ಮತ್ತು ಕಂಚುಕಿಗಳ ಮಧ್ಯದಲ್ಲಿರಬಾರದು. ಒಬ್ಬಳೆ ಹೆಣ್ಣುಮಗಳಿಗೆ ಇಲ್ಲವೆ ಹೆಣ್ಣುಮಕ್ಕಳ ಗುಂಪಿಗೆ ಅವನು ಪಾಠ ಹೇಳಿಕೊಡಬಾರದು, ಹೆಂಗಸು ಕುಳಿತ ಚಾಪೆಯ ಮೇಲೆ ಅವನು ಕೂಡ್ರಬಾರದು, ಹೆಣ್ಣುಮಗಳ ದೇಹದ ಯಾವದೆ ಅವಯವವನ್ನು ಅವನು ನೋಡಬಾರದು, ಹಾಲು, ಮೊಸರು, ತುಪ್ಪ ಇಲ್ಲವೆ ನೆಣವಿದ್ದ ಯಾವ ಪದಾರ್ಥಗಳನ್ನೂ ಸೇವಿಸಬಾರದು, ಎಣ್ಣೆಮಜ್ಜನಮಾಡಿಕೊಳ್ಳಬಾರದು ಎಂದು ಮುಂತಾಗಿ ನಿಯಮಗಳನ್ನು ಹೇಳಲಾಗಿದೆ. ದಕ್ಷಿಣ ಆಫ್ರಿಕೆಯಲ್ಲಿರುವಾಗ ನಾನು ಇದನ್ನೆಲ್ಲ ಓದಿದೆ. ಅಲ್ಲಿ ನನಗೆ ಕೆಲ ಜನರ ಪರಿಚಯವಾಯಿತು. ಅವರು ಬ್ರಹ್ಮಚರ್ಯವನ್ನು ಆಚರಿಸುತಿದ್ದರು. ಆದರೆ ಮೇಲೆ ಉಲ್ಲೇಖಿಸಿದ ವ್ರತಗಳನ್ನು ಪಾಲಿಸುವದು ಅವಶ್ಯವೆಂಬುದು ಅವರಿಗೆ ಸ್ವಲ್ಪೂ ಗೊತ್ತಿರಲಿಲ್ಲ. ನಾನೂ ಆ ನಿಯಮಗಳನ್ನು ಪಾಲಿಸುತಿರಲಿಲ್ಲ. ಅವನ್ನು ಪಾಲಿಸದಿದ್ದುದಕ್ಕಾಗಿ ನಾನೇನೂ ನೀಚತರನಾಗಿರಲಿಲ್ಲ. ನಾನು ಹಾಲು, ತುಪ್ಪ ಮತ್ತು ಉಳಿದ ಪ್ರಾಣಿಗಳ ಕೊಬ್ಬುತಿನ್ನುವದನ್ನು ಬಿಟ್ಟುಗೊಟ್ಟೆನೇನೋ ನಿಜ, ಆದರೆ ಬೇರೆ ಕಾರಣಗಳಿಗಾಗಿ. ನಾನು ಹಿಂದುಸ್ತಾನಕ್ಕೆ ಬಂದ ಎರಡು ಮೂರು ವರ್ಷಗಳ ನಂತರ ಈ ಪ್ರಯತ್ನದಲ್ಲಿ ನಾನು ಅಯಶಸ್ವಿಯಾದೆ. ಆದರೆ ಇಂದು ಹಾಲು ಮತ್ತು ತುಪ್ಪದ ಬದಲು ಯಾವದೆ ಪರಿಣಾಮಕಾರಿಯಾದ ಕಾಯಿಪಲ್ಲೆ ನನಗೆ ದೊರೆತದ್ದಾದರೆ ಪ್ರಾಣಿಕೊಬ್ಬುಗಳನ್ನೆಲ್ಲ ನಾನು ಸಂತೋಷದಿಂದ ಬಿಟ್ಟುಗೊಡುವೆ. ಆದರೆ ಆ ಮಾತು ಬೇರೆ. ನಿಜವಾದ ಬ್ರಹ್ಮಚಾರಿಯು ತನ್ನ ವೀರ್ಯವನ್ನೆಂದಿಗೂ ಕಳೆದುಕೊಳ್ಳುವುದಿಲ್ಲ. ತದ್ವಿರುದ್ಧವಾಗಿ ಅವನು ದಿನಾಲು ಅದನ್ನು ಹೆಚ್ಚಿಸಿಕೊಳ್ಳಲು ಶಕ್ತನಾಗುವನು. ಅದಕ್ಕಿಂತ ಹೆಚ್ಚಿನ ಮಾತೆಂದರೆ ಅದನ್ನು ಅವನು ಸಂಗ್ರಹಿಸಿಕೊಳ್ಳುವದು ಆದುದರಿಂದ ಜನರು ತಿಳಿದುಕೊಳ್ಳುವ ರೀತಿಯಲ್ಲಿ ಅವನು ಎಂದಿಗೂ ವೃದ್ಧನಾಗುವದಿಲ್ಲ, ಅವನ ಬುದ್ಧಿಯೆಂದಿಗೂ ಮಂಕಾಗುವದಿಲ್ಲ. ನಿಜ ಬ್ರಹ್ಮಚಾರಿಯಾಗಬಯಸುವವನಿಗೆ ಮೇಲೆ ಉಲ್ಲೇಖಿಸಿದ ನಿರ್ಬಂಧಗಳ ಅವಶ್ಯಕತೆಯೂ ಇಲ್ಲೆಂದು ನನಗೆನಿಸುತ್ತದೆ. ಬಾಹ್ಯ ನಿರ್ಬಂಧಗಳಿಂದ ಸಂಪಾದಿಸತಕ್ಕ ಸದ್ಗುಣ ಬ್ರಹ್ಮಚರ್ಯವಲ್ಲ. ಹೆಣ್ಣುಮಗಳ ಗೂಡ ಅವಶ್ಯ ಸಂಬಂಧ ಬೆಳಸಿಕೊಳ್ಳುವದನ್ನು ತಪ್ಪಿಸಿಕೊಳ್ಳುವವನು ಬ್ರಹ್ಮಚರ್ಯದ ಪೂರ್ಣ ರಹಸ್ಯವನ್ನು ತಿಳಿದುಕೊಂಡಿಲ್ಲೆಂದೆ ಹೇಳಬೇಕಾಗುವದು.

ವ್ರತ ನಿರ್ಬಂಧಗಳು ಸ್ವಲ್ಪೂ ಇಲ್ಲದೆ ಜೀವನವನ್ನು ಸಾಗಿಸತಕ್ಕದ್ದೆಂಬದಕ್ಕೆ ನಾನು ಮೇಲೆ ಹೇಳಿದುದು ಸ್ವಲ್ಪಾದರೂ ಪ್ರೋತ್ಸಾಹಕರವಾಗುತಿದೆಂದು ವಾಚಕರು ಕ್ಷಣ ಹೊತ್ತು ಕೂಡ ಕಲ್ಪಿಸಬಾರದು. ಅಲ್ಲದೆ ಕಪಟಾಚರಣೆಯ ನ್ಯಾಯ್ಯ ಪ್ರಯತ್ನಕ್ಕೂ ಅವಕಾಶವಿಲ್ಲ.

ಭೋಗಾಸಕ್ತಿ ಮತ್ತು ಕಪಟಾಚರಣೆ ಪಾಪಮಯವಾಗಿದ್ದು ಅವನ್ನು ಬಿಟ್ಟುಗೊಡತಕ್ಕದ್ದು.

ನಿಜ ಬ್ರಹ್ಮಚಾರಿಯು ಮಿಥ್ಯಾ ನಿರ್ಬಂಧಗಳನ್ನು ತಿರಸ್ಕರಿಸುವನು. ತನ್ನ ಮಿತಿಗನುಸಾರವಾಗಿ ಅವನು ನಿರ್ಬಂಧಗಳನ್ನು ಹಾಕಿಕೊಳ್ಳಲಿಕ್ಕೆಬೇಕು. ಅವು ಅನವಶ್ಯವೆಂದೆನಿಸಿದ ಕೂಡಲೆ ಅವನು ಅವನ್ನು ಮುರಿಯಬಹುದು. ನಿಜವಾದ ಬ್ರಹ್ಮಚರ್ಯವೆಂದರೇನೆಂಬುದನ್ನು ಮೊದಲು ತಿಳಿದುಕೊಳ್ಳತಕ್ಕದ್ದು. ಅನಂತರ ಅದರ ಮಹತ್ವವನ್ನು ಅರಿತುಕೊಳ್ಳತಕ್ಕದ್ದು. ಕೊನೆಯದಾಗಿ ಈ ಅಮೂಲ್ಯ ಸದ್ಗುಣವನ್ನು ಳವಡಿಸಿಕೊಳ್ಳುವುದಕ್ಕಾಗಿ ಪ್ರಯತ್ನಿಸತಕ್ಕದ್ದು. ದೇಶದ ನಿಜವಾದ ಸೇವೆ ಮಾಡಬೇಕಾದರೆ ಈ ವ್ರತವನ್ನು ಪಾಲಿಸುವದವಶ್ಯವೆಂದು ನನ್ನ ಅಭಿಪ್ರಾಯ.

ಹೊಸದಿಲ್ಲಿ
ಮೋ. ಕ. ಗಾಂಧಿ

೮—೬—೪೭ (ಗುಜರಾಥಿಯಿಂದ ಅನುವಾದಿತ)

ಆಂಗ್ಲ ಮಹಿಳೆಯ ಅಪಮಾನ

ಹಿಂದುಸ್ತಾನವನ್ನು ಪ್ರೀತಿಸುತಿರುವ ಆಂಗ್ಲ ಭಗಿನಿಯೊಬ್ಬಳು ಹೀಗೆ ಬರೆಯುತ್ತಾಳೆ—

“ ನನಗೆ ಬಹಳ ನೋವಾಗಿದೆ. ನಾಚಿಕೆಯೂ ಎನಿಸುತಿದೆ. ನನಗೆ ಹಾಗೆ ಎನಿಸುತಿದೆಂಬದರ ಕಲ್ಪನೆ ನಿಮಗೆ ಕಿಂಚಿತ್ತಾದರೂ ಉಂಟಾಗಬಹುದು. ಧಾರ್ಮಿಕ ಭೇದದ ಮೂಲಕ ಒಂದು ರಾಷ್ಟ್ರದ ಜನಸಮುದಾಯವನ್ನು ಪ್ರತ್ಯೇಕವೆಂದು ತುಂಡರಿಸುವದೆಂದರೆ ಅಧ್ಯಾತ್ಮಿಕ ದುರಂತವಲ್ಲೆಂದು ವಾದಿಸುವವರ ವಾದವನ್ನು ನಾನು ಒಪ್ಪಲಾರೆ. ಹಿಂದುಸ್ತಾನ ತುಂಡರಿಸಲ್ಪಡುವದೇ ಆಗಿದ್ದರೆ— ಕೆಲ ಸಮಯದಲ್ಲಿ ಅದು ಅಪರಿಹಾರ್ಯ, ಹಿಂದಿನ ಧೋರಣೆಗಳ ಅನಿವಾರ್ಯ ಪರಿಣಾಮವದು ಸ್ವಾಭಾವಿಕವಾಗಿ ಆ ಕ್ರಮ ನಡೆಯಲಿ, ಪರಕೀಯರ ಒತ್ತಾಯದಿಂದ ಬೇಡ. ಆ ಬಳಿಕ ಗಾಂಧೀಜಿ ಅಪೇಕ್ಷಿಸುವ ವಾಸಿ ಮಾಡುವ ಶಕ್ತಿಗಳು ತಮ್ಮ ಪಾತ್ರವನ್ನು ಸ್ವತಂತ್ರ ರೀತಿಯಿಂದ ವಹಿಸಬಲ್ಲವು. ಹಿಂದುಸ್ತಾನ ಮಾನವೀಯ ಸಮಸ್ಯೆಗಳನ್ನು ರಾಜಕಾರಣದ ಜಾದೂ ಆಟದಿಂದ ಬಿಡಿಸಲು ಪ್ರಯತ್ನಿಸುವದು ನಿರರ್ಥಕ, ಸ್ವಲ್ಪೂ ಫಲಕಾರಿಯಲ್ಲ. ಹಾಗಲ್ಲವೆ? ತತ್ವಾಚರಣೆ ಲಾಭಕರವಲ್ಲ, ಹೊತ್ತು ಬಂದಂತೆ ಕೊಡೆ ಹಿಡಿಯುವದು ಲಾಭಕರವೆಂದು ಸಾರಿದವರು ತಾವು ಮಾಡಿದ್ದರ ಹೊಣೆಗಾರಿಕೆಯನ್ನು ಹೊರಲೇಬೇಕು.

“ಕೊನೆಯಲ್ಲಿ ಹಿಂದುಸ್ತಾನ ಪೂರ್ಣತ್ವವನ್ನು ಹೊಂದುವದೆಂಬಲ್ಲಿ ಸಂದೇಹವಿಲ್ಲ. ಆದರೆ ನಮ್ಮ ಮೂರ್ಖತನದಿಂದ ಹಿಂದುಸ್ತಾನದ ಹೆಜ್ಜೆ ತಾತ್ಪೂರ್ತಿಕವಾಗಿ ಹಿಂದೆ ಬಿದ್ದಿತು. ಇಲ್ಲಿನ ಕಷ್ಟನಷ್ಟಗಳ ಪರಂಪರೆಯನ್ನು ನೋಡಿ ನನಗೆ ಅತೀವ ದುಃಖವಾಗುತ್ತಿದೆ. ಮತ್ತು ಅವಮಾನವೆನಿಸುತ್ತದೆ. ಏಕೆಂದರೆ ಸದ್ಯದ ಪರಿಸ್ಥಿತಿಗೆ ಹಿಂದುಸ್ತಾನ ಎಷ್ಟೇ ಕಾರಣವಾಗಿದ್ದರೂ ನಮ್ಮ ಪಾಲು ಅದಕ್ಕಿಂತ ಹೆಚ್ಚಿಗೆ ಇದೆಂಬುದು ನನ್ನ ಮನವರಿಕೆಯಾಗಿದೆ. ನಮ್ಮ ರಾಜಕಾರಣಿಗಳು ಇದನ್ನು ಒಪ್ಪಿಕೊಂಡು ಪರಿಶುದ್ಧರಾಗುವರೊ? ಅನಂತರ ನಾವು ಪರಸ್ಪರ ವಿಶ್ವಾಸ ಮತ್ತು ಮಿತ್ರತ್ವದ ತಳಹದಿಯಲ್ಲಿ ಹೊಸದಾಗಿ ಬಾಂಧವ್ಯವನ್ನು ಬೆಳೆಸಲು ಪ್ರಯತ್ನಿಸುವಾ.”

ತಮ್ಮ ಆಡಳಿತದಿಂದ ಹಿಂದುಸ್ತಾನಕ್ಕಾದ ಅಪಾಯಕ್ಕಾಗಿ ನಾಚಿಕೆ ಪಡುತಿರುವ ಅನೇಕ ಆಂಗ್ಲ ಸ್ತ್ರೀಪುರುಷರಿರುವರು. ಧಾರ್ಮಿಕ ತಳಹದಿಯ ಮೇಲೆ ದೇಶದ ಇಲ್ಲವೆ ಅದರ ಯಾವದೊಂದು ಭಾಗದ ವಿಭಜನೆ ಜಾತೀಯ್ಯ ತಿಕ್ಕಾಟವನ್ನು ಹೋಗಲಾಡಿಸಲು ಮದ್ದಾಗಲಾರದು. ಈ ಬಗೆಯಾಗಿ ವರ್ತಿಸುವದೆಂದರೆ ಧರ್ಮವನ್ನೇ ಅಲ್ಲಗಳೆದಂತೆ. ಹಿಂದು ಮತ್ತು ಮುಸಲ್ಮಾನರು ತಾತ್ಪೂರ್ತಿಕವಾಗಿ ಮೂಢರಾಗಿದ್ದರೆ- ನಾವು ಆಶಿಸುವಾ—ಬ್ರಿಟನ್ನು ಚಿತ್ತ ಸ್ವಾಸ್ಥ್ಯವನ್ನಿಟ್ಟುಕೊಂಡು ವರ್ತಿಸಬಾರದೇಕೆಂಬದಕ್ಕೆ ಕಾರಣವೇ ತೋರುವದಿಲ್ಲ. ತಮ್ಮ ಆಡಳಿತವನ್ನು ಹಿಂತೆಗೆದುಕೊಳ್ಳುವದೇ ಅವರ ಒಂದೇ ಒಂದಾದ ಕರ್ತವ್ಯವಾಗಿದೆಂದು ಗಾಂಧೀಜಿ ಒಮ್ಮೆಲ್ಲ ಹಲವು ಸಲ ಹೇಳಿದ್ದುಂಟು. ಯಾವ ರೀತಿಯಿಂದ ಬಾಳಬೇಕು ಎಂಬದನ್ನು ನಮಗೆ ಬಿಟ್ಟುಗೊಡಬೇಕು ಮತ್ತು ನಮ್ಮ ಮತಭೇದಗಳನ್ನೆಲ್ಲ ನಾವೇ ಸಮಾಧಾನಕರವಾಗಿ ಬಿಡಿಸಿಕೊಳ್ಳಬಲ್ಲೆವು.

ಹಿಂದುಸ್ತಾನದ ವಿಭಜನೆ ಅಧ್ಯಾತ್ಮಿಕ ದುರಂತವೆಂದು ಈ ಆಂಗ್ಲ ಭಗಿನಿ ಹೇಳುತಿರುವದು ಯಥಾರ್ಥವೇ ಆಗಿದೆ. ಯಾವದೇ ಕಾರಣದಿಂದ ಹಿಂದುಸ್ತಾನ ತುಂಡರಿಸಲ್ಪಟ್ಟದ್ದೆ ಆದರೆ ನಮ್ಮ ಬುದ್ಧಿಶಕ್ತಿಗೆ ಕಲಂಕವೆ ಸೈ. ತನ್ನ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳುವುದಕ್ಕೆ ಬ್ರಿಟನ್ ಒಡೆದು ಆಳುವ ತನ್ನ ಧೋರಣವನ್ನು ಅನುಸರಿಸಲೇ ಬೇಕಾಗಿತ್ತು. ಅವರ ನಿರ್ಗಮನವು ನಮ್ಮ ಒಡಕಿಗೆ ಕಾರಣವಾಗದೆ ಐಕ್ಯಕ್ಕೇ ಕಾರಣವಾಗುವದು. ತದ್ವಿರುದ್ಧ ಮಾರ್ಗವನ್ನನುಸರಿಸುವದು ನಮ್ಮ ಶಾಶ್ವತ ಅವಮಾನಕ್ಕೆ ಕಾರಣವಾಗುವದು.

೨೯—೫—೪೭
ಅ. ಕೌ.

ಪಣ

“ಯುದ್ಧ ನಿವಾರಣೆಗೆ ಮೂರು ಉಪಾಯಗಳಿವೆಯೆಂದು ಜೆಫ್ರಿ ಮ್ಯಾಲೇಸರು ಸಾನಫ್ರಾನ್ಸಿಸ್ಕೋದಲ್ಲಿ ಮಾತನಾಡುವಾಗ ಹೇಳಿದರು. ಅವರ ಮೊದಲನೆಯ ಉಪಾಯದಂತೆ ಅಣುಶಕ್ತಿಯ ಜಾಗತಿಕ ನಿಯಂತ್ರಣ, ಯುದ್ಧೋಪಯೋಗಿ ಕ್ಷೇತ್ರಗಳ ಅಂತರ್ರಾಷ್ಟ್ರೀಕರಣ, ಮಾನವವಿನಾಶಕ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳದಿರುವದು ಮತ್ತು ಜಾಗತಿಕ ಸಂರಕ್ಷಣಾ ಪದ್ಧತಿಯನ್ನು ರೂಢಿಸುವುದು—ಇವುಗಳನ್ನೊಳಗೊಂಡ ಒಂದು ಮಿಲಿಟರಿ ಒಪ್ಪಂದಕ್ಕೆ ಪ್ರತಿ ರಾಷ್ಟ್ರವೂ ಒಳಗಾಗಬೇಕು. ಅವರ ಎರಡನೆಯ ಸಲಹೆಯ ಪ್ರಕಾರ ಫ್ಯಾಸಿಝಂ ಹೊಡೆದೋಡಿಸುವುದು, ಚೀನ ಮತ್ತು ಗ್ರೀಸಗಳಲ್ಲಿ ಅಂತಃಕಲಹಗಳನ್ನು ನಿಲ್ಲಿಸುವದು, ದಾಸಜನಾಂಗಗಳ ಇಷ್ಟಾರ್ಥ ಕೈಗೂಡುವಂತೆ ಮಾಡುವದು—ಇವುಗಳನ್ನೊಳಗೊಂಡ ಒಂದು ರಾಜಕೀಯ ಒಪ್ಪಂದ ಮಾಡಿಕೊಳ್ಳುವದು. ಅವರ ಕಡೆಯ ಉಪಾಯವೆಂದರೆ ೧೦ ವರ್ಷದೊಂದು ಆರ್ಥಿಕ ಪುನರ್ರಚನೆಯ ಯೋಜನೆ ಸಿದ್ಧಪಡಿಸುವದು. ಅದು ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳ ಆಡಳಿತದಲ್ಲಿರತಕ್ಕದ್ದು. ಈ ಎಲ್ಲ ಅಪಾಯಕ ಯೋಜನೆಗಳನ್ನು ಹೇಳಿ ಕಡೆಗೆ ಅವರು ನಿರಾಶರಾಗಿ ಇವುಗಳನ್ನು ಆಚರಣೆಗೆ ತರುವ ದೃಢ ಮನಸ್ಸು ಯಾರಲ್ಲೂ ಕಂಡುಬರುವದಿಲ್ಲವೆಂದು ಹೇಳುತ್ತಾರೆ. “ನಾವು ಅಂತಹ ದೃಢ ಮನಸ್ಸನ್ನು ಕಾಣಲೇಬೇಕು. ಮತ್ತು ಕಾಣಬಲ್ಲೆವು. ವಿಧ್ವಸ್ತವೂ ಕ್ಷುಧಾರ್ತವೂ ಆದ ಜಗತ್ತು ಶಾಂತಿಯ ಫಲವನ್ನು ಕೈಗೆ ತಂದುಕೊಡುತ ಒಕ್ಕಲತನದ ಯಂತ್ರೋಪಕರಣಗಳು ಬೇಕೆನ್ನುವದಲ್ಲದೆ ಹಸಿವನ್ನು ಹರಡುವ ಬಂದೂಕುಗಳು ಮತ್ತು ಟ್ಯಾಂಕುಗಳು ಬೇಕೆಂದು ಹೇಳುವದಿಲ್ಲ” ಎಂದೂ ಉದ್ಗರಿಸಿದ್ದಾರೆ.

ಜಗತ್ತಿನ ದುಃಖದ ಮೂಲ ಹೇತುವನ್ನು ಹಾಗೇ ಇರಗೊಡುವಲ್ಲಿಯವರೆಗೆ ಅವರ ಸಲಹೆಗಳು ಜಗತ್ತಿನ ಕಾಹಿಲೆಗಳಿಗೆ ಎಷ್ಟೇ ಒಳ್ಳೆಯ ಚಿಕಿತ್ಸೆಗಳೆನಿಸಿದ್ದರೂ ನಿರುಪಯೋಗಿಗಳೇ ಎಂಬುದು ಸಂಯುಕ್ತ ಸಂಸ್ಥಾನದ ಮೊದಲಿನ ಉಪಾಧ್ಯಕ್ಷರು ಬಲ್ಲರು. ಚಿಕಿತ್ಸೆಯನ್ನು ಹೇಳುವುದರ ಮೊದಲು ರೋಗ ಪರೀಕ್ಷೆ ಮಾಡತಕ್ಕದ್ದು.

ಅಣು ಬಾಂಬು ಈ ಹಸಿವೆಗೆ ಮತ್ತು ಹಾನಿಗೆ ಕಾರಣವಲ್ಲ; ಮಾನವ ನಿರ್ಮಿತ ಆಯುಧಗಳೂ ಅಲ್ಲ; ಮತ್ತು ಈ ತಲೆಮಾರು ಪದೇಪದೇ ಅನುಭವಿಸಿದ ಹಾನಿಯಿಂದ ತಪ್ಪಿಸಿಕೊಳ್ಳಲು ಯಾವ ಶಾಂತಿಯ ಒಪ್ಪಂದವೂ ರಕ್ಷಣಾದುರ್ಗವಾಗಲಾರದು ಎಂಬುದನ್ನು ಜನರಿಗೆ ಹೊಸದಾಗಿ ಹೇಳಬೇಕಾಗಿಲ್ಲ. ಕಾಹಿಲೆಯು ರೂಢಮೂಲವಾದದ್ದು; ಅದಕ್ಕೆ ಉಗ್ರವಾದ ಶಸ್ತ್ರಚಿಕಿತ್ಸೆಯನ್ನೇ ಮಾಡಿಸಿಕೊಳ್ಳಬೇಕಾಗಿದೆ.

ಕಟ್ಟಿಗೆ, ಕಚ್ಚಾ ಮಾಲು, ಶ್ರಮಗಳ ಮೇಲೆ ನಿಯಂತ್ರಣ, ತಯಾರಾದ ಸಾಮಾನುಗಳಿಗೆ ಪೇಟೆಯೊದಗಿಸುವದು—ಈ ಪದ್ಧತಿಯ ಆರ್ಥಿಕ ಘಟನೆಯಿರುವ ವರೆಗೆ ಹಗಲಾದ ಮೇಲೆ ರಾತ್ರಿ ಬರುವಂತೆ ಜಗತ್ತಿನ ಸ್ಥಿತಿಗೆ ಜನಜೀವನ ನಿಯಂತ್ರಣವು ಅಪರಿಹಾರ್ಯವೆನಿಸುತ್ತದೆ. ಈ ಪದ್ಧತಿಯು ಹಿಂಸೆಯನ್ನು ಆಮಂತ್ರಿಸುತ್ತದೆ. ಮತ್ತು ಆ ಹಿಂಸೆಯಾದರೋ ವರ್ಧಮಾನವೂ ನವೋನವವೂ ಆಗಿರುತ್ತದೆ. ಆದರಿಂದ ಸಹ-ಜೀವಿಗಳನ್ನು ಹೆದರಿಸುವ ಉಪಾಯಗಳನ್ನು ಮಾನವಕುಲ ಯೋಜಿಸುತ್ತಿರಬೇಕೆಂಬುದು ಸಿದ್ಧವಾಗುತ್ತದೆ.

ಈಗಿನ ಅಣುಬಾಂಬಿಗಿಂತ ಹೆಚ್ಚು ಅಪಾಯಕರವಾದ ಅಣುಶಕ್ತಿಯ ಶಸ್ತ್ರಗಳ ತಯಾರಿಕೆಯ ಬಗ್ಗೆ ತಮ್ಮ ಮಿಲಿಟರಿ ತಜ್ಞರು ಪ್ರಯೋಗ ನಡೆಸುತ್ತಿದ್ದಾರೆಂದು ಅಮೇರಿಕೆಯ ಸುದ್ದಿ ಸಂಸ್ಥೆಯೊಂದು ತಿಳಿಸುತ್ತದೆ.

ಅತ್ಯಧಿಕ ಹಿಂಸ್ರಮನುಷ್ಯನಿಗೆ ಜಿದ್ದಿನ ಪಣ ಕೈಸೇರುವಂತೆ ಮಾಡುವಷ್ಟು ಭೂತಲೀಲೆಯೆಸಗಬಲ್ಲ ರೇಡಿಯೋ ಕ್ರಿಯಾತ್ಮಕ ಮೋಘವೇ ಆ ನಾರಕಶಸ್ತ್ರ. ಹಿಂಸೆಯು ಸಾಧನವಾಗಿ ಬಳಸದ ಆರ್ಥಿಕ ಪದ್ಧತಿಗಳನ್ನು ಆಚರಣೆಗೆ ತರಲು ರಾಷ್ಟ್ರಗಳು ಮನಸ್ಸು ಮಾಡುವ ವರೆಗೆ ಈ ಓಟ ನಡೆಯುತ್ತ ಇರುವುದೇ.

ಜೆ. ಸಿ. ಕುಮಾರಪ್ಪ

ಆತ್ಮಶ್ಲಾಘನೆ

ಕಾಂಗ್ರೆಸ್ ಮಂತ್ರಿಮಂಡಲಗಳು ಮಾಡಿದ ಕಾರ್ಯ ಕಲಾಪಗಳ ಸಂಬಂಧದಲ್ಲಿ ಹೊರಡಿಸಲ್ಪಟ್ಟ ಪುಸ್ತಿಕೆಗೆ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಗಳಾದ ಆಚಾರ್ಯ ಜುಗಲ್ ಕಿಶೋರರು ಮುನ್ನುಡಿಯನ್ನು ಬರೆದಿದ್ದಾರೆ. ತನ್ನ ಅಧಿಕಾರದ ಒಂದು ವರ್ಷದ ಈ ಅಲ್ಪಾವಧಿಯ ಕಾಲದಲ್ಲಿಯೆ ಕಾಂಗ್ರೆಸ್ ಮಂತ್ರಿಗಳು ಸಾಧಿಸಿದ ಬಹಳ ಮಹತ್ವದ್ದಾಗಿದೆಂಬುದು ಈ ಪುಸ್ತಿಕೆಯನ್ನು ಪಕ್ಷಪಾತದಿಂದ ಮತ್ತು ಪೂರ್ವಗ್ರಹ ಪೀಡಿತರಾಗದೆ ಓದುವ ವಾಚಕರಿಗೆಲ್ಲ ಕಂಡು ಬರದಿರಲಾರದೆಂದು ನಾನು ಆಶಿಸುತ್ತೇನೆ" ಎಂದು ಆ ಮುನ್ನುಡಿಯಲ್ಲಿ ಬರೆದಿದ್ದಾರೆ. ಲೋಕ ಪ್ರಾತಿನಿಧಿಕ ಮಂತ್ರಿಗಳ ಧ್ಯೇಯ ಮತ್ತು ಸಾಧನೆಯನ್ನೇ ಎಲ್ಲವೂ ಅವಲಂಬಿಸುವದು. ಜನಸಾಮಾನ್ಯರ ದುಸ್ಥಿತಿಯನ್ನು ದೂರ ಮಾಡುವದಾಗಿ ಕಾಂಗ್ರೆಸ ಚುನಾವಣೆ ಘೋಷಣ ಪತ್ರಿಕೆಯಲ್ಲಿ ಎಲ್ಲ ಬಗೆಯ ವಚನಗಳನ್ನು ಕೊಡಲಾಗಿತ್ತು. ಬೇರೆ ಬೇರೆ ಕಾಂಗ್ರೆಸ್ ಮಂತ್ರಿಮಂಡಳಗಳು ಇಟ್ಟುಕೊಂಡ ಕಾರ್ಯಕ್ರಮದ ಪ್ರತಿಯೊಂದು ಮುದ್ದೆಯನ್ನು ವಿವರವಾಗಿ ವಿಚಾರಿಸುವದು ಸದ್ಯದ ಮಟ್ಟಿನಲ್ಲಿ ಶಕ್ಯವಿಲ್ಲ. ಆದರೂ ಸ್ಥೂಲ ಅವಲೋಕನದಿಂದ ವಿಚಾರ ಮಾಡಿದರೂ ಎಲ್ಲ ಮಂತ್ರಿಮಂಡಳಗಳು ಒಂದೇ ಬಗೆಯ ಧೋರಣವನ್ನಿಟ್ಟುಕೊಂಡಿಲ್ಲೆಂಬುದು ಗೊತ್ತಾಗುವದು. ಬೇರೆ ಬೇರೆ ಸರಕಾರಗಳು ತಮ್ಮ ಚಿತ್ತಲಹರಿ ಮತ್ತು ಕಲ್ಪಕಶಕ್ತಿಗನುಸಾರವಾಗಿ ವರ್ತಿಸುತಿವೆ.

ಕೇಂದ್ರ ಸರಕಾರವು ಸಿಂಧರಿಯಲ್ಲಿ ರಾಸಾಯನಿಕ ಗೊಬ್ಬರದ ಯೋಜನೆಯನ್ನು ಅನುಸರಿಸುತಿರುವದು. ಆದರೆ ಆ ರಾಸಾಯನಿಕ ಗೊಬ್ಬರವನ್ನು ಶಾಸ್ತ್ರೀಯ ದೃಷ್ಟಿಯಿಂದ ಉಪಯೋಗಿಸಲು ಬರುವಂತೆ ಯೋಜಿಸಲು ಭೂಪರಿಶೋಧನಾಧಿಕಾರಿಗಳನ್ನು ಸಂಘಟಿಸುವ ತೊಂದರೆಯನ್ನು ಮಾತ್ರ ಆ ಸರಕಾರದವರು ತೆಗೆದುಕೊಂಡಿಲ್ಲ. ಇಂಥ ರಾಸಾಯನಿಕ ಗೊಬ್ಬರದ ಉಪಯೋಗವೆಂತು ಮಾಡಬೇಕೆಂಬುದು ಗೊತ್ತಿಲ್ಲದ ಮತ್ತು ಭೂಮಿಗಳನ್ನು ಪರಿಶೋಧಿಸಿ ಅವುಗಳ ಅವಶ್ಯಕತೆಗಳನ್ನು ತಿಳಿದುಕೊಳ್ಳುವ ಸಾಧನಗಳಿಲ್ಲದ ಒಕ್ಕಲಿಗರ ಕೈಯಲ್ಲಿ ಟನ್‌ಗಟ್ಟಲೆ ರಾಸಾಯನಿಕ ಗೊಬ್ಬರವನ್ನು ಕೊಡುವದೆಂದರೆ ಸಣ್ಣ ಮಗುವಿನ ಕೈಯಲ್ಲಿ ಸಕ್ಕರೆ ಹಚ್ಚಿದ ಕ್ವಿನಾಯಿನ್ ಗುಳಿಗೆಗಳನ್ನು ಕೊಟ್ಟಂತೆಯೆ, ಅಷ್ಟೇ ಘಾತಕ ಪರಿಣಾಮ ಅದರಿಂದಾಗುವದು. ಈ ರಾಸಾಯನಿಕ ಗೊಬ್ಬರದ ಉಪಯೋಗವನ್ನು ಶಾಸ್ತ್ರೀಯ ರೀತಿಯಿಂದ ನಿಯಂತ್ರಿಸದಿದ್ದರೆ ಮತ್ತು ನಿಯಮನಗೊಳಿಸದಿದ್ದರೆ ಈ ರಾಸಾಯನಿಕ ಗೊಬ್ಬರದ ಕಾರಖಾನೆಗಳು ಒಕ್ಕಲಿಗರಿಗೆ ವಿಷಮಯವಾಗಿ ಪರಿಣಮಿಸುವವು. ನಿಜವಾಗಿಯೂ ಸರಕಾರದವರಿಗೆ ಒಕ್ಕಲಿಗರ ಕಲ್ಯಾಣ ಮಾಡುವ ಬುದ್ಧಿಯಿದ್ದರೆ ಮತ್ತು ಗೊಬ್ಬರದ ಉಪಯೋಗವನ್ನು ನಿಯಮನಗೊಳಿಸುವ ಧೋರಣವನ್ನು ಅವರು ಇಟ್ಟುಕೊಂಡಿದ್ದರೆ ಮೊತ್ತಮೊದಲು ಅವರು ಈ ಗೊಬ್ಬರದ ಯೋಗ್ಯ ಉಪಯೋಗ ಮಾಡಿಕೊಳ್ಳಲು ಸಹಾಯ ಮಾಡುವಂಥ ಸೇವಕರ ತಂಡವನ್ನು ಸಂಘಟಿಸಬೇಕು. ಅದನ್ನು ಬಿಟ್ಟುಕೊಟ್ಟು ಸರಕಾರದವರು ಕೇವಲ ಅದರ ಉತ್ಪತ್ತಿ, ಒದಗಿಸ ಮತ್ತು ವ್ಯವಸ್ಥೆಯ ಬಗ್ಗೆಯೆ ಹೆಚ್ಚು ಲಕ್ಷ್ಯ ಪೂರೈಸುತಿರುವರು. ಈ ಪ್ರಯತ್ನಗಳಲ್ಲಿಯೆ ಅವರು ಸಾರ್ವಜನಿಕ ಹಣವನ್ನು ವ್ಯಯ ಮಾಡುತಿರುವರು.

'ವನಸ್ಪತಿ'ಯ ಉತ್ಪಾದನೆಯನ್ನು ನಿರ್ಬಂಧಿಸಲು ಕಾಯದೆಯನ್ನು ಮಾಡಬೇಕೆಂದು ಮುಂಬಯಿ ಸರಕಾರದವರು ಗಂಭೀರ ರೀತಿಯಿಂದ ವಿಚಾರ ಮಾಡುತಿರುವಾಗಲೆ ನೆರೆಯ ಮದ್ರಾಸ ಪ್ರಾಂತವು ಮುಂದಿನ ವರುಷದಿಂದ ಆಂಧ್ರದಲ್ಲಿ ನಾಲ್ಕು, ತಮಿಳನಾಡಿನಲ್ಲಿ ನಾಲ್ಕು ಮತ್ತು ಮಲಬಾರಿನಲ್ಲಿ ಒಂದು ಹೀಗೆ ಒಂಭತ್ತು ಕಾರಖಾನೆಗಳನ್ನು ಹೊಸದಾಗಿ ಹೊರಡಿಸಬೇಕೆಂದು ಯೋಜಿಸುತಿದೆ. ಅವುಗಳಲ್ಲಿ ಮದ್ರಾಸ ಸರಕಾರ ಒಂದನ್ನಾದರೂ ತಾನೇ ನಡೆಸಬೇಕೆಂದು ಆಶಿಸುತ್ತದೆ.

ಹೊಣೆಗಾರ ಸರಕಾರಗಳು ದೇಶಕ್ಕೆ ಮಾರ್ಗದರ್ಶಕವಾಗಬೇಕಿದ್ದರೆ, ಜನರಿಗೆ ಇಷ್ಟವಾವುದು, ಹಿತಕಾರಕವಲ್ಲದ ವಿಷಯಗಳಾವುವು ಎಂಬ ಬಗ್ಗೆ ಮೊದಲು ತಮ್ಮ ಮನಸ್ಸಿನಲ್ಲಿ ನಿಚ್ಚಳ ನಿರ್ಧಾರಕ್ಕೆ ಬರಬೇಕಾದುದು ಅತ್ಯವಶ್ಯವಾಗಿದೆ. ಒಂದು ಕಾಂಗ್ರೆಸ್ ಮಂತ್ರಿಮಂಡಳ 'ವನಸ್ಪತಿ' ನಿರ್ಬಂಧ ಹಾಕುವಷ್ಟು ಕೆಟ್ಟ ವಸ್ತುವೆಂದು ಭಾವಿಸುವಾಗ ಮತ್ತೊಂದು ಕಾಂಗ್ರೆಸ್ ಮಂತ್ರಿಮಂಡಳ ಅದು ಅಮೂಲ್ಯ ಪದಾರ್ಥ ಭಾವಿಸಿ ಅದಕ್ಕೆ ಪ್ರೋತ್ಸಾಹನ ಕೊಡಬೇಕೆಂದು ಮುಂದಾಗುವದೆಂದರೆ ಏನೆನ್ನ ಬೇಕೋ ತಿಳಿಯದು. ಈ ಬಗೆಯ ಭಿನ್ನ ಭಿನ್ನ ಧೋರಣೆ ಇರುವ [illegible] ಪ್ರಗತಿಯಾಗಲಾರದೆಂದು ನಮ್ಮ ಅಭಿಪ್ರಾಯ. ಇಡೀ ದೇಶಕ್ಕಾಗಿ ಉಚಿತವಾದ ಒಂದೇ ಬಗೆಯ ಧೋರಣೆಯನ್ನು ನಾವು ನಿರೀಕ್ಷಿಸುತಿದ್ದೇವೆ. ಇಡೀ ದೇಶದ ಕಲ್ಯಾಣಕ್ಕಾಗಿ ಯಾವ ಬಗೆಯ ಧೋರಣವನ್ನು ಅನುಸರಿಸತಕ್ಕದ್ದು ಎಂಬದನ್ನು ಸಾರಲು ವಿಧಾಯಕ ಕಾರ್ಯಕ್ರಮ ಸಮಿತಿಯು ಮುಂದೆ ಬರುವುದಕ್ಕೆ ಇನ್ನೂ ಕಾಲವಿಲಂಬವಾಗಿಲ್ಲವೆ ?

ಜೆ. ಸಿ. ಕುಮಾರಪ್ಪ

ಜಾಗತಿಕ ಭಯಕಾರಣ

ನಮ್ಮ ಪ್ರತಿಯೊಂದು ಕೃತ್ಯ ನಮ್ಮ ನೆರೆಯವರ ಕಲ್ಯಾಣಕ್ಕಾಗಿ ಇಲ್ಲವೆ ಅವರ ಅಕಲ್ಯಾಣಕ್ಕಾಗಿ ಕಾರಣವಾಗುತ್ತದೆ. ಒಂದು ದೇಶದ ಆರ್ಥಿಕಸಂಸ್ಥೆಯು ಪರಿಣಾಮ ಎರಡನೆಯ ದೇಶದ ಮೇಲೆ ಆಗುತ್ತದೆ. ಸೃಷ್ಟಿಯ ಸಾಧನ ಸಂಪತ್ತಿನ ಉಪಯೋಗವನ್ನು ಯೋಗ್ಯ ರೀತಿಯಿಂದ ಮಾಡಿಕೊಂಡು ಒಂದು ಬಗೆಯ ಸಮತೋಲವನ್ನು ಸಾಧಿಸದಿದ್ದರೆ ವಿಶ್ವಶಾಂತಿಗೇ ಭಂಗವುಂಟಾಗುತ್ತದೆ. ಪ್ರಾಣಿಶಕ್ತಿ, ಕಟ್ಟಿಗೆಯ ಉಪಕರಣಗಳು ಮತ್ತು ಮನುಷ್ಯ ಇಲ್ಲವೆ ಸೃಷ್ಟಿ ಅಮಿತವಾಗಿ ಉತ್ಪಾದಿಸಬಲ್ಲ ಉಳಿದ ಸಾಮಗ್ರಿಗಳ ಸಹಾಯದಿಂದ ನಮ್ಮ ಆರ್ಥಿಕ ರಚನೆಯನ್ನು ಮಾಡಿಕೊಂಡಷ್ಟು ನಮ್ಮ ರಾಷ್ಟ್ರವು ಹೆಚ್ಚು ಶಾಶ್ವತವಾಗಬಲ್ಲದು. ಕಲ್ಲಿದ್ದಲಿ ಎಣ್ಣೆ ಮೊದಲಾದ ಸೃಷ್ಟಿಯ ಸಂಗ್ರಹವನ್ನವಲಂಬಿಸಿ ನಾವು ನಮ್ಮ ಆರ್ಥಿಕ ರಚನೆಯನ್ನು ಕಟ್ಟಿಕೊಂಡಷ್ಟು, ಈ ಸಂಗ್ರಹವು ಬತ್ತಿದಾಗೆಲ್ಲ ನಮ್ಮ ನೆರೆಯವರೊಡನೆ ತಿಕ್ಕಾಟಕ್ಕೊಳಗಾಗುವ ಸಂಭವ ಹೆಚ್ಚಿಗುಂಟು.

ಇಂಗ್ಲಂಡು ಒಂದು ಕಾಲಕ್ಕೆ ಅಶ್ವಶಕ್ತಿಯನ್ನೇ ಉಪಯೋಗಿಸಿ ತನ್ನ ಆರ್ಥಿಕ ರಚನೆಯನ್ನು ಕಟ್ಟಿಕೊಂಡಿದ್ದಿತು. ಕುದುರೆಯು ಸಂಚಾರದ ಸಾಧನವಾಗಿದ್ದಿತು. ಮೇವಿಗಾಗಿ ಮತ್ತು ಭೂಮಿಯನ್ನೂಳಲು ಅವನ್ನೇ ಉಪಯೋಗಿಸಲಾಗುತಿದ್ದಿತು. ಉಗಿಯ ಯಂತ್ರೋಪಕರಣಗಳ ಸಂಶೋಧನೆಯ ನಂತರ ಕಲ್ಲಿದ್ದಲಿ ಪ್ರಚಾರದಲ್ಲಿ ಬಂದಿತು. ಇದರಿಂದ ಇಂಗ್ಲಂಡು ಭೂಸಂಪತ್ತಿನ ಸಂಗ್ರಹದ ಮೇಲೆ ತನ್ನ ಆರ್ಥಿಕ ರಚನೆ ಕಟ್ಟಿಕೊಳ್ಳಲಣಿಯಾಯಿತು. ಕಲ್ಲಿದ್ದಲಿ ಸಂಗ್ರಹ ಕಡಮೆಯಾಗುತ್ತ ನಡೆದಂತೆ ಇಂಗ್ಲಂಡು ಹಿಂಸೆಯನ್ನವಲಂಬಿಸಬೇಕಾಯಿತು. ಅದೇ ಸಮಯದಲ್ಲಿ ಅಮೇರಿಕ ತನ್ನ ಪ್ರಚಂಡ ಎಣ್ಣೆ ಕ್ಷೇತ್ರಗಳ ಸಂಪತ್ತಿಯಿಂದ ಮುಂದೆ ಬಂದಿತು. ಕಲ್ಲಿದ್ದಲಿಗಿಂತ ಎಣ್ಣೆ ಹೆಚ್ಚು ಉಪಯುಕ್ತವೆಂದು ಕಂಡುಬಂದದ್ದರಿಂದ ಇಂಗ್ಲಂಡು ಕಲ್ಲಿದ್ದಲಿಯನ್ನು ಬಿಟ್ಟುಕೊಟ್ಟು ಎಣ್ಣೆಯ ಉಪಯೋಗ ಮಾಡಹತ್ತಿತು. ಕಳೆದ ಎರಡು ಮಹಾಯುದ್ಧಗಳಲ್ಲಿ ಎಣ್ಣೆಯ ಸಂಗ್ರಹವೆಲ್ಲ ಬತ್ತಿಹೋದ್ದರಿಂದ ಜಗತ್ತಿನಲ್ಲಿ ಎಣ್ಣೆ ಸಂಗ್ರಹ ಎಲ್ಲೆಲ್ಲಿದೆಂಬದನ್ನು ಬೇರೆ ಬೇರೆ ರಾಷ್ಟ್ರಗಳು ಪ್ರತೀಕ್ಷಿಸುತಿರುವವು. ಜಗತ್ತಿನ ಇತರ ಭಾಗಗಳಲ್ಲಿ ಎಣ್ಣೆಯನ್ನು ಸಂಪಾದಿಸುವ ಶಕ್ಯತೆಯನ್ನೆ ಆಯಾ ರಾಷ್ಟ್ರಗಳಲ್ಲಿಯ ಶಾಂತಿ ಅವಲಂಬಿಸುತ್ತದೆ. ರಶಿಯಾ, ಗ್ರೇಟಬ್ರಿಟನ್ ಮತ್ತು ಅಮೇರಿಕೆ, ಪರ್ಶಿಯಾ, ಅಫಗಾಣಿಸ್ತಾನ, ಇರಾಣ ಅರಬಸ್ತಾನ ಮೊದಲಾದ ರಾಷ್ಟ್ರಗಳಲ್ಲಿಯ ಎಣ್ಣೆಗಾಗಿ ಒಳ್ಳೆ ಆತುರವಾಗಿವೆ. ಆಯಾ ರಾಷ್ಟ್ರಗಳಲ್ಲಿನ ಒಡಂಬಡಿಕೆಯೆ ಜಗತ್ತಿನಲ್ಲಿಯ ಅನೇಕ ಸಣ್ಣ ಸಣ್ಣ ರಾಷ್ಟ್ರಗಳ ಕಲ್ಯಾಣವನ್ನವಲಂಬಿಸುತ್ತದೆ.

ಹಿಂದುಸ್ತಾನದಲ್ಲಿ ಗೋಶಕ್ತಿಯು ಆರ್ಥಿಕ ರಚನೆಯೆ ಇದ್ದಿತು. ಆದರಿದೀಗ ಔದ್ಯೋಗಿಕರಣದ ಮಾತು ನಡೆದದ್ದರಿಂದ ನಮ್ಮ ನೈಸರ್ಗಿಕ ಸಾಧನ ಸಂಪತ್ತಿಯಲ್ಲದ ಪೆಟ್ರೋಲಿನ ಸಹಾಯದಿಂದ ನಮ್ಮ ಆರ್ಥಿಕ ರಚನೆಯನ್ನು ಕಟ್ಟಬೇಕೆಂಬತ್ತ ನಾವು ಭರದಿಂದ ಆಕರ್ಷಿಸಲ್ಪಡಹತ್ತಿದ್ದೇವೆ. ಹಿಂದೀ ವಿಮಾನ ಮಾರ್ಗಗಳು ಪ್ರತಿದಿನ ಭೂಕಕ್ಷೆಗೆ ಸಮಪಾದಷ್ಟು ಪ್ರದೇಶವನ್ನು ಮುಟ್ಟುತಿವೆಂದು ಹೇಳಲಾಗುತ್ತದೆ. ಕಳೆದ ವರ್ಷ ೭ ಕೋಟಿ ಪ್ಯಾಸೆಂಜರ ಮೈಲಿನಷ್ಟು ಪ್ರದೇಶವನ್ನು ವಿಮಾನಗಳು ಸಂಚರಿಸಿದವು. ಈ ವರುಷ ಇದನ್ನು ಇಮ್ಮಡಿಸಲಾಗುವದೆಂದು ತೋರುತ್ತದೆ. ಹಿಂದುಸ್ತಾನದಲ್ಲೀಗ ೪೦೦ ವಿಮಾನಗಳಿವೆ. ಮತ್ತು ಪ್ರಚಂಡ ಪ್ರಮಾಣದಲ್ಲಿ ವಿಮಾನಗಳನ್ನು ಕಟ್ಟಬೇಕೆಂಬ ಕಾರ್ಯಕ್ರಮವನ್ನಿಟ್ಟುಕೊಳ್ಳಲಾಗಿದೆ. ಕರಾಚಿ, ದಿಲ್ಲಿ, ಕಲಕತ್ತಾ ಮತ್ತು ಮುಂಬಯಿಗಳಲ್ಲಿ ಅತ್ಯುತ್ತಮ ಅಂತರ್‌ರಾಷ್ಟ್ರೀಯ ವಿಮಾನ ಗೃಹಗಳನ್ನು ಕಟ್ಟಲಾಗುತಿದೆ ಮತ್ತು ವಿಮಾನ ಮಾರ್ಗಗಳ ಪುರಸ್ಕರ್ತರು ಅಂತರ್‌ರಾಷ್ಟ್ರೀಯ ವಿಮಾನ ಸಂಚಾರವನ್ನು ಕಾರ್ಯರೂಪದಲ್ಲಿ ತರಲು ಪ್ರಯತ್ನಿಸುತಿರುವರು. ಇದೆಲ್ಲ ಅತ್ಯಂತ ಅತ್ಯಶ್ಲಾಘನೆಯ 'ಮುನ್ನಡೆ ಮತ್ತು ಪ್ರಗತಿ'ಯನ್ನು ಕೇಳಿದ ಕೂಡಲೆ ಜಗತ್ತಿನಲ್ಲಿ ಇದೆಲ್ಲದರ ಪರಿಣಾಮವೇನಾಗಬಹುದೆಂಬ ಬಗ್ಗೆ ಭಯಭೀತರಾಗಿ ನಡುಗಬೇಕಾಗುವದು.

ಮಾರ್ಗೇಟದಲ್ಲಿ ನಡೆದ ಕೂಲಿಕಾರ ಪಕ್ಷದ ಪರಿಷತ್ತಿನಲ್ಲಿ ಬ್ರಿಟಿಶ್ ಪರರಾಷ್ಟ್ರ ಮಂತ್ರಿ ಮಿ.ಬೆವಿನ್‌ರು, ಜಗತ್ತಿನ ಶಾಂತಿಯು ಇನ್ನು ಬಹಳ ವರುಷಗಳ ವರೆಗೆ ಹಿಂದೀ ಸಮಸ್ಯೆ ಪರಿಹಾರವನ್ನ ಬಹಳಮಟ್ಟಿಗೆ ಅವಲಂಬಿಸುತಿದೆಂದು ಹೇಳಿದರೆಂದು ತಿಳಿಯುತ್ತದೆ. ಅನಂತರ ಹಿಂದುಸ್ತಾನದ ಔದ್ಯೋಗಿಕ ಅವಶ್ಯಕತೆಗಳನ್ನುಲ್ಲೇಖಿಸುತ್ತ "ನಮ್ಮಂತೆ ಹಿಂದುಸ್ಥಾನವೂ ಈ ಎಣ್ಣೆ (ಮಧ್ಯಪೂರ್ವದಲ್ಲಿಯ ಎಣ್ಣೆಕ್ಷೇತ್ರ) ಯನ್ನೆ ಅವಲಂಬಿಸಬೇಕಾಗುತ್ತದೆ. ಹಿಂದುಸ್ತಾನ ಔದ್ಯೋಗಿಕರಣವನ್ನು ಹೊಂದುತಿರುವದರಿಂದ ಈ ಸಾಧನ ಸಂಪತ್ತನ್ನೆಲ್ಲ ರಕ್ಷಿಸಿಕೊಳ್ಳುವದು ಹೆಚ್ಚೆಚ್ಚು ಮಹತ್ವದ್ದಾಗುತ್ತ ಹೋಗುತ್ತದೆ, ಎಂದು ಜೋಡಿಸಿದರು.

ನಾವು ಇಂದಿನಂತೆ ಭರದಿಂದ ಔದ್ಯೋಗೀಕರಣದಲ್ಲಿ ಪ್ರಗತಿಯನ್ನು ಪಡೆಯುತ್ತ ಹೋದರೆ ಹಿಂದುಸ್ತಾನ ಜಗತ್ತಿನ ಶಾಂತಿಗೆ ಸಹಜವಾಗಿ ಗಂಡಾಂತರಪ್ರದವಾಗುವದೆಂದು ಕಂಡುಬರದಿರಲಾರದು. ಹಿಂದುಸ್ತಾನ ಜಗತ್ತಿನ ಶಾಂತಿಗೆ ಸಹಾಯ ಮಾಡಬೇಕಾಗಿದ್ದರೆ ನಾವು ಉಪಯೋಗಿಸುತಿರುವ ಕ್ರಮದ ಬಗ್ಗೆ ಹೆಚ್ಚು ಲಕ್ಷ್ಯ ಕೊಡಬೇಕಾಗುವದು. ನಾವು ಅನುಸರಿಸತಕ್ಕ ಕ್ರಮವು ಈ ರೀತಿಯಾಗಿದ್ದರೆ ನಮ್ಮ ದೈನಿಕ ಜೀವನಕ್ಕಾಗಿ ನಮ್ಮ ಬಾಂಧವರ ಶೋಷಣೆ ಅವಶ್ಯವೆನಿಸಿದರೆ, ಕೊನೆಯಲ್ಲಿ ನಾವೂ ತಮ್ಮ ಸ್ವಾರ್ಥಸಾಧನೆಗಾಗಿ ಸಾಧನ ಸಂಪತ್ತಿಯನ್ನೆಲ್ಲ ನಿಯಂತ್ರಿಸಲು ಪ್ರಯತ್ನಿಸುತಿರುವ ಗ್ರೇಟ ಬ್ರಿಟನ್ ಮತ್ತು ಅಮೇರಿಕೆಯ ಮಾರ್ಗವನ್ನವಲಂಬಿಸಬೇಕಾಗುವದು. ಯೋಗ್ಯ ರೀತಿಯಿಂದ ವಿಚಾರ ಮಾಡಿದರೆ ಸ್ವಲ್ಪ ಸಂಯಮ, ಆತ್ಮನಿಗ್ರಹ ಮತ್ತು ಶಿಸ್ತು ಅವಶ್ಯವೆಂದು ಕಂಡು ಬರದಿರಲಾರದು. ಇದರಿಂದ ನಮ್ಮ 'ಪ್ರಗತಿ' ಕೆಲಮಟ್ಟಿಗೆ ಕುಂಠಿತವಾಗುವದೆಂದು ತೋರಬಹುದು, ಎಲ್ಲ ರಾಷ್ಟ್ರಗಳು ಅವಶ್ಯವೆನಿಸಿದರೆ ಕೆಲಮಟ್ಟಿಗೆ ಸ್ವಾರ್ಥತ್ಯಾಗ ಮಾಡಿಯೂ ಎಲ್ಲ ಜನರ ಕಲ್ಯಾಣವನ್ನೇ ಮುಖ್ಯವನ್ನಾಗಿಟ್ಟುಕೊಂಡು ಕೇಂದ್ರ ಆರ್ಥಿಕ ರಚನೆಯನ್ನು ಮಾಡಬೇಕೆಂದು ಬಗೆದು ಸರ್ವ ಆರ್ಥಿಕ ರಚನೆಯನ್ನು ನಿಯಮನಗೊಳಿಸಲು ನಾವು ಸಿದ್ಧರಾಗಿರುವೆವೋ ? —ಜೆ. ಸಿ. ಕುಮಾರಪ್ಪ

ಕಡೆಯ ಅಂತಸ್ತು

ನಿಷ್ಕೃಷ್ಟಕಾರ್ಯಕ್ರಮವಿಲ್ಲದೆ ಬರಿದೆ ಧಾರ್ಮಿಕ ಪ್ರತಿಜ್ಞೆಗಳನ್ನು ಮಾಡುವುದರಿಂದಾಗುವ ಅಪಾಯವನ್ನು ಯೇಸುಕ್ರಿಸ್ತನು ಒಂದು ಕತೆಯಲ್ಲಿ ಹೇಳಿದ್ದಾನೆ. ಮನುಷ್ಯನ ಅಶುದ್ಧ ಭಾವವು ದೇಹದಿಂದ ಹೊರ ಹೊರಟು ಹೋದಾಗ, ಶುದ್ಧ ಭಾವವು ಅಸ್ಥಳವನ್ನು ಬಂದು ಆಕ್ರಮಿಸದಿರುವಾಗ, ಹೊರ ಹೋಗಿದ್ದ ಅಶುದ್ಧ ಭಾವವು ತನಗಿಂತ ಅಶುದ್ಧವಾದ ಏಳು ಬೇರೆಯ ಭಾವಗಳನ್ನು ಕರೆದುಕೊಂಡು ಪುನಃ ದೇಹವನ್ನು ಪ್ರವೇಶಿಸುತ್ತದೆ. ಆಗ ಎಷ್ಟೇ ಸದುದ್ದೇಶವುಳ್ಳ ಮನುಷ್ಯನಾದರೂ ಮೊದಲಿಗಿಂತ ಹೆಚ್ಚು ಕೆಟ್ಟಸ್ಥಿತಿಗೆ ಇಳಿಯುತ್ತಾನೆ.

ಮದ್ರಾಸ ಸರಕಾರವು ಮಾಡುತ್ತಿರುವ ಕೃತ್ಯಗಳಿಂದ ಮೇಲಿನ ಮಾತಿನ ಸತ್ಯತೆಯು ಹೆಚ್ಚು ಹೆಚ್ಚು ಸ್ಪಷ್ಟವಾಗತೊಡಗಿದೆ. ಅದು ಸಲಹೆಗಾರ ಆಡಳಿತವನ್ನು ಕೊನೆಗೊಳಿಸಿತು, ಪ್ರಕಾಶಂರವರ ಮಂತ್ರಿತ್ವದಲ್ಲಿ ಒಳ್ಳೆಯ ನಿರ್ಧಾರಗಳನ್ನು ಮಾಡಿತು, ಮತ್ತು ಈಗ ಪುನಃ [illegible] ಸಮಾಧಿಸ್ಥವಾದಂತೆ ತೋರುತ್ತದೆ.

ಫಿರ್ಕಾ ಗ್ರಾಮೋದ್ಯೋಗದ ಅಧಿಕಾರಿಗಳಿಗೆ ಉಚ್ಚಾಟನೆಯ ಹುಕುಂ ಕೊಟ್ಟ ಸುದ್ದಿ ಬಂದಿದೆ. ಶ್ರೀ ಆರ್. ವಿನಾಯಕ ಪಿಳ್ಳೆಯವರಂತಹ ಗಾಂಧೀ ತತ್ವದ ಆರ್ಥಿಕ ಕ್ರಮದಲ್ಲಿ ಶ್ರದ್ಧೆ ಉತ್ಸಾಹಗಳಿಟ್ಟು ಸರಕಾರೀ ಉದ್ಯೋಗದ ಬಾಗಿಲನ್ನು ಹೊಕ್ಕವರಿಗೆ ಬಡಿದೆಬ್ಬಿಸಿದಂತಾಗಿದೆ. ಇವರು ರಚನಾತ್ಮಕ ಪ್ರವೀಣರು ಮತ್ತು ಹಿಂದೆ ಒಳ್ಳೆಯ ಕೆಲಸ ಮಾಡಿ ಹೆಸರುಗಳಿಸಿದವರು. ಮಂತ್ರಿಮಂಡಲದವರು ಅನುಸರಿಸುತ್ತಿರುವ ಧೋರಣೆಗಳ ಬಗ್ಗೆ ನಮ್ಮ ಆಕ್ಷೇಪವಿಲ್ಲ. ಅವುಗಳ ನಿಷ್ಕರ್ಷೆಯು ಆಯಾ ಮತದಾರ ಕ್ಷೇತ್ರದವರಿಗೆ ಸೇರಿದ್ದು. ಮಂತ್ರಿಗಳು ಜನೇಚ್ಛೆಗೆ ವಿರುದ್ಧವಾಗಿ ನಡೆದುಕೊಂಡರೆ ಅವರನ್ನು ಪದಚ್ಯುತ ಮಾಡುವುದಕ್ಕಾಗಲಿ, ಕಡೆಯ ಪಕ್ಷ ತಮ್ಮವರಲ್ಲವೆಂದು ತಿರಸ್ಕರಿಸುವುದಕ್ಕಾಗಲಿ ಬೇಕಾದ ಕಾರ್ಯಕ್ರಮ ಕೈಗೊಳ್ಳುವುದು ಜನರ ಪಾಲಿನ ಕರ್ತವ್ಯ. ಮಂತ್ರಿ ಮಂಡಲವು ನೇರವಾಗಿ ನಮ್ಮ ಧ್ಯೇಯವಿಂಥದು, ನಾವು ಇಂಥ ಧ್ಯೇಯವನ್ನು ಅನುಸರಿಸುತ್ತಿದ್ದೇವೆ ಎಂದು ನಿರ್ಧರಿಸಿ ಹೇಳುವದಷ್ಟೇ ನಮಗೆ ಬೇಕಾದದ್ದು. ಬಟ್ಟೆಯ ಧೋರಣೆ ಬದಲಾಯಿಸಿದ್ದು ಮತ್ತು ಮೇಲಿನ ಅಧಿಕಾರಿಗಳನ್ನು ನಿವೃತ್ತಿಗೊಳಿಸಿದ್ದು ಗಾಳಿಯತ್ತ ಬೀಸುತ್ತಿದೆಯೆಂಬುದನ್ನು ಸೂಚಿಸುತ್ತವೆ. ಮತ್ತು ನಮ್ಮನ್ನು ಹೆದರಿಸುವುದೆಂದರೆ "ಮನುಷ್ಯನ ಮೊದಲಸ್ಥಿತಿಗಿಂತ ಕಡೆಯಸ್ಥಿತಿ, ಇನ್ನೂ ಹೆಚ್ಚು ಕೆಟ್ಟದ್ದಾದೀತು" ಎಂಬುದೇ.

ಜೆ. ಸಿ. ಕುಮಾರಪ್ಪ

ಜನಸಾಮಾನ್ಯರಿಗೆ ಔಷಧಗಳು

ನಿಸರ್ಗ ಚಿಕಿತ್ಸೆಯ ಬಗ್ಗೆ ಗಾಂಧೀಜಿಗೆ ಪಕ್ಷಪಾತ ವಿರುವದು ಸರ್ವವೇದ್ಯವಾಗಿದೆ. ಪಾಶ್ಚಾತ್ಯ ವೈದ್ಯಪದ್ಧತಿಯನ್ನನುಸರಿಸುವ ವೈದ್ಯರ ಔಷಧಗಳಲ್ಲಿ ಅವರಿಗೆ ಚಿಕ್ಕಂದಿನಲ್ಲೇ ವಿಶ್ವಾಸಹಾರಿ ಹೋಗಿತ್ತೆಂದೂ ತೋರುತ್ತದೆ. ದಕ್ಷಿಣ ಆಫ್ರಿಕದಲ್ಲಿದ್ದಾಗ ಒಂದು ಸಲ ಅವರ ಹೆಂಡತಿಗೆ ಗರ್ಭಾಶಯ ಸಂಬಂಧದ ರೋಗತಲೆದೋರಿದಾಗ ಒಬ್ಬ ವೈದ್ಯರು ಗೋಮಾಂಸದ ಚಹಾ ಕೊಟ್ಟ ಹೊರತು ಅದು ಹೋಗದೆಂದರು. ಕಾಹಿಲೆ ಬಹಳ ಜೋರಾಗಿತ್ತು ಆದರೆ ಗಾಂಧೀಜಿ ಮತ್ತು ಅವರ ಹೆಂಡತಿ ಇಬ್ಬರೂ ಕೇವಲ ಸಸ್ಯಾಹಾರಿಗಳಾಗಿದ್ದುದರಿಂದ ಸತ್ತರೂ ಅಡ್ಡಿಯಿಲ್ಲವೆಂದು ಕುಳಿತರು. ವೈದ್ಯರು ರೋಗಿಯನ್ನು ಕೈಬಿಟ್ಟರು ಆದರೆ ವಿಶ್ರಾಂತಿ ಮತ್ತು ನಿಸರ್ಗ ಚಿಕಿತ್ಸೆಯಿಂದ "ಬಾ" ಆರೋಗ್ಯ ಲಾಭ ಪಡೆದರು. ಅಂತಹ ಒಂದೆರಡು ಅನುಭವಗಳು ನಿಸರ್ಗ ಚಿಕಿತ್ಸೆಯಲ್ಲಿ ಗಾಂಧೀಜಿಗಿದ್ದ ನಂಬಿಕೆಯನ್ನು ದೃಢಪಡಿಸಿದವು; ಅಂದಿನಿಂದ ಅವರು ಹಾಗೇ ನಂಬಿಕೊಂಡು ಬಂದಿದ್ದಾರೆ.

ಗಾಂಧೀಜಿಯು ಜನಸಾಮಾನ್ಯರಿಗೆ ಸೇರಿದವರು; ಅವರಿಗಾಗಿ ಇರತಕ್ಕವರು. ಆದುದರಿಂದ ಈ ದೇಶದಲ್ಲಿರುವ ಕೆಲವು ಸುಪ್ರಸಿದ್ಧ ನಿಸರ್ಗ ಚಿಕಿತ್ಸಕರ ಚಿಕಿತ್ಸಾಕ್ರಮ ಅವರಿಗೆ ಸೇರದು. "ಕುನ್ಹೆಯವರ ನವ ಚಿಕಿತ್ಸಾಶಾಸ್ತ್ರ" ವೆಂಬುದನ್ನು ಜಸ್ಟರವರ "ಮರಳು ನಿಸರ್ಗದೆಡೆಗೆ" ಎಂಬ ಪುಸ್ತಕವನ್ನೂ ೪೦ ವರ್ಷಗಳ ಕೆಳಗೆ ಓದಿದನಂತರ ನಾನು ನಿಸರ್ಗಚಿಕಿತ್ಸೆಯ ಮೇಲೆ ಸಂಪೂರ್ಣ ವಿಶ್ವಾಸವಿಡಬೇಕಾಗಿದೆ, 'ಮರಳು ನಿಸರ್ಗದೆಡೆಗೆ' ತಿಳಿದಿಲ್ಲವೆಂದು ನಾನು ಒಪ್ಪಿಕೊಳ್ಳಬೇಕಾಗಿದೆ; ಪ್ರಯತ್ನ ಮಾಡದುದರಿಂದಲ್ಲ ಅಜ್ಞಾನದೆಸೆಯಿಂದ. ನಾನು ಹಿಂದುಸ್ತಾನದ ಕೋಟ್ಯನುಕೋಟಿ ಬಡವರಿಗಾಗಿ ಅವರಿಗೆ ತಕ್ಕದ್ದಾದ ಹೊಸದೊಂದು ನಿಸರ್ಗಚಿಕಿತ್ಸಾಪದ್ಧತಿಯನ್ನು ರೂಪಿಸಲು ಪ್ರಯತ್ನಿಸುತ್ತಿದ್ದೇನೆ. ಮಣ್ಣು, ನೀರು ಬೆಳಕು ಗಾಳಿ ಮತ್ತು ಆಕಾಶಗಳಿಂದ ಎಷ್ಟು ಗುಣಪಡೆಯಬಹುದೋ ಅಷ್ಟನ್ನು ಪಡೆಯುವುದರ ಪ್ರಚಾರದಲ್ಲಿ ಮಾತ್ರ ನಾನು ನಿರತನಾಗಿದ್ದೇನೆ; ಕೆಲವು ಕೋಟಿ ಜನರು ರಾಮ ಎನ್ನುವ ಮತ್ತೆ ಕೆಲವು ಕೋಟಿ ಜನರು ಅಲ್ಲಾ ಎನ್ನುವ ಸರ್ವರೋಗ ಸಂಜೀವನಿಯಾದ ದೇವರ ಹೆಸರನ್ನು ಹೃತ್ಪೂರ್ವಕ ಉಚ್ಚರಿಸುವುದರತ್ತ ಇದು ಎಳೆದೊಯ್ಯುತ್ತದೆ. ನಿಸರ್ಗವು ಮನುಷ್ಯನಿಗೆ ವಿಧಿಸಿದ ನಿಯಮಗಳನ್ನು ಗುರುತಿಸಿ ಪಾಲಿಸುವ ಕರ್ತವ್ಯ ಅಂತಹ ಹೃತ್ಪೂರ್ವಕವಾಗಿ ಮಾಡುವ ಸ್ತೋತ್ರದ ಬೆನ್ನ ಹಿಂದೆಯೇ ಇದೆ. ರೋಗ ಬಂದ ಬಳಿಕ ಗುಣಪಡಿಸುವುದಕ್ಕಿಂತ ಅದು ಬರದ ಹಾಗೆ ಮಾಡುವುದೇ ಲೇಸೆಂಬುದು ಈ ಮಾರ್ಗದಲ್ಲಿ ವಿಚಾರ ಮಾಡಿದರೆ ತಿಳಿದು ಬರುತ್ತದೆ. ಇದರಿಂದ ಆರೋಗ್ಯ ಶಾಸ್ತ್ರದ ನಿಯಮಗಳಾದ ಮನಃಶುದ್ಧಿ, ದೇಹಶುದ್ಧಿ ಮತ್ತು ಸುತ್ತಣ ಪ್ರದೇಶಗಳ ಶುದ್ಧಿಗಳನ್ನು ಕಾಯ್ದುಕೊಳ್ಳಲಭ್ಯಸಿಸಲು ಪ್ರತಿಯೊಬ್ಬನೂ ಯತ್ನಿಸಬೇಕಾಗುತ್ತದೆ" ಎಂದು ಅವರು ಕೆಲ ದಿನಗಳ ಹಿಂದೆ ಒಬ್ಬ ಪರದೇಶದ ನಿಸರ್ಗ ಚಿಕಿತ್ಸಾತಜ್ಞನಿಗೆ ಕಾಗದ ಬರೆದರು.

ಇತ್ತೀಚೆಗೆ ಮನುಗಾಂಧಿಯ ಕಾಹಿಲೆಯಲ್ಲಿ ಗಾಂಧೀಜಿ ಬಹಳ ಜನ ನಿಸರ್ಗಚಿಕಿತ್ಸಕರ ಸಲಹೆ ಪಡೆದರು. ಅವರಲ್ಲಿ ಕೆಲವರು ಅವಳು ಖಂಡಿತವಾಗಿಯೂ ಕರುಳಿನರೋಗದಿಂದ ನರಳುತ್ತಿಲ್ಲವೆಂದು ಹೇಳಿದರು. ಆದುದರಿಂದ ಶಸ್ತ್ರಚಿಕಿತ್ಸೆ ತಪ್ಪಿತಲ್ಲಾ ಎಂದು ಗಾಂಧೀಜಿ ಸಂತೋಷಪಟ್ಟರು ! ಆದರೆ ಅಷ್ಟರಲ್ಲಿ ಕೆಲವು ವೈದ್ಯರು ಅದನ್ನು ಮಾಡಿಯೇ ತೀರಬೇಕೆಂದುದರಿಂದ ಅವರು ಒಪ್ಪಬೇಕಾಯಿತು. ಕರ್ನಲ್ ಭಾರ್ಗವರವರು ಶಸ್ತ್ರ ಚಿಕಿತ್ಸೆ ಮಾಡಿ ಬಲವಾಗಿ ಉಬ್ಬಿದ ಮಾಂಸಗ್ರಂಥಿಯನ್ನು ಕರುಳಿಂದ ಹೊರತೆಗೆದರು. ಅದೇ ಮರುದಿನ ಅವರು

—೧೧ನೇ ಪುಟಕ್ಕೆ

ವಾರದ ಪತ್ರ

ನಮ್ಮ ಕರ್ತವ್ಯ

ವಾಯಿಸರಾಯರು ದಿಲ್ಲಿಗೆ ಮರಳಿದೊಡನೆ ವಾತಾವರಣ ಉತ್ಕಂಠೆಯಿಂದ ಕಲಕಿಹೋಯಿತು. ಚಕ್ರವರ್ತಿ ಸರಕಾರದ ಸೂಚನೆಗಳನ್ನು ಕುರಿತು ಕಾಂಗ್ರೆಸ ಮತ್ತು ಲೀಗ ಮುಂದಾಳುಗಳೊಡನೆ ಚರ್ಚಿಸುವದಾಯಿತು. ಅವರಾದರೂ ತಮ್ಮ ಸಹಯೋಗಿಗಳೊಡನೆ ಮಾತಾಡಿ ಕೊಂಡರು. ಅದರ ಹೇಳಿಕೆ ತಾ ೩ ಕ್ಕೆ ಔಪಚಾರಿಕವಾಗಿ ಪ್ರಸಿದ್ಧಿಸಲ್ಪಡುವ ವರೆಗೆ ಯಾವುದೂ ಬೆಳಕಿಗೆ ಬರಬಾರದೆಂದು ತೀರ್ಮಾನಿಸಲ್ಪಟ್ಟಿತು. ಅದುದರಿಂದ ತಾ ೨ ಮತ್ತು ೩ ನೆ ದಿನ ಗಾಂಧೀಜಿ ತಮ್ಮ ಭಾಷಣದಲ್ಲಿ ಕುತುಹಲವನ್ನು ಸಂಯಮಿಸಿಕೊಳ್ಳಿರೆಂದು ಜನರಿಗೆ ಕೇಳಿಕೊಂಡರು. ಏನೇನು ಜರುಗಿತು, ಏನು ಜರುಗುತಿದೆಯೆಂದು ಹೇಳುವದು ತಮಗೆ ಸಾಧ್ಯವಿಲ್ಲವೆಂದರವರು. "ನಾನೂ ನೀವೂ ಬೀದಿಯ ಜನ. ವಾಯಿಸರಾಯರು ತಂದದ್ದರ ಗೊಡವೆ ನಮಗೆ ಬೇಡ. ಇದ್ದ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದ ಕೆಲಸವೊಂದೇ ನಮ್ಮ ವಿಚಾರವಾಗಿರಬೇಕು.

ಡಾಕ್ಟರ ಜನರು ತಮ್ಮ ದೃಷ್ಟಿಯನ್ನು ಹಳ್ಳಿಗಳ ಕಡೆ ಹೊರಳಿಸಬೇಕು. ಇಲ್ಲಿ ದೇಶಿ ಔಷಧಗಳನ್ನೂ ಆರೈಕೆಯ ಪದ್ಧತಿಯನ್ನೂ ಅಭ್ಯಸಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಅವರು ಜನರಿಗೆ ಬಾಳುವ ಸರಿಯಾದ ಹಾದಿಯನ್ನು ತೋರಿಸಬೇಕೆಂದು ಗಾಂಧೀಜಿ ಸೂಚಿಸಿದರು.

"ವೈಜ್ಞಾನಿಕರ ಬಗ್ಗೆ ನಾನೇನು ಹೇಳಲಿಲ್ಲ? ತಮಗೆ ತಾವೇ ಕೇಳಿದರವರು." ಆಹಾರದ ಬೆಳೆಯನ್ನು ಹೆಚ್ಚಿಸುವದಕ್ಕೆ—ಕೃತಕ ಗೊಬ್ಬರದ ಸಹಾಯದಿಂದಲ್ಲ, ನಿಜವಾದ ವೈಜ್ಞಾನಿಕ ಆರೈಕೆಯಿಂದ ಮಣ್ಣನ್ನು ಹುಲುಸಗೊಳಿಸುವ ಮತು ಪ್ರಾಣಿಜನ್ಯ' ಗೊಬ್ಬರದ ವಿವೇಕಪೂರ್ಣ ಉಪಯೋಗದ ಮೂಲಕ—ಅವರು ಪ್ರಯತ್ನಿಸಿದ್ದಾರೆಯೇ? ನೌಖಾಲಿಯಲ್ಲಿ ಜನರು ಅತ್ಯಂತ ವಿನಾಶಕಾರಿಯಾಗಿ ಮುಖ್ಯ ಜಲಮಾರ್ಗದಲ್ಲೆಲ್ಲ ಬೆಳೆದು ನೀರನ್ನು ತಡೆದುಬಿಡುವ ಹಾವಸೆಯಂಥ ವಸ್ತುವನ್ನೂ ಒಳ್ಳೆ ಜಾಣತನದಿಂದ ಉಪಯೋಗಿಸುವದನ್ನು ನಾನು ಕಂಡಿದ್ದೇನೆ. ಸ್ವಾರ್ಥದ ಬದಲು ದೇಶಹಿತಕ್ಕಾಗಿ ಬಾಳತೊಡಗಿದಾಗ ಇದನ್ನವರು ಸಾಧಿಸಬಲ್ಲರು.

ಆತ್ಮಪರೀಕ್ಷಣ ಮಾಡಿಕೊಳ್ಳಿರೆಂದು ಅವರು ಜನರಿಗೆ ಉಪದೇಶಿಸಿದರು. ಕಾಂಗ್ರೆಸ್ಸನ್ನಾಗಲಿ ಲೀಗನ್ನಾಗಲಿ ತಂತಮ್ಮ ಬುದ್ಧಿಶಕ್ತಿ, ಆತ್ಮಸಾಕ್ಷಿಗನುಸಾರವಾಗಿ ಹೊಗಳುವ ತೆಗಳುವ ಅಧಿಕಾರ ಅವರಿಗೆ ಖಂಡಿತವಾಗಿಯೂ ಇದೆ. ಅದು ಜನತೆಯ ಹಕ್ಕು. ಇಂದು ಮೊದಲ್ಗೊಂಡು ಜನರು ಪಂಚಾಯತ ರಾಜ್ಯದ ಕಡೆ ಮನಸ್ಸು ಕೊಡಬೇಕು.

"ಪಂಡಿತ ಜವಾಹರಲಾಲರನ್ನು ಹಿಂದುಸ್ತಾನದ ಅನಭಿಷಿಕ್ತ ಚಕ್ರವರ್ತಿಯೆಂದು ನಾನು ಕರೆದದ್ದುಂಟು! ಆದರೆ ನಿಜವಾಗಿ ಆಳುವವರು ಹಿಂದುಸ್ತಾನದ ಶ್ರಮಜೀವಿಕೋಟಿಗಳು."

ಇಂಗ್ಲೀಷರಿಂದ ಅಧಿಕಾರವನ್ನು ವಹಿಸಿಕೊಳ್ಳುವ ಈ ಸಮಯದಲ್ಲಿ ಜವಾಹರಲಾಲರನ್ನು ಕಿತ್ತುವದು ಸಾಧ್ಯವಿಲ್ಲ- ಹ್ಯಾರೋ ವಿದ್ಯಾಲಯದ ಕೇಂಬ್ರಿಜ ಪದವೀಧರರಾದ, ಬ್ಯಾರಿಸ್ಟರರಾದ ಅವರು ಇಂಗ್ಲೀಷರೊಡನೆ ಸಂಧಾನ ನಡೆಸುವ ಕೆಲಸಕ್ಕೆ ಬೇಕೇ ಬೇಕು. ಆದರೆ ಹಿಂದುಸ್ತಾನ ಪ್ರಜಾರಾಜ್ಯದ ಮೊದಲನೆಯ ಅಧ್ಯಕ್ಷನನ್ನು ನಾವು ಆರಿಸಬೇಕಾದ ಸಂಧಿ ಬೇಗನೆ ಬರಲಿದೆ. ದಿವಂಗತ ಚಕ್ರಯ್ಯನವರು ಬದುಕಿದ್ದರೆ ಈ ಸ್ಥಾನಕ್ಕೆ ನಾನು ಆನಂದದಿಂದ ಅವರನ್ನು ಸೂಚಿಸುತಿದ್ದೆ. ನಿರ್ಭಯ ಹೃದಯದ, ಲಂಚವಂಚನೆಗೆ ಸೋಲದ, ಸ್ಫಟಿಕ ಶುಭ್ರವೃತ್ತಿಯ ಮಹತಾರ ಸ್ತ್ರೀಯೊಬ್ಬಳು ನಮ್ಮ ಪ್ರಥಮ ಅಧ್ಯಕ್ಷಳಾಗಬಹುದೆಂಬ ಕಲ್ಪನೆ ನನಗೆ ಸಂತೋಷಕರವಾದುದು. ಈ ಕನಸು ಬರಡುಕನಸಲ್ಲ. ಹಳ್ಳಿಗ ಅಧ್ಯಕ್ಷಬೇಕೆಂದು ನಾನು ಮನಸುಮಾಡಿದರೆ ದಂಥ ಹರಿಜನ ಹುಡುಗಿಯರಿದ್ದೇ ಇದ್ದಾರೆ. ದಿವಂಗತ ಮೌಲಾನಾ ಮುಹಮದಾಲಿಯವರ ಮಗಳಾದ ಪುಟ್ಟ ಗುಲನಾರಳನ್ನು ನಾನು ನನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಿದ್ದಿಲ್ಲವೆ? ಆ ಹುಚ್ಚು ಹುಡುಗಿ, ಅಲಿ ಬಂಧುಗಳು ಸೆರೆಮನೆಯಲ್ಲಿದ್ದಾಗ, ಒಂದಾನೊಂದು ಕಾಲದಲ್ಲಿ ಫಕೀರನಾಗಿದ್ದ ಪ್ರಥಮ ಸತ್ಯಾಗ್ರಹಿಯೆಂದು ನನಗೆ ಪರಿಚಿತನಾದ ಶ್ವೈಬ ಕುರೇಶಿಯಾ ಎಂಬು ಮದವೆಯಾಗಿಬಿಟ್ಟಳು ಹುಚ್ಚು ಗುಲನಾರಳೆಂದು ಚಂದದ ಮಕ್ಕಳ ಹೆಮ್ಮೆಯ ತಾಯಿಯಾಗಿದ್ದಾಳೆ ಆದರೆ ನನ್ನ ಉತ್ತರಾಧಿಕಾರಿಯಾಗಿರುವ ಹಕ್ಕಿಗೆ ಪಾತ್ರ ಅವಳು ಎರವಾದಳು. ನಮ್ಮ ಭಾವೀ ಅಧ್ಯಕ್ಷರಿಗೆ ಇಂಗ್ಲೀಷ ಭಾಷೆ ಬರಬೇಕಾಗಿಲ್ಲ. ಅವಶ್ಯಕ ವಿದೇಶಿ ಭಾಷೆಗಳನ್ನು ಬಲ್ಲ ಸ್ವೈಜ ರಾಜಕಾರಣಪ ಕಲೆಯುಸರಿತ ದೇಶಪ್ರೇಮಿ ಸಲಹೆಗಾರರನ್ನು ನೇಮಿಸಿ ಕೊಂಡರೆ ಸಾಕು. ಇಂಥ ಕನಸುಗಳು ನನಸುಗಳಾಗಬೇಕಾದರೆ ನಾವು ಪೈಶಾಚಿಕ ಭ್ರಾತೃಹತ್ಯಾಬುದ್ಧಿಯನ್ನು ಬಿಟ್ಟುಕೊಟ್ಟು ನಮ್ಮ ಹಳ್ಳಿಗಳತ್ತ ಗಮನಿಸಬೇಕು.

ಆ ಮೇಲೆ ಗಾಂಧೀಜಿ ಕಳ್ಳಪೇಟೆಯತ್ತ ಹೊರಳಿದರು. ಕಳ್ಳಪೇಟೆಯಲ್ಲಿ ತೊಡಗಿರುವ ವ್ಯಾಪಾರಿಗಳು ಎಲ್ಲೋ ಕೆಲವರಿರುಬಹುದಾದರೂ ನಿಜವಾದ ಕಳ್ಳಪೇಟೆ ಸರಕಾರಿ ಕಚೇರಿಗಳಲ್ಲಿರುವ ಲಂಚಗುಳಿತನದಲ್ಲಿಯೇ ಇದೆಯೆಂದು ಯಾರೋ ಒಬ್ಬ ವರ್ತಕ ಅವರಿಗೆ ಹೇಳಿದನಂತೆ. ಸರಕಾರವೇ ಒಂದು ವ್ಯಾಪಾರಿ ಸಂಸ್ಥೆಯೆಂದರು ಗಾಂಧೀಜಿ. ಅದರೂ ಸರಕಾರಿ ನೌಕರರ ಕೈ ಇದರಲ್ಲಿದೆಯೆಂದು ಕೇಳಿ ತಮಗೆ ಬಹಳ ವ್ಯಸನವಾಗಿದೆ. ಅವರು ಯುರೋಪಿಯನ್ನರಿರಲಿ, ಹಿಂದೀಯರಿರಲಿ, ಹಿಂದುಗಳೋ ಮುಸಲ್ಮಾನರೋ ಇರಲಿ; ಪರಿಣಾಮ ಒಂದೆ. ಸರಕಾರಿ ನೌಕರರೂ ಜನರೂ ಲಂಚವಂಚನೆಗಳಿಗೆ ಉತ್ತೇಜನ ಕೊಟ್ಟರೆ ದೇಶದ ಭಾಗ್ಯಕ್ಕೆ ಅರದಾಳವೇ ಸರಿ. ರಾಜಾಜಿಯಾಗಲಿ ರಾಜೇಂದ್ರ ಬಾಬುಗಳಾಗಲಿ ಇತರರ ಪ್ರಾಮಾಣಿಕ ಸಹಾಯ ದೊರಕದಿದ್ದರೆ ಏನು ಮಾಡಬಲ್ಲರು? ಜನರಿಂದ ಆರಿಸಿ ಬಂದ ಪ್ರತಿನಿಧಿಯಾವದನಾರೂ ಖಡ್ಗಬಲದಿಂದ ಆಳಲಾರನು. ಪ್ರಜಾತಂತ್ರ ರಾಜ್ಯದಲ್ಲಿ ಅದು ಸಾಧ್ಯವಿಲ್ಲ. ಆದುದರಿಂದ ಸರಕಾರಿ ನೌಕರರು, ಅವರು ಬ್ರಿಟಿಶರಿರಲಿ ಹಿಂದೀಯರಿರಲಿ, ಹಿಂದುಸ್ತಾನದ ಉಂಡ ಉಪ್ಪಿಗೆರಡು ಬಗೆಯದೆ ವಂಚನೆ ಅಪ್ರಾಮಾಣಿಕತೆಗಳಿದ್ದಲ್ಲೆಲ್ಲ ಅವನ್ನು ತಿರಸ್ಕರಿಸಬೇಕೆಂದು ಗಾಂಧೀಜಿ ಕಳಕಳಿಯಿಂದ ಕೇಳಿಕೊಂಡರು. ಸಾರ್ವಜನಿಕರಾದರೂ ಸ್ವಾತಂತ್ರ್ಯದಿಂದ ತಮ್ಮ ಮೇಲೆ ಬಿದ್ದ ದೊಡ್ಡ ಹೊಣೆಗಾರಿಕೆಯನ್ನು ಮನಗಂಡು ಸತ್ಯ ಅಹಿಂಸೆಗಳ ಕೈಬಿಡದೆ ಪೂರ್ಣ ಕರ್ತವ್ಯಪರಾಯಣರಾಗಬೇಕು. ಅದರಿಂದ ನಮ್ಮ ಸ್ವಂತ ಪ್ರತಿಷ್ಠೆ ಬೆಳೆದೀತು, ಮಾತ್ರವಲ್ಲ, ಹಿಂದುಸ್ತಾನದಿಂದ ಬ್ರಿಟಿಶರು ಹೊರಟು ಹೋಗುವಾಗ ಇಲ್ಲಿ ಸುವ್ಯವಸ್ಥಿತ ಆಡಳಿತ ಸಾಗುತ್ತಲೆ ಇರುವಂತಾಗುವದು. ಬ್ರಿಟಿಶರು ತಮ್ಮ ಕೃತಿಯಿಂದಲೇ ವಿಶ್ವಾಸಘಾತ ಮಾಡಿದ ಹೊರತು ಅವರು ಅಪ್ರಾಮಾಣಿಕರೆಂದು ನಾವು ಬಗೆಯಬಾರದೆಂದು ಗಾಂಧೀಜಿ ಹೇಳಿದರು. "ವಾಯಿಸರಾಯರು ಪ್ರಾಮಾಣಿಕರೆಂದು ಸ್ವತಃ ನನಗೆ ನಂಬಿಕೆಯುಂಟು. ಆದರೆ ನಾವು ಸ್ವತಃ ಪೂರ್ಣ ಪ್ರಾಮಾಣಿಕರಾಗಿದ್ದರೇನೇ ನಮ್ಮ ರಾಜ್ಯನೌಕೆಯನ್ನು ಸುರಕ್ಷಿತವಾಗಿ ರೇವಿಗೆ ಮುಟ್ಟಿಸಬಲ್ಲೆವು."

ಮನಸಿಲ್ಲದ ಪಾಲುಗಾರಿಕೆ ಬೇಡ

೩ನೇ ತಾರೀಖು ಸಂಜೆ ವಾಯಿಸರಾಯರಾದಿಯಾಗಿ ಪಂ. ಜವಾಹರಲಾಲ ನೆಹರೂ, ಕಾಯದೆ ಆಝಮ ಜಿನ್ನಾ ಮತ್ತು ಸರದಾರ ಬಲದೇವ ಸಿಂಗರು ಆಕಾಶವಾಣಿಯಲ್ಲಿ ಜನರನ್ನುದ್ದೇಶಿಸಿ ಮಾತಾಡಿದರು. ಚಕ್ರವರ್ತಿ ಸರಕಾರದ ಹೇಳಿಕೆಗೆ ದೊರೆತ ಪ್ರತಿಕ್ರಿಯೆ ಅನುಕೂಲ ಪ್ರತಿಕೂಲ ಮಿಶ್ರಿತವಾಗಿತ್ತು. ಹಿಂದುಗಳಲ್ಲಿ ಅಧಿಕಾಂಶರು ವಿಷಣ್ಣರಾಗಿದ್ದರು, ಪಂಡಿತಜಿಯವರ ಆಕಾಶವಾಣಿ ಅತ್ಯಂತ ವಿಷಾದಪೂರ್ಣವಾಗಿತ್ತು. ಹಿಂದುಸ್ತಾನವನ್ನು ತುಂಡರಿಸುವದು ಎಲ್ಲರಿಗೂ ಅಪ್ರಿಯವಾದುದು. ಆದರೆ ಹಿಂದುಸ್ತಾನವನ್ನು ನಿರಂತರವಾಗಿ ರಕ್ತಿಸುರಿಸಗೊಡುವದು ಯೋಗ್ಯವಲ್ಲ. ಇಂಥ ಪ್ರಸಂಗದಲ್ಲಿ ಶಸ್ತ್ರಕ್ರಿಯೆ ಮೇಲು. ಮೂರು ಲಾರಿ ತುಂಬ ಮುಸ್ಲಿಮರು ಕಾಯದೆ—ಆಝಮ ಜಿನ್ನಾರ ಮನೆಗೆ ಹೋಗಿ "ಪಾಕಿಸ್ತಾನ ಜಿಂದಾಬಾದ" ಎಂದು ಜಯಘೋಷ ಮಾಡಿದರಂತೆ. ಆದರೂ ಅನೇಕ ಮುಸ್ಲಿಮರು ಗಾಂಧೀಜಿಯ ಬಳಿಗೆ ಬಂದು ನಡೆದುದಕ್ಕೆ ದುಃಖವನ್ನು ವ್ಯಕ್ತಗೊಳಿಸಿದರು. ಪಂಜಾಬದಲ್ಲಿಯೂ ಬಂಗಾಲದಲ್ಲಿಯೂ ಅನೇಕಾನೇಕ ಮುಸ್ಲಿಮರು ಅಸಂತುಷ್ಟರಾಗಿದ್ದಾರೆಂದು ಸುದ್ದಿಯಿದೆ. ಚಕ್ರವರ್ತಿ ಸರಕಾರದ ಹೇಳಿಕೆಯಲ್ಲಿ ಅಡಕವಾದ ಯೋಜನೆಯ ಮೇಲೆ ಮಾತಾಡುತ್ತ ಗಾಂಧೀಜಿ ಹೇಳಿದ್ದು, "ಬಲವಂತಕ್ಕೆ ಒಂದಂಗುಲವಾದರೂ ಹಿಂದೆ ಸರಿಯುವದು ಸರ್ವಥಾ ಅಯೋಗ್ಯವೆಂದು" ನಾನು ನಿಮಗೆ ಪದೇ ಪದೇ ಹೇಳಿದ್ದೇನೆ. ಕಾಂಗ್ರೆಸ ಕಾರ್ಯ ಸಮಿತಿಯವರು ತಾವು ಆಯುಧ ಬಲಕ್ಕೆ ಬಗ್ಗದೆ ಪರಿಸ್ಥಿತಿಯ ಒತ್ತಾಯಕ್ಕೆ ತಲೆವಾಗುವೆವೆಂದು ಹೇಳುತ್ತಾರೆ. ಕಾಂಗ್ರೆಸ್ಸಿಗರಲ್ಲಿ ಬಹುಸಂಖ್ಯಾಕರು ಒಲ್ಲದ ಪಾಲುಗಾರರು ತಮಗೆ ಬೇಡವೆನ್ನುತ್ತಾರೆ. ತಮ್ಮ ಸಾಧನ ಅಹಿಂಸೆ, ಆದುದರಿಂದ ಬಲವಂತ ಸಲ್ಲದೆಂದು ಅವರ ಹೇಳಿಕೆ. ಅದುಕಾರಣ, ಹಿಂದು ಮುಂದನ್ನೆಲ್ಲ ವಿಚಾರಿಸಿದ ನಂತರ, ಘಟನಾ ಸಮಿತಿಯನ್ನು ಬಹಿಷ್ಕರಿಸಿದ ಪ್ರದೇಶಗಳಿಗೆ ಭಾರೀ ಒಕ್ಕೂಟದಿಂದ ಸಿಡಿದು ಹೋಗಲು ತಾವು ಮನಸಿಲ್ಲದಿದ್ದರೂ ಒಪ್ಪಿಗೆ ಕೊಟ್ಟಿದ್ದಾಗಿದೆ. ನನ್ನ ಅಭಿಪ್ರಾಯದಲ್ಲಿ ಮುಸ್ಲಿಂಲೀಗಿನ ಧೋರಣೆ ತಪ್ಪು. ಅದಕಾಗಿ ವ್ಯಸನಪಡುತ್ತೇನೆ. ಹಿಂದೂ ವರ್ಚಸ್ಸಿನ ಭಯ ತಮಗುಂಟಾಗಿದೆಯೆಂದೂ ಅದರಿಂದ ತಮ್ಮ ಮಾತೃಭೂಮಿಯಲ್ಲಿ ತಾವೇ ಆಳುವೆವೆಂದೂ ಅವರ ಹೇಳಿಕೆ. ಆದರೆ ತಮ್ಮ ಮಾತೃಭೂಮಿಯೆಂದು ಅವರನ್ನುವದೇ ತಪ್ಪು. ನಿಜವಾಗಿ ಹಿಂದುಸ್ತಾನದಲ್ಲಿ ಹುಟ್ಟಿ ಬೆಳೆದವರಿಗೆಲ್ಲ ಹಿಂದುಸ್ತಾನ ಮಾತೃಭೂಮಿ. ಮುಸ್ಲಿಮ ಮಾತೃಭೂಮಿ ಉಳಿದದ್ದರ ಪರಲು ಹರಿದು ಬಾಳುವದೆ? ಪಂಜಾಬ ಭೂಮಿ ಅಲ್ಲಿನ ಹಿಂದೂ, ಸೀಖ, ಕ್ರಿಶ್ಚನ್, ಪಾರ್ಸಿ, ಯಹೂದ್ಯರೆಲ್ಲರಿಗೂ ತಾಯ್ನಾಡಲ್ಲವೆ?"

ನಡೆದುದಕ್ಕೆ ವಾಯಿಸರಾಯರನ್ನು ದೂರುವದು ಸರಿಯಲ್ಲವೆಂದರು ಗಾಂಧೀಜಿ. ಅದು ಕಾಂಗ್ರೆಸ್ಸಿನ ಮತ್ತು ಲೀಗಿನ ಕೃತಿ. ತಮಗೆ ಹಿಂದುಸ್ತಾನ ಅಖಂಡವಾಗಿರಬೇಕೆನಿಸುತ್ತದೆಂದು ವಾಯಿಸರಾಯರು ಬಹಿರಂಗವಾಗಿ ಸಾರಿದ್ದಾರೆ. ಆದರೆ ಎಷ್ಟೇ ಹಿರಿಮನಸಿನಿಂದಾಗಲಿ ಕಾಂಗ್ರೆಸ್ಸು ಲೀಗಿನ ವಾದವನ್ನು ಅಂಗೀಕರಿಸಿದ ಮೇಲೆ ಅವರಿಗೆ ಬೇರೆ ಹಾದಿ ಉಳಿಯಲಿಲ್ಲ.

"ನನ್ನನ್ನು ಕಾಣಬಂದ ಧೀರ ಸೀಖರ ಮಾತು. ಒಬ್ಬ ಸೀಖನು ಒಂದೂಕಾಲು ಲಕ್ಷ ಜನರಿಗೆ ಸಮ ಎಂಬದಕ್ಕೆ ನಾನು ಹಚ್ಚಿದ ಅರ್ಥವನ್ನು ಅವರಿಗೆ ವಿವರಿಸಿದೆ. ಒಂದೂಕಾಲು ಲಕ್ಷ ಜನರು ಎದುರಿಸಿದರೂ [ಅವರನ್ನೆದುರಿಸಿ ಸ್ಥಿರವಾಗಿ ನಿಲ್ಲಬಲ್ಲ ಧೀರತನ ಏಕಾಕಿ ಸೀಖನಿಗಿದೆಯೆಂದು ಅವರ ಅರ್ಥ. ಇಂಥ ಶೌರ್ಯ ಶ್ರೇಷ್ಠತಮವೂ ಶುದ್ಧತಮವೂ ಅದರೆ ಮಾತ್ರ ಇರಬಲ್ಲದು. ಅಹಿಂಸೆಯಿಂದೊಗೆದ ಆ ಶೌರ್ಯ ಶ್ರದ್ಧೆಗಳಿದ್ದರೆ ಸೀಖರು ಖಾಲಸಾ ಎಂಬ ಹೆಮ್ಮೆಯ ಹೆಸರಿಗೆ ತಕ್ಕವರಾಗುವರು. ಗ್ರಂಥ ಸಾಹೇಬದಿಂದಲೂ ಖಾಲಸಾ ಇತಿಹಾಸದಿಂದಲೂ ನಾನು ಕಲಿತ ಪಾಠ ಇದು."

ಮೇ ೧೬ರ ಹೇಳಿಕೆಯನ್ನೊಪ್ಪಿ ನಡೆಯುವಂತೆ ಜನರ ಮನವೊಲಿಸಲು ತಾವು ಶಕ್ತಿ ಮೀರಿ ಹೆಣಗಿದರೂ ಫಲಿಸಲಿಲ್ಲವೆಂದು ಗಾಂಧೀಜಿ ಮುಂದೆ ಸಾಗಿದರು. "ಆದರೆ ಒಪ್ಪಿಕೊಂಡಾದ ವಿಧ್ಯಮಾನದಲ್ಲಿ ನಮ್ಮ ನಿಮ್ಮ ಕರ್ತವ್ಯವೇನು?" ಅವರು ಕೇಳಿದರು. "ಯಾರ ಮೇಲೆ ಒತ್ತಾಯದಿಂದ ಏನನ್ನೂ ಹೇರಿಲ್ಲವೆಂದು ಪಂಡಿತಜಿಯವರೂ ವಾಯಿಸರಾಯರೂ ಹೇಳಿದ್ದಾರೆ. ಚಕ್ರವರ್ತಿ ಸರಕಾರದ ಹೇಳಿಕೆಯಲ್ಲಿ ಅಡಕವಾದುದು ಸ್ವಯಂಪ್ರೇರಿತವಾದ ಒಡಂಬಡಿಕೆಯಾದುದರಿಂದ ಅದರಲ್ಲಿ ಪ್ರಸಕ್ತವಾದ ಪಕ್ಷಗಳು ಪರಸ್ಪರ ಒಪ್ಪಿಗೆಯಿಂದ ಬೇಕಾದಾಗ ಅದನ್ನು ಬದಲಿಸಬಲ್ಲವು. ಮುಸ್ಲಿಂಲೀಗಿನ ಅಭೀಷ್ಟ ಸಿದ್ಧಿಯಾಗಿರುವದರಿಂದ ಇನ್ನು ಪಕ್ಷಗಳ ನಡುವೆ ಮಧ್ಯಸ್ಥಿಕೆ ನಡೆಸುವ ಶ್ರಮದಿಂದ ವಾಯಿಸರಾಯರನ್ನು ಮುಕ್ತಗೊಳಿಸಬೇಕೆಂದು ಲೀಗಿನವರಲ್ಲಿ ನನ್ನ ವಿನಂತಿ. ಉಭಯ ಪಕ್ಷಗಳಲ್ಲಿ ಇದು ಕೊನೆಯ ಒಡಂಬಡಿಕೆಯಾಗಲೆಂದು ಹಾರೈಸುತ್ತೇನೆ. ಆದುದರಿಂದ ಎಲ್ಲ ಹಿಂಸೆಯೂ ನಿಲ್ಲಬೇಕು. ಕಾಯದೆ-ಆಝಮ ಜಿನ್ನಾಸಾಹೇಬರು ಮುಂದಿನ ಕ್ರಮಗಳನ್ನು ನಿರ್ಧರಿಸುವ ಬಗ್ಗೆ ಕಾಂಗ್ರೆಸ್ ಮುಂದಾಳುಗಳನ್ನು ಆಮಂತ್ರಿಸಬೇಕು. ಹೀಗೆ, ಉದಾಹರಣೆಗಾಗಿ, ವಿಭಕ್ತ ಬಂಗಾಲ ಪಂಜಾಬಗಳ ಗಡಿಗಳನ್ನು ಪರಸ್ಪರ ಒಪ್ಪಿಗೆಯಿಂದ ನಿರ್ಧರಿಸಲು ಯಾವ ಅತಂಕವೂ ಇಲ್ಲ."

ತಾವು ಉಪವಾಸ ಮಾಡಬಹುದೆ?

ದೇಶದ ವಿಭಜನೆಯ ವಿರುದ್ಧ ಭಾವನೆ ಬಹಳ ತೀಕ್ಷ್ಣವಾದರೆ ಆ ದುರಭಿಸಂಧಿಯಿಂದ ತಪ್ಪಿಸಿಕೊಳ್ಳಬಹುದೆಂಬ ಆಸೆ ಗಾಂಧೀಜಿಯವರ ಭಾಷಣಗಳಿಂದ ಪುನಃ ಚಿಗುರಿತ್ತು. ಹಿಂದುಸ್ತಾನದ ವಿಭಜನೆಗೆ ಕಾಂಗ್ರೆಸ್ ಕಾರ್ಯಸಮಿತಿ ಒಪ್ಪಿದ್ದರಿಂದ ನೀವು ಆಮರಣ ಉಪವಾಸವನ್ನು ಕೈಕೊಳ್ಳುವಿರೇನೆಂದು ಕೆಲವರು ಗಾಂಧೀಜಿಯನ್ನು ಕೇಳಿದರು. "ಪಾಕಿಸ್ತಾನವೆಂಬುದೊಂದು ಪಾಪ, ಅದರಲ್ಲಿ ನಾನೆಂದೂ ಭಾಗವಹಿಸಲಾರೆನೆಂದು ನೀವು ಹಿಂದೊಮ್ಮೆ ಹೇಳಿರಲಿಲ್ಲವೆ?" ಇದಕ್ಕೆ ಉತ್ತರಕೊಡುತ್ತ ಗಾಂಧೀಜಿಯವರೊಬ್ಬರ ಇಚ್ಛೆಯಂತೆ ತಾವು ಉಪವಾಸವನ್ನು ಕೈಕೊಳ್ಳಲಾರೆನೆಂದರು. ಇಂಥ ಉಪವಾಸಗಳನ್ನು ಕೈಕೊಳ್ಳುವದು ಹುಡುಗಾಟಿಕೆಯಲ್ಲ. ಅವು ಸರ್ವಥಾ ಅನಿಷ್ಟವಾಗಿಯೂ ಇರಬಹುದು. ಅವುಗಳನ್ನು ಸಿಟ್ಟಿನ ಭರದಲ್ಲಿಯೂ ಕೈಕೊಳ್ಳುವಂತಿಲ್ಲ. ಸಿಟ್ಟಿಗೂ ಹುಚ್ಚಿಗೂ ಬಹಳ ಅಂತರವಿಲ್ಲ. ಆದುದರಿಂದ ಉಪವಾಸವನ್ನು ಕೈಕೊಳ್ಳುವ ಮೊದಲು ಸ್ತಬ್ಧವಾದ ತಮ್ಮ ಅಂತರಂಗದಿಂದ ಪಾಪ ಹೊರಡಬೇಕೆಂದಿರುವರು, ತಾವು ದೇಶದ ಸೇವಕರು ಅಂತೆಯೆ ಕಾಂಗ್ರೆಸ್ಸಿನ ಸೇವಕರು ಕೂಡ. ಕಾಂಗ್ರೆಸ್ಸು ತಮ್ಮ ಮತದಲ್ಲಿ ಸಹಮತವಾಗದಾಕ್ಷಣ ತಾವು ಉಪವಾಸ ಮಾಡಬೇಕೆ? ತಾವು ಸ್ವೈರತೆ ತೋರಿಸಬೇಕಾಗಿದೆ. ಸಹನೆಗೆಡಲು ಬೇಕಾದೇಕಾದಷ್ಟು ಅವಕಾಶಗಳಿರುತ್ತವೆ. ಕಾಂಗ್ರೆಸ್ಸು ಔದ್ಯೋಗಿಕ ಯೋಜನೆಗಳ ಬೆನ್ನು ಹತ್ತಿದಂತೆ ಕಾಣುತ್ತದೆ; ಅದರಲ್ಲಿ ದೇಶದ ದರಿದ್ರಕೋಟಿಯ ನಿಸ್ತಾರ ಮಾರ್ಗ ತಮಗೇನೂ ಕಾಣುವದಿಲ್ಲ. ಗಿರಣಿ ಬಟ್ಟೆಯಲ್ಲಿ ತಮಗೆ ವಿಶ್ವಾಸವಿಲ್ಲದಂತೆ ಗಿರಣಿ ನಾಗರಿಕತೆಯಲ್ಲಿಯೂ ವಿಶ್ವಾಸವಿಲ್ಲ. ದೇಶದ ನಿಜವಾದ ಸ್ವಾತಂತ್ರ್ಯಕ್ಕೆ ಜಿಗಬಹುದಾದ ಗಂಡಾಂತರವನ್ನು ತಡೆಯಲು ಸೈನ್ಯ ಬೇಕೆಂದೂ ತಾವು ನಂಬುವದಿಲ್ಲ. ಸ್ವೈರತೆಗೆಟ್ಟು ಉಪವಾಸವನ್ನು ತಾವು ಕೈಕೊಳ್ಳುವದಾದರೆ ಮೇಲೆ ಹೇಳಿದ ಮತ್ತು ಇತರ ಲಕ್ಷಣಗಳಲ್ಲಿ ಆಮರಣ ಉಪವಾಸಕ್ಕೆ ಕೂಡ ಸಾಕಷ್ಟು ಕಾರಣಗಳು ತಮಗೆ ಸಿಗಬಲ್ಲವು. ಸುತ್ತಲೂ ದಾವಾನಲ ದಳ್ಳುರಿಯುತಿರುವಾಗ ತಾವು ಅದರ ನಡುವೆ ಸ್ಥಿರವಾಗಿದ್ದು ಸತ್ಯದ ಅಂತಿಮ ವಿಜಯದಲ್ಲಿ ಶ್ರದ್ಧೆಯನ್ನು ಕಾಯ್ದುಕೊಳ್ಳಬೇಕೆಂದು ತಮಗನಿಸುತ್ತದೆ. ಕಾಯದೆ ಆಝಂ ಜಿನ್ನಾರೊಡನೆ ತಾವು ಅಂತಿತವಿಕ್ಕಿದ ಆ ಸಂದೇಶದ ಪ್ರಸ್ತಾವವನ್ನೂ ಗಾಂಧೀಜಿ ಎತ್ತಿದರು. ಅದಕ್ಕೆ ನಿಜವಾಗಿ ಕೇಳಿದರೆ ವಾಯಿಸರಾಯರೂ ಒಂದು ಪಕ್ಷವಾಗಿದ್ದಾರೆ. ತಾವೇನಾದರೂ ಕ್ರಮಕೆಗೆದುಕೊಳ್ಳಬೇಕಾದರೆ ಆ ಉಳಿದಿಬ್ಬರು ಏನು ಮಾಡುತಿದ್ದಾರೆಂದು ನೋಡಿಕೊಳ್ಳುವದು ತನ್ನ ಕರ್ತವ್ಯವೆಂದು ಅವರು ಹೇಳಿದರು. ಸಂತ್ರಸ್ತಭಾಗಗಳಲ್ಲಿ ಅವರಿಬ್ಬರೊಂದಿಗೆ ಸಂಚರಿಸಲು ತಾವು ಸಂತೋಷದಿಂದ ಒಪ್ಪುತ್ತೇನೆ. "ಗುರುಗಾಂವ ಸುಡುತಿದ್ದಾಗ ಅವರೇನು ಮಾಡುತಿದ್ದರೆಂದು ನೀವು ಕೇಳಬಹುದು" ಎಂದು ಗಾಂಧೀಜಿ ನುಡಿದರು. "ಆದರೆ ನೀವೂ ಧಿಕ್ಕಾರ ಪೂರ್ವಕ ಬರೆದ ಪತ್ರಗಳ ಲೇಖಕರೂ ಕಾಂಗ್ರೆಸ್ಸನ್ನೂ ಲೀಗನ್ನೂ ನನ್ನನ್ನೂ ಕೇಳಿಕೊಳ್ಳಬೇಕು ಮತ್ತು ಸತತವಾಗಿಯೇ ಅಗಲೊಲ್ಲದೇಕೆ ಆಗುತಿರುವ ಘಟನೆಗಳನ್ನು ನಿರೀಕ್ಷಿಸಬೇಕು. ನಾವು ನಿಮ್ಮ ಕೈಬಿಡಲಿಕ್ಕಿಲ್ಲವೆಂದು ನಂಬಿದ್ದೇನೆ. ಸರಕಾರ ನಿಮಗೆ ಸೇರಿದ್ದು ನಾನು ನಿಮಗೇ ಸೇರಿದವನು. ನಮ್ಮನ್ನು ಪರೀಕ್ಷಿಸಿ ತೀರ್ಮಾನಿಸಲು ಬೇಕಾದಷ್ಟು ಸಮಯವುಂಟು. ನಮ್ಮಲ್ಲಿ ಯಾರಾದರೂ ತೇರ್ಗಡೆಯಾಗದವರಿದ್ದರೆ ಅವರನ್ನು ದೂರ ಮಾಡಲು ಅಡ್ಡಿಯಿಲ್ಲ."

ಕೊನೆಗೊಮ್ಮೆ ಮುಸ್ಲಿಮರ ಪೀಡೆ ತಪ್ಪಿತು. ಇನ್ನು ದೇಶವನ್ನು ಒಣ ತಂಟೆಯಿಲ್ಲದೆ ನಮಗೆ ಸರಿದೋರಿದಂತೆ ರೂಪುಗೊಳಿಸಲು ಅತಂಕವಿಲ್ಲ, ಎಂದು ಸಮಾಧಾನದ ನಿಟ್ಟುಸಿರು ಬಿಟ್ಟ ಅಸಂಖ್ಯ ಹಿಂದುಗಳಿದ್ದಾರೆ. ಆದರೆ ವಿಭಜನೆಯಿಂದ ಸಮಸ್ಯೆ ಬಗೆ ಹರಿಯುವದಿಲ್ಲವೆಂದು ನಿಚ್ಚಳವಾಗಿ ಕಾಣುವವರೂ ಇಲ್ಲದಿಲ್ಲ. ಇನ್ನೂ ಹೆಚ್ಚು ಕಡಿಮೆ ನಾಲ್ಕು ಕೋಟಿ ಮುಸ್ಲಿಮರು ಹಿಂದೀ ಒಕ್ಕೂಟದಲ್ಲುಳಿಯುವರು. ಮತ್ತು ಸುಮಾರು ಎರಡು ಕೋಟಿ ಹಿಂದುಗಳು ಪಾಕಿಸ್ತಾನಪ್ರಾಂತದಲ್ಲಿರುವರು. ಅವರು ಕಾಂಗ್ರೆಸ್ಸಿನ ನಿರ್ಣಯದಿಂದ ಸಿಟ್ಟಾಗಿ ಕಾಂಗ್ರೆಸ್ಸನ್ನೂ ಗಾಂಧೀಜಿಯನ್ನೂ ದೂರುತ್ತಾರೆ. ಒಬ್ಬಾಕೆಯೊಬ್ಬ ಭಗಿನಿ ಅವರಿಗೆ ಕಾಗದ ಬರೆದು ನೀವಿನ್ನು ಅಡವಿ ಸೇರುವದೊಳಿತೆಂದು ಸೂಚಿಸಿದ್ದಾಳೆ. ಜಿನ್ನಾ ಸಾಹೇಬರನ್ನು ಲಾಲಿಸಿ ಅವರ ತಲೆ ತಿರುಗಿಸಿದವರು ಗಾಂಧೀಜಿಯೆ ಎಂದವಳ ಮತ. ಆದುದರಿಂದ ದೇಶಕ್ಕೆ ಬಂದ ಸಂಕಟಕ್ಕೆ ಅವರೇ ಹೊಣೆಯಂತೆ. ಅವಳನ್ನುವದೆಲ್ಲ ಕೇವಲ ತಪ್ಪೆಂದು ಗಾಂಧೀಜಿ ಉತ್ತರ ಕೊಟ್ಟರು. ಪ್ರೇಮ ಅಥವಾ ಅಹಿಂಸೆಯೆಂಬುದು ಜಗತ್ತಿನಲ್ಲೆಲ್ಲ ಅತಿ ಪ್ರಬಲವಾದ ಆಯಸ್ಕಾಂತ. ಅದು ಎಂದೂ ಯಾರಿಗೂ ಏನೂ ಹಾನಿಮಾಡಲಾರದು.

ಬ್ರಿಟಿಶರ ಪ್ರಾಮಾಣಿಕತೆ

ವಾಯಿಸರಾಯ ಭವನದಿಂದ ಮರಳಿದವರೇ ತಾ ೩ಕ್ಕೆ ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತ ಗಾಂಧೀಜಿ ಹೇಳಿದ್ದು: "ವಾಯಿಸರಾಯರಿಂದ ನೀವೇನು ತಂದಿರುವಿರೆಂದು ನೀವು ಕೇಳಬಹುದು. ಆದರೆ ನಾನೇನನ್ನೂ ತಂದಿಲ್ಲ ಏಕೆಂದರೆ ಬೇಡಿದರೆ ತಮ್ಮ ಸೇವೆಯೊಂದು ಹೊರತು ಕೊಡತಕ್ಕದ್ದೇನೂ ಅವರ ಕೈಯಲ್ಲಿಲ್ಲ. ಸಾಧ್ಯವಾದಷ್ಟು ಆಗುವ ಬಗೆಯಿಂದ ಶಾಂತಿ ಸುವ್ಯವಸ್ಥೆಯಲ್ಲಿ ಹಿಂದುಸ್ತಾನವನ್ನು ಬಿಟ್ಟು ಹೋಗುವದೊಂದೇ ತಮ್ಮ ಉದ್ದೇಶವೆಂದು ಅವರು ನನಗೆ ಹೇಳಿದ್ದಾರೆ— ಮೊದಲು ಜೂನ ೧೯೪೮ಕ್ಕೆ ಇಲ್ಲಿಂದ ಹೊರಟು ಹೋಗಬೇಕೆಂದಿದ್ದರು. ಈಗ ಇದೇ ವರ್ಷ ಅಗಸ್ಟ ೧೫ಕ್ಕೆ ಹೊರಡಬೇಕೆನ್ನುತ್ತಾರೆ.

—೧೦ನೇ ಜೂನ

ಜನಸಾಮಾನ್ಯರಿಗೆ ಔಷಧಗಳು

[೮ ನೇ ಪುಟದಿಂದ]

ನಿಸರ್ಗ ಚಿಕಿತ್ಸಕರಾಜ ಗೆಳೆಯರಿಗೆ ಉಪ್ಪು ದ್ದ ಟೀಕೆಗಳನ್ನು ಬರೆಯುವುದರಲ್ಲಿ ಸುಮಾರು ವೇಳೆ ಕಳೆದರು.

ನಾನು ಕರುಳಿನ ರೋಗದಿಂದ ಮುಕ್ತನಾಗಿ ಆರೋಗ್ಯ ಸುಧಾರಿಸಿಕೊಳ್ಳುತ್ತಿರುವ ಕಾಲದಲ್ಲಿ ಮಹಾಗಾಂಧಿಯು ಶಸ್ತ್ರ ಚಿಕಿತ್ಸೆಯ ಸುದ್ದಿಯನ್ನು ಕೇಳಿದೆ. "ನನ್ನ ಜಂಘ ಇಳಿದುಹೋಯಿತು. ನಾನು ಮಹಾವಿಗೆ ಶಸ್ತ್ರ ಚಿಕಿತ್ಸೆ ಮಾಡಿಸಬೇಕಾಯಿತು. ದೇವರು ನನ್ನನ್ನು ಪುನಃ ಕೈಬಿಡಲಾರನೆಂದು ಆಶಿಸುತ್ತೇನೆ ಮತ್ತು ಕೈಬಿಡಬಾರದೆಂದು ಪ್ರಾರ್ಥಿಸುತ್ತೇನೆ. ಬದುಕಿರಬೇಕೆಂಬ ಆಸೆಯನ್ನು ಗೆಲ್ಲಲಸಾಧ್ಯ" ಎಂದು ಒಂದು ಕಾಗದದಲ್ಲಿ ಗಾಂಧೀಜಿ ಬರೆದರು.

ನಾನು ದಿಲ್ಲಿಗೆ ಹೋದಾಗ ಅವರು ಹೇಳಿದರು: "ನಿಸರ್ಗ ಚಿಕಿತ್ಸೆಯಲ್ಲಿ ನನಗೆ ಅಖಂಡ ವಿಶ್ವಾಸವಿದೆ. ಜನಸಾಮಾನ್ಯರಿಗೆ ಅದೊಂದಲ್ಲದೆ ಬೇರೆ ಇಲ್ಲ. ಆದರೆ ಅದರ ಕ್ಷೇತ್ರ ಪರಿಮಿತವಿದೆ. ಅದನ್ನು ತಿಳಿದುಕೊಳ್ಳಬೇಕು."

ಗಾಂಧೀಜಿಯ ಉಪದೇಶದ ಮೂಲಸೂತ್ರವೆಂದರೆ ವಿನಯ, ಕಠಿನವಾದ ಕೆಲಸ, ಬಡವರ ಸೇವೆ ಮಾಡಬೇಕೆಂಬ ಪ್ರಾಮಾಣಿಕವಾದ ಇಚ್ಛೆ ಇವಿರಬೇಕೆಂಬುದು. ಉಳಿದೆಲ್ಲ ಚಿಕಿತ್ಸೆಗಳಂತೆ ನಿಸರ್ಗ ಚಿಕಿತ್ಸೆಯಾದರೂ ಸರ್ವರೋಗ ಶಾಮಕವೆಂಬ ಜಂಭ ಗಾಂಧೀಜಿಗೆ ಸೇರದು. ಪಾಶ್ಚಾತ್ಯವೈದ್ಯ ಪದ್ಧತಿಯವರು ಕಷ್ಟಪಟ್ಟು ಮಾಡಿದ ಸಂಶೋಧನ ಕಾರ್ಯ ಮತ್ತು ಅವರ ವೈಜ್ಞಾನಿಕ ದೃಷ್ಟಿ ಇವನ್ನು ಅವರು ಮೆಚ್ಚುತ್ತಾರೆ. ಆದರೆವೈದ್ಯವೃತ್ತಿಯ ದುರಾಶೆ ಮತ್ತು ದುರಾಗ್ರಹಗಳನ್ನು ಕಂಡರೆ ಗಾಂಧೀಜಿಗೆ ಬಹಳ ವ್ಯಸನವಾಗುತ್ತದೆ. ಕೆಲವು ದಿನಗಳ ಹಿಂದೆ ಅವರು ಒಬ್ಬ ನಿಸರ್ಗಚಿಕಿತ್ಸಕನಿಗೆ ಬರೆದರು: "ನಿನ್ನ ಉತ್ಸಾಹಕ್ಕೆ ಮೆಚ್ಚಿದೆ; ಹಿಂದುಸ್ಥಾನದಲ್ಲಿ ನಿಸರ್ಗಚಿಕಿತ್ಸೆ ಕುರುಡು ಹುರುಪಿನ ಮೇಲೆ ಬದುಕಿರಲಾರದು, ನಾನು ಕೂಡ ಕುರುಡನೇ; ಆದುದರಿಂದ ನಾನು ಅದರ ಸಮರ್ಥನೆ ಮಾಡುವವನೆಂಬುದರಿಂದಲೂ ಬದುಕದು. ನೀನು ನಿನ್ನ ಉತ್ಸಾಹವನ್ನು ಜ್ಞಾನರೂಪಕ್ಕೆ ಪರಿವರ್ತಿಸಿದರೆ ಆಗ ಸ್ವಲ್ಪ ಆಸೆಯಿದೆಯೆನ್ನಬಹುದು."

"ನೀನು ನಿನ್ನ ನ್ಯೂನತೆಯನ್ನೊಪ್ಪಿಕೊಳ್ಳುವುದಾದರೆ ಅಸ್ಥಿ ಪಂಜರಾದಿ ಶರೀರಾವಯವಗಳ ವಿಜ್ಞಾನವನ್ನು ಗಳಿಸಲು ಪ್ರಯತ್ನಿಸುವದಿಲ್ಲವೇಕೆ? ನಿನಗೆ ಶರೀರ ಶಾಸ್ತ್ರದ ಜ್ಞಾನವಿದೆಯೆ? ವರುಷಗಟ್ಟಲೆ ಜೀವನವೆಲ್ಲ ಪಾಶ್ಚಾತ್ಯ ವೈದ್ಯ ಪದ್ಧತಿಯವರು ಗಳಿಸಿದ ಜ್ಞಾನದ ಲಾಭವನ್ನು ನೀನು ಪಡೆದಿದ್ದರೆ ನೀನು ಮಾಡಿದ ತಪ್ಪನ್ನು ಮಾಡದಿರಬಹುದಾಗಿತ್ತು. ಇಂದು ಪಾಶ್ಚಾತ್ಯ ವೈದ್ಯ ಪದ್ಧತಿಯು ಜಗನ್ಮಾನ್ಯವಾಗಿದ್ದರೆ ಅದು ರಾಜಪುರಸ್ಕಾರದಿಂದಾದುದಲ್ಲ; ಆ ಪದ್ಧತಿಯವರು ನಿಜವಿಜ್ಞಾನವೆಂದು (ನನ್ನ ಮತದಂತೆ ತಪ್ಪಾಗಿ) ತಿಳಿದುಕೊಂಡದ್ದರ ಸಲುವಾಗಿ ಮಾಡಿದ ಸ್ವಾರ್ಥತ್ಯಾಗದಿಂದ. ಆದರೆ ಆಧುನಿಕ ನಿಸರ್ಗ ಚಿಕಿತ್ಸಕರು ಮಾಡಿದ ತ್ಯಾಗವೇನೂ ಇಲ್ಲ. ಅವರು ಸುಲಭ ತೃಪ್ತರಾಗಿ, ನಂಬುವ ಜನಗಳನ್ನು ವಂಚಿಸಿ ಬಾಳಲು ತಮಗೆಹಕ್ಕಿದೆಯೆಂದುತಿಳಿದಿದ್ದಾರೆ. ಇದು ಪಾಶ್ಚಾತ್ಯ ವೈದ್ಯ ಪದ್ಧತಿಯನ್ನು ಹೊಗಳಲು ಹೇಳಿದ ಮಾತಲ್ಲ. ನನಗೂ ಆ ಪದ್ಧತಿಯವರಿಗೂ ಮೂಲ ಭೂತವಾದ ಅಭಿಪ್ರಾಯ ಭೇದವಿದೆ. ಪದವಿಯೊಂದನ್ನು ಪಡೆದು ತಾವು ಜೀರ್ಣಿಸಿಕೊಳ್ಳದ ಜ್ಞಾನವನ್ನು ತಮ್ಮ ಜೇಬುತುಂಬಿಸಿಕೊಳ್ಳಲು ಉಪಯೋಗಿಸಿಕೊಂಡರೆ ಸಾಕೆಂಬ ಅವರ ತೃಪ್ತಿಯು ಅಪರಾಧವೇ ಸರಿ."

ತಮ್ಮ ಪ್ರಾರ್ಥನೋತ್ತರ ಭಾಷಣವೊಂದರಲ್ಲಿ ವೈದ್ಯವೃತ್ತಿಯನ್ನುದ್ದೇಶಿಸಿ ಗಾಂಧೀಜಿ ಒಂದು ಸಲ ಹೇಳಿದರು:—

"ದೇಶಕ್ಕಾಗಿ ವೈದ್ಯರೂ ವಿಜ್ಞಾನಿಗಳೂ ಏನು ಮಾಡಿದ್ದಾರೆಂದು ನಾನು ತಿಳಿದುಕೊಳ್ಳಬೇಕಾಗಿದೆ. ವಿಶಿಷ್ಟ ರೋಗಗಳಿಗೆ ನವವಿಧವಾದ ಚಿಕಿತ್ಸೆ ನಡೆಸುವುದನ್ನು ಅಭ್ಯಸಿಸಲು ತಡಮಾಡದೆ ಪರದೇಶಗಳಿಗೆ ಅವರು ಹೋಗುವದನ್ನು ಎಲ್ಲರೂ ಕಾಣಬಹುದಾಗಿದೆ. ಅವರು ಹಿಂದುಸ್ಥಾನದ ೭ ಲಕ್ಷ ಹಳ್ಳಿಗಳತ್ತ ಗಮನ ಕೊಡಬೇಕೆಂದು ನಾನು ಸೂಚಿಸುತ್ತೇನೆ. ಹಳ್ಳಿಯ ಸೇವೆಗೆ ಎಲ್ಲ ವಿದ್ವತ್ಸಂಪನ್ನರಾದ ನರನಾರಿಯರೂ ಬೇಕಾಗಿದ್ದಾರೆ; ಆದರೆ ಅದು ಪಾಶ್ಚಾತ್ಯ ರೀತಿಯಿಂದಲ್ಲ ಪೌರಸ್ತ್ಯ ರೀತಿಯಿಂದ— ಎಂದು ಆಗ ಅವರಿಗೆ ಗೊತ್ತಾಗುವುದು. ಆಗ ಅವರು ಹಿಂದುಸ್ಥಾನದ ಅನೇಕ ಸನಾತನ ಪದ್ಧತಿಗಳನ್ನು ಅಳವಡಿಸಿಕೊಳ್ಳುವರು. ಹಳ್ಳಿಗಳಲ್ಲೇ ಬೆಳೆಯುವ ಅಸಂಖ್ಯಾತ ಮತ್ತು ವಿವಿಧವಾದ ಗಿಡಮೂಲಿಕೆಗಳಿರುವಾಗ ಹಿಂದುಸ್ಥಾನ ಪಶ್ಚಿಮದಿಂದ ಔಷಧಗಳನ್ನು ತರಿಸಬೇಕಾದ ಅಗತ್ಯವಿಲ್ಲ. ಆದರೆ ಔಷಧಗಳಿಗಿಂತ ಹೆಚ್ಚಾಗಿ ಅವರು ಹಳ್ಳಿಗರಿಗೆ ಸರಿಯಾಗಿ ಬದುಕುವುದನ್ನು ಕಲಿಸಬೇಕು."

—ಎಸ್. ಎಸ್.

ವಾರದ ಪತ್ರ

[೯ ನೇ ಪುಟದಿಂದ]

ಅವರೇಕೆ ಹೊರಡಬೇಕೆನ್ನುತ್ತಾರೆ? ನಮ್ಮ ಅಹಿಂಸಾತ್ಮಕ ಹೋರಾಟದಿಂದ ಅವರ ಮನಸು ಕರಗಿದೆ. ಬ್ರಿಟಿಶ ಆಳಿಕೆಯೊಂದು ಅರಿಷ್ಟವೆಂದು ಹಿಂದುಸ್ಥಾನ ನಂಬಿತ್ತು. ಆದರೂ ಬ್ರಿಟಿಶರನ್ನು ಕೊಲ್ಲಲೆಳಸಲಿಲ್ಲ. ಕೇವಲ ಅರಿಷ್ಟದೊಡನೆ-ಅರಿಷ್ಟ ಕಾರಣರೊಡನಲ್ಲ-ಅಸಹಕಾರ ಮಾಡಲು ಅವರು ಪ್ರಯತ್ನಿಸಿದರು. ತಾವಾಗಿ ಕಾರಣಕೊಡಲಿಲ್ಲ— ಅಸಹಕಾರ ಮಾಡಲು ಅವರು ಪ್ರಯತ್ನಿಸಿದರು ತಾವಾಗಿ ಹಿಂದೆ ಹೋಗುತ್ತಿರುವದರಿಂದ ಬ್ರಿಟಿಶರಿಗೆ ಸ್ವಲ್ಪ ಅವಧಿ ಬೇಕು, ಒಂದು ವ್ಯವಸ್ಥೆಯಾಗುವದು ಪರಿಸ್ಥಿತಿಯಲ್ಲಿ ಅವಶ್ಯವಾಗಿದೆ."

ಬ್ರಿಟಿಶರ ಸತ್ಯಸಂಧತೆಯನ್ನು ಸಂಶಯಚಿತ್ತದಿಂದ ನೋಡುವವರೆಷ್ಟೋ ಜನರು ಇನ್ನೂ ಇದ್ದಾರೆಂದು ಗಾಂಧೀಜಿ ಮುಂದೆ ಸಾಗಿದರು. ಆದರೆ ಹಿಂದುಸ್ಥಾನವನ್ನು ತುಂಡರಿಸುತ್ತಿರುವವರು ಬ್ರಿಟಿಶರಲ್ಲ. ಆಳಿಕೆಯ ಐಕ್ಯ ತಮ್ಮ ಮಹಾಸಾಧನೆಯೆಂದು ಅವರು ಅಂದುಕೊಳ್ಳುತ್ತಾರೆ. ವಿಭಜನೆ ಕಾಂಗ್ರೆಸ್ ಲೀಗುಗಳೊಳಗಾದ-ಎಷ್ಟೇ ಮನಸ್ಸಿಲ್ಲದ್ದಾದರೂ-ಒಪ್ಪಂದದ ಫಲ.

ಧೀರರು ಹುಳ್ಳುಹುಳ್ಳೇ ಸಂಶಯಗಳಿಂದ ವ್ಯಾಕುಲರಾಗುವದಿಲ್ಲ. ವಾಯಿಸರಾಯರು ಪ್ರಾಮಾಣಿಕತೆಯಿಂದ ವರ್ತಿಸುತಿದ್ದಾರೆಂದು ತಮಗಂತೂ ಅನಿಸುತ್ತದೆಂದರು ಗಾಂಧೀಜಿ. ಅವರು ವಂಚನೆ ಮಾಡಿದರೆ ಅವರೇ ಅದರ ಫಲ ಉಣ್ಣುವದಲ್ಲದೆ ಮೋಸ ಹೋದವರಲ್ಲ.

ಪಾಕಿಸ್ತಾನದ ಚಿತ್ರ ತೋರಿಸಿರಿ

ಈಗ ಕಾಯಿದೆ ಅಝಮರಿಗೆ ಅವರು ಬೇಕೆಂದ ಪಾಕಿಸ್ತಾನ ದೊರೆತಿರುವದರಿಂದ ಆ ಪಾಕಿಸ್ತಾನದ ರೂಪವನ್ನು ಜಗತ್ತಿಗೆ ತೋರಿಸಿ ಅದನ್ನು ಮಾತು ಕೃತಿಗಳಿಂದ ಆಕರ್ಷಕವಾಗಿ ಮಾಡುವದು ಅವರ ಪಾಲಿನ ಕೆಲಸ. ಎಲ್ಲ ಮುಸ್ಲಿಮೇತರರನ್ನೂ ಕರೆದು ಪಾಕಿಸ್ತಾನದಲ್ಲಿ ಅವರು ಮುಸ್ಲಿಮರಷ್ಟೇ ಸುಖಿಗಳಾಗುವದೆಂದು ಅವರು ಹೇಳಬೇಡವೆ? ಗಡಿನಾಡಿನ ವಿಚಾರವೇನು? ಅದು ಕಾಂಗ್ರೆಸ್ ಪ್ರಾಂತ. ಅದು ಪಾಕಿಸ್ತಾನಕ್ಕೆ ಸೇರಬೇಕಾದರೆ, ಕಾಯಿದೆ ಅಝಮರು, ಹಿಂದೀ ಒಕ್ಕೂಟದಲ್ಲಿ ಸಿಗಬಹುದಾದಷ್ಟೇ ಸುಖ ಸೌಕರ್ಯಗಳು ಪಠಾಣರಿಗೆ ಪಾಕಿಸ್ತಾನದಲ್ಲಿಯೂ ದೊರೆಯುವದೆಂದು ತೋರಿಸಿಕೊಡಬೇಕಾದ್ದು ವಿಹಿತ. ಈ ಸಂಧಿಕಾಲದಲ್ಲಿ ಜನಮತಗಣನೆ ಅಪಾಯಕರವಾದುದು. ಆದುದರಿಂದ ಪಠಾಣರನ್ನು ವಿವೇಕದಿಂದಲೂ ಪ್ರೀತಿಯಿಂದಲೂ ಒಲಿಸಿಕೊಳ್ಳುವ ಹಾದಿಯನ್ನು ಗಾಂಧೀಜಿ ಸೂಚಿಸಿದರು.

ಒಳಿತು ಮಾಡುವದರಲ್ಲಿ ಹಿಂದುಸ್ಥಾನವೂ ಪಾಕಿಸ್ತಾನವೂ ಮೇಲಾಟ ನಡೆಸಿದರೆ ಅದೀಗ ಅಪೇಕ್ಷಣೀಯ. ಪಾಕಿಸ್ತಾನವೇ ಮೇಲಾದರೆ ಇಡೀ ಹಿಂದುಸ್ಥಾನವೇ ಪಾಕಿಸ್ತಾನವಾದೀತು. ಆಗ ಅಲ್ಲಿ ಬಹುಸಂಖ್ಯಾತರೂ ಇಲ್ಲದೆ ಅಲ್ಪಸಂಖ್ಯಾತರೂ ಇಲ್ಲದೆ ಎಲ್ಲರೂ ಸಮಾನರಾದರು. "ನಾನೇ ಮುಸ್ಲಿಂ ಲೀಗಿನ ಅಧ್ಯಕ್ಷನಾಗಿದ್ದರೆ ಪಾಕಿಸ್ತಾನದ ಚಿತ್ರವನ್ನು ತೋರಿಸಿ ಅನಿಂದ್ಯ ಸೌಂದರ್ಯದಿಂದ ಅದನ್ನು ಮೋಹಕವಾಗಿ ಮಾಡುತಿದ್ದೆ. ಹಾಗಾದರೆ ತಪ್ಪನ್ನು ಒಪ್ಪಿಕೊಂಡು ಎಲ್ಲರಿಗೂ ಪಾಕಿಸ್ತಾನವನ್ನು ಅನುಮೋದಿಸುವದರಲ್ಲಿ ನಾನೇ ಎಲ್ಲರಿಗಿಂತ ಮುಂದಾಗುವೆ. ಕಾಯಿದೆ—ಅಝಮರು ಹೀಗೆ ಮಾಡುವರೇ?"

ಕಾಂಗ್ರೆಸ್ಸು ತಪ್ಪುಮಾಡಿತೆ?

ಕಾಂಗ್ರೆಸ್ ಕಾರ್ಯಸಮಿತಿಯ ನಿರ್ಣಯ ಗಾಂಧೀಜಿಗೆ ಸಮ್ಮತವಿಲ್ಲವೆಂದೂ ಅ. ಭಾ. ಕಾಂ. ಸಮಿತಿ ಅದಕ್ಕೆ ವಿರೋಧ ಎತ್ತುವದೆಂದೂ ಪತ್ರಿಕೆಗಳಲ್ಲಿ ಬಂದ ವರದಿಯನ್ನು ಕುರಿತು ಗಾಂಧೀಜಿ, ಕಾರ್ಯ ಸಮಿತಿಯನ್ನು ನೇಮಿಸಿದ್ದು ಅ. ಭಾ ಕಾಂಗ್ರೆಸ್ಸೇ ಆದುದರಿಂದ ಅದು ಕಾರ್ಯ ಸಮಿತಿಯ ತೀರ್ಮಾನವನ್ನು ಕಃಪದಾರ್ಥವೆಂದು ತಳ್ಳಿಹಾಕಲಾರದೆಂದರು. ಅ. ಭಾ. ಕಾಂಗ್ರೆಸ್ಸಿನ ಪರವಾಗಿ ಕಾರ್ಯ ಸಮಿತಿಯೊಂದು ಪ್ರಾಮಿಸರಿ ನೋಟಿಗೆ ಸಹಿ ಹಾಕಿತ್ತೆನ್ನೋಣ. ಆಗ, ಅ. ಭಾ. ಕಾಂಗ್ರೆಸ್ಸು ಆ ನೋಟನ್ನು ಮನ್ನಿಸಲೇಬೇಕಾಗುತಿತ್ತು. ಕಾರ್ಯ ಸಮಿತಿ ತಪ್ಪು ಮಾಡಿರಬಹುದು. ಅದನ್ನು ತಿದ್ದುಪಡಿ ಮಾಡುವ ಮೂಲಕ ಅದನ್ನು ದಂಡಿಸಬಹುದೇ ಹೊರತು ಈಗಾಗಲೆ ಕೈಕೊಂಡ ನಿರ್ಣಯವನ್ನು, ಅ. ಭಾ. ಕಾಂಗ್ರೆಸ್ಸು ತಳ್ಳಿಹಾಕಕೂಡದು.

ಇನ್ನು ಜನರಾದರೂ ಕಾಂಗ್ರೆಸ್ಸು ಸಾರ್ವಜನಿಕರನ್ನು ಬೇಕೆಂದೇ ತಪ್ಪುದಾರಿ ಹಿಡಿಸಲೆಳಸಿದರೆ ಮಾತ್ರವೇ ಅದನ್ನು ವಿರೋಧಿಸಬೇಕೆಂದು ಗಾಂಧೀಜೀ ಹೇಳಿದರು. "ನಿಮಗೆ ನನ್ನ ಪ್ರತೀಕಾರಪದ್ಧತಿ ಗೊತ್ತು. ಹೇಳಿಕೇಳಿ ನಾನು ಸನಾತನಿ ಹಿಂದೂಗಳ ಭದ್ರದುರ್ಗದಲ್ಲಿಯೇ ಅಸ್ಪೃಶ್ಯತೆಯ ವಿರುದ್ಧ ಬಂಡು ಹೂಡಿದವನು. ಅದರ ಪರಿಣಾಮ ಒಳಿತೇ ಆಗಿದೆ.

"ನನಗೆ ಕಾಂಗ್ರೆಸ್ ಕಾರ್ಯಸಮಿತಿಯೊಡನೆ ಭಿನ್ನಾಭಿಪ್ರಾಯವುಂಟಾಗಬಹುದು. ಆದರೆ ಹಾಗೆ ಹೇಳಿಬಿಟ್ಟು, ಅವರ ನಿರ್ಣಯವನ್ನು ಅನುಮೋದಿಸುವೆ. ಪರಿಸ್ಥಿತಿಯನ್ನು ಇನ್ನಾದರೂ ಬಹಳಮಟ್ಟಿಗೆ ಸುಧಾರಿಸಬಹುದೆಂದು ನನ್ನ ಅಭಿಪ್ರಾಯ."

"ಕಾಂಗ್ರೆಸ್ಸು ತನ್ನ ಸದಸ್ಯರ ಯಾದಿಯಲ್ಲಿರುವ ಕೆಲ ಲಕ್ಷ ಸದಸ್ಯರ ಪ್ರತಿನಿಧಿ ಮಾತ್ರವೇ ಆಗಿರದೆ ಹಿಂದುಸ್ಥಾನದ ಎಲ್ಲ ಕೋಟ್ಯಂತರ ಪ್ರಜೆಗಳ ಪ್ರತಿನಿಧಿಯಾಗಿದೆಯೆಂದು ನಾನು ಎರಡನೆ ದುಂಡು-ಮೇಜಿನ ಪರಿಷತ್ತಿನಲ್ಲಿ ಹೇಳಿದ್ದೆ. ಏಕೆಂದರೆ ಕಾಂಗ್ರೆಸ್ಸಿನ ಹೃದಯದಲ್ಲಿ ಅವರೆಲ್ಲರ ಹಿತವೂ ಅಗಬೇಕೆಂಬ ಆಸೆಯಿದೆ. ಅಂದಬಳಿಕ ನರೇಂದ್ರರಿಗೂ ಅವರ ಪ್ರಜೆಗಳಿಗೂ ಕಾಂಗ್ರೆಸ್ಸಲ್ಲದೆ ಬೇರೆ ಯಾರು ಪ್ರತಿನಿಧಿಗಳಾಗಬಲ್ಲರು? ವರಿಷ್ಠಾಧಿಕಾರಿ ಮುಕ್ತಾಯವಾದೊಡನೆ ಸಂಸ್ಥಾನಗಳ ಪ್ರಜೆಗಳ ಇಚ್ಛೆಯೇ ವರಿಷ್ಠವಾಗಬೇಕೆಂಬಲ್ಲಿ ಸಂಶಯವಿಲ್ಲ."

ಗುರುಗಾಂವದಲ್ಲಿ ಹೋರಾಡುತಿರುವ ಪಕ್ಷಗಳಿಗೆ-

ಆ ಮೇಲೆ ಗಾಂಧೀಜಿ ಗುರುಗಾಂವದ ಪರಿಸ್ಥಿತಿಯನ್ನು ಸಮೀಕ್ಷಿಸುತ್ತ ಜಾಟರೂ ಅಹಿರರೂ ಮೇವರೂ ಇನ್ನೂ ಬಡಿದಾಡುತ್ತಲೇ ಇರುವರೆಂದರು. ಆದರೆ ಅವರು ಜನಾವರ ಸ್ಥಿತಿಗಿಳಿಯದೆ ಹೆಂಗಸರು ಮಕ್ಕಳನ್ನು ನೋಯಿಸದೆ ಬಿಡುತಿದ್ದಾರಂತೆ. ಅಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಕೊಳ್ಳಿ ಹಚ್ಚುವದು ನಡೆದಿದೆ, ಅರಸರಿಗೆ ತಮ್ಮ ಅರಮನೆಯೆಷ್ಟೋ ಅಷ್ಟೇ ಬಡವರಿಗೆ ಅಮೂಲ್ಯವಾಗಿರುವ ಗುಡಿಸಲುಗಳನ್ನು ಸುಡುತಿದ್ದಾರೆ. ಕಾಂಗ್ರೆಸ್ಸೂ ಲೀಗೂ ಒಡಂಬಡಿಕೆಗೆ ಬಂದಿರುವದರಿಂದ ಈ ಹೋರಾಡುತಿರುವ ಪಕ್ಷಗಳು ಹೋರಾಟವನ್ನು ನಿಲ್ಲಿಸಬೇಕೆಂದು ಗಾಂಧೀಜಿ ಬಿನ್ನವಿಸಿಕೊಂಡರು. ಆ ಒಡಂಬಡಿಕೆಗೆ ಮಾನ ಕೊಟ್ಟು ತಂತಮ್ಮಲ್ಲಿ ಬಡಿದಾಡುವದನ್ನು ಜನರು ಬಿಟ್ಟುಕೊಡಬೇಕು. "ನಾನು ಬಡಿದಾಡುವವರ ನಡುವೆ ಮಧ್ಯಸ್ಥನಾಗಬೇಕೆಂದು ಕೆಲವರು ಹೇಳುತ್ತಾರೆ," ಗಾಂಧೀಜಿಯೆಂದರು. "ನಾನು ಹಾಗೆ ಮಾಡಲಾರೆ. ಬಡಿದಾಡುವವರ ಪರಿಚಯ ನನಗಿಲ್ಲ. ಅಲ್ಲದೆ ನಾನೆಂದೂ ಸ್ವಯಂನಿಯುಕ್ತ ಮಧ್ಯಸ್ಥನಾದುದಿಲ್ಲ. ನಾನು ಕೊಟ್ಟ ತೀರ್ಪನ್ನು ನಡೆಸುವ ಅಧಿಕಾರ ಸಂಪತ್ತಿಯೂ ಇಲ್ಲ. ಖಡ್ಗದ ಅಧಿಕಾರ ಸಂಪತ್ತಿಯನ್ನು ನಾನು ಕೇಳುತ್ತಿಲ್ಲ. ನಾನು ಹೇಳುವದು ಸಾರ್ವಜನಿಕಾಭಿಪ್ರಾಯದ ಅಧಿಕಾರ ಸಂಪತ್ತಿ. ಅದು ಹೇಗೇ ಇರಲಿ, ನನ್ನ ಈ ಬಿನ್ನಹವನ್ನು ತೀರ್ಪೆಂದೇ ಭಾವಿಸಿ ಹೋರಾಡುತಿರುವ ಪಕ್ಷಗಳು ಅದನ್ನು ಕಾರ್ಯರೂಪಕ್ಕೆ ತರಲೆಂದು ಹಾರೈಸುವೆ."

ಅಖಂಡ ?

ಅಖಂಡ ಸರ್ವತಂತ್ರ ಸ್ವತಂತ್ರ ಬಂಗಾಲದ ಮಾತು ಈಗ ಕೆಲ ದಿನಗಳಿಂದ ಪತ್ರಿಕೆಗಳಲ್ಲಿ ಕೇಳಬರುತಿದೆ. ಆ ಯೋಜನೆಯ ನಿರ್ಮಾತೃಗಳು, ಬಂಗಾಲ ಸಂಸ್ಕೃತಿಯಲ್ಲಿಯೂ ಭಾಷೆಯಲ್ಲಿಯೂ ಒಂದಾಗಿದೆಯೆಂದು ಗಾಂಧೀಜಿಗೆ ಹೇಳಿದರು. ಅವರಿಗೆ ತಮ್ಮ ಪ್ರಾಂತ ಎರಡಾಗಿ ಒಡೆಯುವದು ಬೇಡವಾಗಿದೆ. ತಾವು ಒಂದೇ ಜನಾಂಗ; ಒಂದಾಗಿ ಬಾಳುವೆವು, ಅಳಿಯುವೆವು ಎಂದು ಅವರ ಹೇಳಿಕೆ. ಲಾರ್ಡ ಕರ್ಝನರ ವಿಭಜನ ಯೋಜನೆಯ ವಿರುದ್ಧ ಬಂಗಾಲಿಗಳು ಹೂಡಿದ ಶೂರ ಹೋರಾಟವೇನು ಅಷ್ಟು ಹಳೆಗಾಲದ ಕತೆಯಲ್ಲ. ಈ ವಾದದ ವಿರುದ್ಧ ಗಾಂಧೀಜಿಯ ಮಾತೇ ಇದ್ದಿಲ್ಲ. ನಿಜವಾಗಿ ಇಡಿ ಹಿಂದುಸ್ಥಾನಕ್ಕೇ ಈ ಮಾತು ಅನ್ವಯಿಸುತ್ತದೆ. ಯಾವುದಾದರೊಂದು ಪ್ರಾಂತವಾದರೂ ಸರಿಯಾದುದನ್ನು ಮಾಡಬಯಸಿದರೆ ತಾವದನ್ನು ವಿರೋಧಿಸುವದಿಲ್ಲವೆಂದು ಅವರು ಹೇಳಿದರು.

ಅಖಂಡ ಸ್ವತಂತ್ರ ಬಂಗಾಲದ ವಾದವಿದು ಕುಟಿಲ ತಂತ್ರವೆಂದು ಕೆಲವರು ಹೇಳುತ್ತಿರುವರೆಂದು ಗಾಂಧೀಜಿ ಮುಂದುವರಿದರು. ಹಿಂದುಗಳು ಬೇಸತ್ತು ಹೋಗಿದ್ದಾರೆ. ಅವರು ಪಶ್ಚಿಮ ಬಂಗಾಲವನ್ನು ಪೂರ್ವ ಬಂಗಾಲದಿಂದ ಬೇರ್ಪಡಿಸಬೇಕೆಂದು ಬಯಸುತ್ತಾರೆ. ಬಂಗಾಲ ಮುಸ್ಲಿಂ ಲೀಗೂ ಅಖಂಡತೆಯ ಯೋಜನೆಯನ್ನು ತಿರಸ್ಕರಿಸಿದೆ. ಆದರೂ ಕೆಲವರು ಇನ್ನೂ ಅದನ್ನೇ ಹಾಡುತ್ತಿದ್ದಾರೆ. ಇದಕ್ಕೆ ಗಾಂಧೀಜಿಯ ಬೆಂಬಲವೇ ಕಾರಣವೆಂದು ಹೇಳಲಾಗಿದೆ. ಯಾವುದೇ ಸಂದೇಹಾರ್ಹವಾದ ನೀತಿಗೆ ತಮ್ಮ ಬೆಂಬಲ ದೊರಕಲಾರದೆಂದು ಗಾಂಧೀಜಿ ಸ್ಪಷ್ಟಗೊಳಿಸಿದರು. ಅಖಂಡ ಬಂಗಾಲ ಯೋಜನೆಗೆ ಅನುಕೂಲವಾದ ಮತ ಗಳಿಸಿಕೊಳ್ಳಲು ಹಣವನ್ನು ನೀರಿನಂತೆ ವೆಚ್ಚ ಮಾಡಲಾಗುತ್ತಿದೆಯೆಂದು ಕೇಳಿದ್ದೇನೆಂದು ಅವರು ಹೇಳಿದರು. "ನನಗೆ ಐಕ್ಯ ಬೇಕಾಗಿದೆ. ಆದರೆ ಮಾನ, ನ್ಯಾಯಗಳನ್ನು ಬಲಿಗೊಟ್ಟ ಐಕ್ಯವಲ್ಲ. ಶರತ್ ಬಾಬುವಿಗೆ ಬೆಂಬಲಕೊಟ್ಟದ್ದಕ್ಕೆ ನನ್ನನ್ನು ನಿಂದಿಸುವವರುಂಟು. ಅವರು ನನ್ನ ಗೆಳೆಯರೇನೋ ನಿಜ. ಅವರೊಡನೆ ನಾನು ಪತ್ರವ್ಯವಹಾರ ಮಾಡುತ್ತಲೂ ಇದ್ದೇನೆ. ಆದರೆ ಯಾವುದನ್ನು ಬಹಿರಂಗವಾಗಿಯೂ ಪ್ರಾಮಾಣಿಕವಾಗಿಯೂ ಪ್ರತಿಪಾದಿಸುವದು ಸಾಧ್ಯವಿಲ್ಲವೋ ಅದಕ್ಕೆ ಬೆಂಬಲಕೊಡುವದು ನನ್ನಿಂದ ಎಂದೂ ಸಾಧ್ಯವಿಲ್ಲ. ಅದು ಯಾವಾಗಲೂ ನನ್ನ ನಿಯಮ. ನ್ಯಾಯ ಧ್ಯೇಯಕ್ಕಾದರೂ ವಕ್ರ ಯುಕ್ತಿಗಳನ್ನುಪಯೋಗಿಸಲು ನನ್ನ ಸಮ್ಮತಿಯಿಲ್ಲ."

ಹೊಸದಿಲ್ಲಿ
೯—೬—೪೭
ಸು. ನೇ.

"ಕ್ಯೂ" ಪದ್ಧತಿ

ಪ್ರೊ. ಕ್ಯೂರವರು ಸ್ವಯಂ ಪ್ರೇರಣೆಯನ್ನು ಉಪದೇಶಿಸಿದರು. "ಪ್ರತಿಯೊಂದು ರೀತಿಯಿಂದಲೂ ಪ್ರತಿಯೊಂದು ಮಾರ್ಗದಿಂದಲೂ ಪ್ರತಿದಿನವೂ ನಾನು ಉತ್ತಮಗೊಳ್ಳುತ್ತಿದ್ದೇನೆ" ಎಂದು ಅತ್ಯಂತ ಶ್ರದ್ಧೆಯಿಂದ ಹೇಳುತ್ತ ಇದ್ದರೆ ನಿಜವಾಗಿಯೂ ನಮ್ಮ ಆರೋಗ್ಯ ಸುಧಾರಿಸುವುದೆಂದು ಅವರು ನನಗೆ ಹೇಳಿದರು. ಭಾರತ ಸರಕಾರವು ಬಹುಶಃ ಈ ಪದ್ಧತಿಯ ಭಕ್ತ. ಈ ದೇಶದಲ್ಲಿ ಭಯಂಕರ ಆಹಾರ ಕೊರತೆಯಿದೆ, ಆ ಕೊರತೆ ಕಡಿಮೆ ಯಾಗುವ ಲಕ್ಷಣವೂ ಕಂಡು ಬರುತ್ತಿಲ್ಲ. ಆಗಲೆ ಕೊಡಲಾದ ೪೪೫೦೦೦ ಟನ್ ಅಕ್ಕಿಯಲ್ಲದೆ ಮತ್ತೆ ೭೩೦೦೦ ಟನ್ ಗೋದಿ ಬೇಕೆಂದು ಡಾ. ರಾಜೇಂದ್ರ ಪ್ರಸಾದರು "ಅಂತರ್ರಾಷ್ಟ್ರೀಯ ಸಂಕಟ ಕಾಲದ ಆಹಾರ ಸಮಿತಿ" ಯೆದುರು ಮಂಡಿಯೂರಿ ಭಿಕ್ಷಾ ಪಾತ್ರೆಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಈ ತಿರುಪೆ ಮಾಡುವುದಲ್ಲದೆ ಭಾರತ ಸರಕಾರವು "ಹೆಚ್ಚು ಆಹಾರ ಬೆಳೆಯಿರಿ" ಎಂಬ ಕೂಗೆಬ್ಬಿಸಿ ನಡೆದಿದೆ. ಕಳೆದ ಕೆಲವು ವರ್ಷಗಳಿಂದ ಈ ಕೂಗು ಸಮಯಾಸಮಯವಿಲ್ಲದೆ ಯಾವಾಗಲೂ ಕೇಳಿ ಬರುತ್ತಿದೆ. ಚೆನ್ನಾಗಿಡಲಾದ ಕೆಲವು ಗದ್ದೆಗಳನ್ನೂ ಹುಲ್ಲುಗಾವಲುಗಳನ್ನೂ ಸಾರ್ವಜನಿಕ ಉಪವನಗಳನ್ನೂ ಉಳುವುದಲ್ಲದೆ ಮತ್ತಾವ ಕೆಲಸವೂ ಈ ಕೂಗಿನ ಫಲವಾಗಿ ನಡೆಯಲಿಲ್ಲ. ಇದರ ಪರಿಣಾಮವಾಗಿ ನಮಗಾದರೂ ಆಹಾರ ಪರಿಸ್ಥಿತಿಯಲ್ಲಿ ಸ್ವಲ್ಪವಾದರೂ ಸುಧಾರಣೆಯಾಯಿತೆಂದು ಎನ್ನಿಸಲಿಲ್ಲ.

ಪರಿಸ್ಥಿತಿಯನ್ನೆದುರಿಸಲು ನಮ್ಮ ಒಕ್ಕಲತನವನ್ನು ಸರಿಯಾಗಿ ಪೂರ್ವ ಸಿದ್ಧಯೋಜನೆಗಳಂತೆ ನಡೆಸುವ ದೃಢಬುದ್ಧಿ ಬೇಕು. ಪರರಾಷ್ಟ್ರದ ತಂಬಾಕಿನ ಕಂಪನಿಗಳಿಗೆ ಪೂರೈಕೆ ಮಾಡುವದರ ಸಲುವಾಗಿ ಎಷ್ಟು ಗದ್ದೆಗಳು ಅದರ ಬೆಳೆಗಾಗಿ ಮೀಸಲಾಗಿವೆಯೆಂಬುದನ್ನು ತಿಳಿದುಕೊಳ್ಳಬೇಕೆನ್ನಿಸುತ್ತದೆ. ದುಡ್ಡಿಗಾಗಿ ಅಂತಹ ಸಾಮಾಜಿಕ ಆಸ್ತಿಯನ್ನು ದುರುಪಯೋಗ ಪಡಿಸಬಾರದೆಂದು ಘೋಷಿಸಲು ಸರಕಾರ ಸಿದ್ಧವಿದೆಯೇ? ಕೋಟಿಗಟ್ಟಲೆ ತಾಳೆಯ ಮರಗಳು ಸಕ್ಕರೆ ಬೆಲ್ಲಗಳನ್ನು ಪೂರೈಸಲು ಇರುವಾಗ ಫಲವತ್ತಾದ ಗದ್ದೆಗಳನ್ನು ಸಕ್ಕರೆಯ ಮಿಲ್ಲುಗಳಿಗೆ ಪೂರೈಕೆ ಮಾಡುವುದಕ್ಕೆಂದು ಕಬ್ಬು ಬೆಳೆಯಲು ಉಪಯೋಗಿಸಬಹುದೆ? ಅತ್ಯಂತ ಅಗತ್ಯವಾದ ಧಾನ್ಯಗಳ ಬೆಳೆಗಾಗಿ ಅವನ್ನು ಉಪಯೋಗಿಸಲು ಇನ್ನೂ ಬುದ್ಧಿಯುಂಟಾಗಬಾರದೇಕೆ? ಅಂತಹ ಕೃತ್ಯಗಳನ್ನು ಮಾಡುತ್ತಿರುವಬಂಡವಾಲಸ್ಥರಿಗೆ ಬುದ್ಧಿ ಹೇಳಿ ಜನೋಪಕಾರ ಮಾಡಲು ಸರಕಾರಕ್ಕೆ ಧೈರ್ಯವಿದೆಯೇ? ಹಾಗೆಯೇ ಮಾರಲು ಕೂಡಿಸಿದ ಕಚ್ಚಾ ಮಾಲುಗಳನ್ನು ಪರಿಶೀಲಿಸಿ ಅವುಗಳನ್ನು ಬೆಳೆದ ಸ್ಥಳಗಳಲ್ಲಿ ಎಷ್ಟನ್ನು ಆಹಾರ ಧಾನ್ಯಗಳ ಬೆಳೆಗೆ ಉಪಯೋಗಿಸಿದರೆ ನಮ್ಮ ಕೊರತೆಯಾದ ಭಾಗ ತುಂಬಿ ಬಂದೀತೆಂಬುದನ್ನು ನೋಡತಕ್ಕದ್ದು. ನಮ್ಮ ಪ್ರಾಥಮಿಕ ಅವಶ್ಯಕತೆಗಳತ್ತ ನಾವು ಮೊದಲು ಲಕ್ಷ್ಯಕೊಡಬೇಕು. ಅದುದರಿಂದ ಇಡಿಯ ದೇಶವು ಸಾವು ಮತ್ತು ಉಪವಾಸಗಳನ್ನೆದುರಿಸುತ್ತಿರುವಾಗ ಯಾವ ಜಮೀನುದಾರನೂ ತನ್ನ ಧನಾಶೆಯನ್ನು ಸಫಲಮಾಡಿಕೊಳ್ಳಲು ಬೆಳೆ ಬೆಳೆಯದಂತೆ ನೋಡಿಕೊಳ್ಳಬೇಕು. ಈಗ ಬೇಕಾದದ್ದು ಬರಿಯ ಕೂಗಲ್ಲ, ಕ್ರಾಂತಿಕಾರಿಯಾದ ಕಾರ್ಯ.

ಜೆ. ಸಿ. ಕೆ.

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯಲ್ಲಿ ನೂಲಿನ ವ್ಯಾಪಾರಿಗಳಾದ ಶ್ರೀ ಶಹಾ ಛಗನಲಾಲಜಿ ಚತುರ್ಭುಜ ಅವರು ೬ ನೇ ತಾರೀಖು ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ನಿಧನದ ನಿಮಿತ್ತ ನೂಲಿನ ವ್ಯಾಪಾರಸ್ಥರು ೭ ನೇ ತಾರೀಖು ಅಂಗಡಿಗಳನ್ನು ಮುಚ್ಚಿದ್ದರು.

ರಾಣೇಬೆನ್ನೂರ ತಾಲೂಕು ಕೈಮಗ್ಗ ನೇಕಾರ ಸಂಘದ ಪರಿಯಿಂದ ೫ ನೇ ತಾರೀಖು ಶಿಷ್ಟಮಂಡಳವೊಂದು ಕಲೆಕ್ಟರರನ್ನು ಕಂಡು ತಮ್ಮ ಕಷ್ಟನಷ್ಟಗಳನ್ನು ತೋಡಿಕೊಂಡರು. ಆಗ ಚರ್ಚಿಸಲಾದ ೭ ಮುದ್ದೆಗಳನ್ನು ಕಲೆಕ್ಟರರು ಪೂರಯಿಸುವದಾಗಿ ಆಶ್ವಾಸನವಿತ್ತರೆಂದು ತಿಳಿಯುತ್ತದೆ.

ಧಾರವಾಡ ಜಿಲ್ಹಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ನಗರ ಪ್ರಮುಖರ ಸಭೆ ೮ ನೇ ತಾರೀಖು ಸೇರಿತ್ತು. ಶ್ರೀ ಹುಕ್ಕೇರಿಕರ, ಶಿರಸ್ತ್ರಿರ, ರಾ ಬ ನಾವಕಾರ ಮೊದಲಾದವರು ಉಪಸ್ಥಿತರಾಗಿದ್ದರು. ನಗರ ರಕ್ಷಕ ದಳವನ್ನು ಸ್ಥಾಪಿಸುವ ಬಗ್ಗೆ ಚರ್ಚೆಯಾಗಿ ಮತಭೇದವಾದ್ದರಿಂದ ಇನ್ನೊಮ್ಮೆ ಸಭೆ ಕೂಡಬೇಕೆಂದು ಗೊತ್ತಾಗಿ ಸಭೆ ಮುಂದರಿಸಲಾಯಿತು.

ಧಾರವಾಡದಲ್ಲಿ ಹಿಂದಕ್ಕೆ ವಿಜಯ ಸಿನೇಮಾ ಗೃಹದಲ್ಲಿ ಒಬ್ಬ ಬಾಲಿಕೆಯ ಮೇಲೆ ಅತ್ಯಾಚಾರ ಮಾಡಿ ಅವಳ ಕೊಲೆ ಮಾಡಿದನೆಂಬ ಆರೋಪಕ್ಕೆ ಗುರಿಯಾಗಿದ್ದ ಬಸಪ್ಪ ಸುಣಗಾರ ಇವನನ್ನು ಜಿಲ್ಹಾ ನ್ಯಾಯಾಧೀಶರು ನಿರ್ದೋಷಿಯೆಂದು ಬಿಡುಗಡೆ ಮಾಡಿದರು.

ಧಾರವಾಡ ಜಿಲ್ಹೆಯ ಕೆಲ ಭಾಗಗಳಲ್ಲಿ ಕೆರೆಗಳಲ್ಲಿ ಹೆಚ್ಚು ನೀರು ಹಿಡಿಯುವಂತೆ ಅವನ್ನು ಆಳಗೊಳಿಸುವ ಯೋಜನೆ ಸರಕಾರದವರು ಮಾಡಿದ್ದು ಆ ಕೆಲಸ ಅನೇಕ ಸ್ಥಳಗಳಲ್ಲಿ ನಡೆಯುವದಿದೆ. ಕೆರೆ ಕಡಿಸುವದು, ಪಿಳಿಗೆರೆ, ಕಾಲುವೆ ದುರಸ್ತಿ ಮಾಡಿಸುವದು ಮುಂತಾದವು ಕೂಡಲೆ ಮಾಡುವದಿದ್ದುದರಿಂದ ಈ ಕೆಲಸ ಅವಶ್ಯವೆನಿಸಿದ ಗ್ರಾಮದವರೆಲ್ಲ ಆಯಾ ತಾಲೂಕ ಮಾಮಲೇದಾರರಿಗೆ ಭೆಟ್ಟಿಯಾಗಿ ತಮ್ಮ ಬೇಡಿಕೆಗಳನ್ನು ನಿವೇದಿಸಬೇಕಾಗಿ ಕೋರಲಾಗಿದೆ.

ಹುಬ್ಬಳ್ಳಿ ಭಾರತ ಗಿರಣಿ ಕಾಮಗಾರ ಸಂಘದವರು ೬ ನೆಯ ತಾರೀಕಿನಿಂದ ಸಂಪು ಹೂಡಲಿದ್ದರಷ್ಟೆ. ಆದರೆ ಅವರ ಬೇಡಿಕೆಗಳ ವಿಚಾರಣೆಯನ್ನು ಕಲಹ ನಿವಾರಕ ಕೋರ್ಟಿಗೆ ಒಪ್ಪಿಸಿಬಿಟ್ಟದ್ದರಿಂದ ಸಂಪು ಪ್ರಾರಂಭವಾಗಲಿಲ್ಲ. ಬೋನಸ್ಸು ಕೊಡಿಸುವದರ ಸಂಬಂಧದಲ್ಲಿ ರಾಷ್ಟ್ರೀಯ ಗಿರಣಿಮಜದೂರ ಸಂಘದ ಕಾರ್ಯದರ್ಶಿಗಳು ಹೂಡಿದ ಉಪೋಷಣದ ಪಾರಣೆಯನ್ನೂ ಮಾಡಿದರು.

ಗದಗ ಬೆಟಗೇರಿ ಮುನಸಿಪಾಲಟಿಯ ಹಿಂದಿನ ಅಧ್ಯಕ್ಷರಾದ ಶ್ರೀ ಸಿ ಬಿ ಹೊನಗುಡಿಯವರ ಅಧಿಕಾರದ ಕಾಲಕ್ಕೆ ಸಾಕಷ್ಟು ಸದಸ್ಯರ ಅನುಮತಿಯಿಲ್ಲದೆ ಮಾನಪತ್ರ ಕೊಟ್ಟ ಸಮಾರಂಭದ ವೆಚ್ಚವನ್ನು ಅಧ್ಯಕ್ಷರು ತಮ್ಮ ಸ್ವಂತ ಜೇಬಿನಿಂದಲೆ ಕೊಡಬೇಕೆಂದು ಸರಕಾರದವರು ತಿಳಿಸಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ಹುಬ್ಬಳ್ಳಿ ನಗರ ಸಭೆಯ ಆಟ್ಟದಲ್ಲಿ ರವಿವಾರ ಸಾಯಂಕಾಲ ಎಂಜನಿಯರ ಶ್ರೀ ಎನ್. ಡಿ. ವಾಲೆಯವರ ಅಧ್ಯಕ್ಷತೆಯಲ್ಲಿ ಪ್ರೊ. ಆರ್. ಆರ್. ಉಮರ್ಜಿಯವರು ಪಂಚಾಂಗದ ರಹಸ್ಯವನ್ನು ಕುರಿತು ಇಂಗ್ಲಿಷಿನಲ್ಲಿ ಭಾಷಣ ಮಾಡಿದರು. ಇಂಥ ಶಾಸ್ತ್ರೀಯ ವಿಷಯಗಳನ್ನು ತಿಳಿದುಕೊಂಡು ಎಲ್ಲರೂ ಅದರ ಲಾಭ ಪಡೆಯಬೇಕೆಂದು ಕೇಳಿಕೊಂಡರು.

ಬೆಳಗಾವಿ ಮತ್ತು ಧಾರವಾಡ ಭಾಗದ ಲಂಚ ನಿರ್ಮೂಲನ ಶಾಖೆಯವರು ನವಲಗುಂದ ತಾಲೂಕ ಶಿರಕೋಳದಲ್ಲಿ ಆಹಾರ ಧಾನ್ಯ ಹಗೆದ ಪ್ರಕರಣದಲ್ಲಿ ಶ್ರೀ ಆರ್ ಎಸ್ ವೈದ್ಯ ಸರ್ಕಲ್ ಇನಸ್ಪೆಕ್ಟರ ಇವರನ್ನು ೨೦೦ ರೂಪಾಯಿ ಲಂಚ ತೆಗೆದುಕೊಳ್ಳುವಾಗ ಹಿಡಿದರೆಂದು ತಿಳಿಯುತ್ತದೆ.

ಬೆಳಗಾವಿ

ಬೆಳಗಾವಿ ನಗರ ಸಭೆಯ ಮುಂಗಡ ಪತ್ರಿಕೆಯ ಅಧಿವೇಶನದ ಕಾಲಕ್ಕೆ ಶ್ರೀ. ರಾಣೆ ಹಾಗು ಪುಣನವಳ್ಳಿಯವರನ್ನು ಅಪಹರಿಸಿಕೊಂಡೊಯ್ದು ಅಂದಾಜ ಪತ್ರಿಕೆಯನ್ನು ಪಾಸು ಮಾಡಿಕೊಂಡಿದ್ದರಷ್ಟೆ. ಈ ಅಪಹರಣಕ್ಕೆ ಸಂಬಂಧಪಟ್ಟವರೆಂದು ೮ ಜನರನ್ನು ಬಂಧಿಸಿರುವರೆಂದು ತಿಳಿಯುತ್ತದೆ.

ಒತ್ತಾಯದ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಕೈಕೊಳ್ಳಲು ಯಾವ ಯಾವ ಲೋಕಲ್ ಬೋರ್ಡಗಳು ಸಿದ್ಧವಿವೆಂಬದನ್ನು ತಿಳಿದುಕೊಳ್ಳಲು ಮುಂಬಯಿ ಸರಕಾರವು ಪತ್ರ ಕಳಿಸಿದ್ದಿತು. ಪ್ರಾಂತದಲ್ಲಿರುವ ೨೦ ಲೋಕಲ್ ಬೋರ್ಡಗಳಲ್ಲಿ ಈ ವರೆಗೆ ೮ ಲೋಕಲ್ ಬೋರ್ಡಗಳು ಈ ಯೋಜನೆಗೆ ಒಪ್ಪಿಗೆ ಕೊಟ್ಟಿವೆ. ಈ ಎಂಟು ಜಿಲ್ಹೆಗಳಲ್ಲಿ ಬೆಳಗಾವಿ ಜಿಲ್ಹಾ ಲೋಕಲ್ ಬೋರ್ಡ ಇರುವದು. ಈ ವೆಚ್ಚವನ್ನು ನೀಗಿಸುವದಕ್ಕಾಗಿ ಲೋಕಲ್ ಫಂಡನ್ನು ಎರಡಾಣೆಯಿಂದ ೩ ಆಣೆಗೇರಿಸಬೇಕೆಂದು ಬೆಳಗಾವಿ ಬೋರ್ಡಿನವರು ಗೊತ್ತುಪಡಿಸಿದ್ದಾರೆ.

ವಿಜಾಪುರ

ಕೊಲ್ಹಾರದಲ್ಲಿರುವ ಪ್ರಾಚೀನ ಶ್ರೀ ಅನಂತೇಶ್ವರ ದೇವಸ್ಥಾನದ ಜೀರ್ಣೋದ್ಧಾರ ೨೫ ವರುಷಗಳ ಹಿಂದೆ ಆಗಿತ್ತು ಆಗ ಶಿಖರಕಟ್ಟಿಸಿದ್ದಿಲ್ಲಾದ್ದರಿಂದ ಗುಡಿ ಈಗ ಗೀಳಾಗಿದೆ. ಅದುದರಿಂದ ಶಿಖರ ಕಟ್ಟಿಸುವದನ್ನು ಗೊತ್ತುಪಡಿಸಿ ಶ್ರೀ ಉಮರ್ಜಿ ಹಣಮಂತಾಚಾರ್ಯರ ಅಧ್ಯಕ್ಷತೆಯಲ್ಲಿ ಜೀರ್ಣೋದ್ಧಾರ ಸಮಿತಿಯೊಂದು ಸ್ಥಾಪಿತವಾಗಿದೆ. ಸ್ಥಳಿಕರು ಈಗಾಗಲೆ ಧನಸಹಾಯ ಮಾಡಿದ್ದು ಹೊರಗಿನ ಮಹನೀಯರೆಲ್ಲ ಉದಾರ ಹಸ್ತದಿಂದ ಧನ ಸಹಾಯಮಾಡಬೇಕಾಗಿ ಕೇಳಿಕೊಳ್ಳಲಾಗಿದೆ.

ವಿಜಾಪುರ ಜಿಲ್ಹಾ ಆಹಾರ ಪೂರೈಕೆ ಸಲಹೆಗಾರ ಸಮಿತಿಯ ಸಭೆ ಸೇರಿ ಜಿಲ್ಹೆಯಲ್ಲಿದ್ದ ಸುಮಾರು ೨ ಲಕ್ಷ ಚೀಲ ಜೋಳದಲ್ಲಿ ಆಕ್ಟೋಬರದ ವರೆಗೆ ಇಲ್ಲಿನ ಜನರಿಗೆ ಒಂದು ಲಕ್ಷ ಚೀಲ ಜೋಳ ಬೇಕಾಗುತಿದ್ದು ೧ ಲಕ್ಷ ಉಳಿತಾಯವಾಗುವದೆಂದು ಹೇಳಿ ಅದನ್ನು ಹೊರಗೆ ಕಳಿಸಬೇಕೆಂಬ ಸರಕಾರದ ಯೋಜನೆ ಬಗ್ಗೆ ಚರ್ಚೆ ಮಾಡಲಾಯಿತು. ಸ್ವಸರಕಾರದ ಅಂದಾಜು ಸರಿಯಿಲ್ಲೆಂದೂ ಇಷ್ಟು ಜೋಳ ಹೊರಗೆ ಕಳಿಸಿದರೆ ಜಿಲ್ಹೆಯಲ್ಲಿ ಕೊರತೆಯಾಗುವದೆಂದು ಅಭಿಪ್ರಾಯಪಡಲಾಯಿತು.

ಮುದ್ದೇಬಿಹಾಳದಲ್ಲಿ ಬಳಕೆಗಾರರ ಸಂಘವೊಂದು ಶ್ರೀ ಮರಾಠೆ ವಕೀಲರ ಅಧ್ಯಕ್ಷತೆಯಲ್ಲಿ ಸ್ಥಾಪಿತವಾಗಿದೆ. ಅದರ ಮುಖಾಂತರ ಆಹಾರ ಅರಿವೆ ಮೊದಲಾದ ನಿಯಂತ್ರಣ ಸಾಮುಗ್ರಿಗಳನ್ನು ಪೂರಯಿಸುವದರಲ್ಲಿ ಬರುವದು.

ಉತ್ತರ ಕನ್ನಡ

ಕಾಕಾ ಕಾಲೇಲಕರರು ಈ ಜಿಲ್ಹೆಯ ಪರಿಸ್ಥಿತಿಯನ್ನು ಅವಲೋಕಿಸಿ ಕಾಂಗ್ರೆಸ್ ಸಮಿತಿಗೆ ಕೆಲ ಸೂಚನೆ ಕಳಿಸಿದ್ದಾರೆ, ಜಿಲ್ಹೆಯಲ್ಲಿ ಹಿಂದುಸ್ತಾನೀ ಪ್ರಚಾರವನ್ನು ಜೋರಿನಿಂದ ಸಾಗಿಸುವದು ಗೊತ್ತಾಗಿ ಪ್ರಚಾರ ಸಂಘದ ಸದಸ್ಯರಾಗಲು ಬಿನ್ನವಿಸಲಾಗಿದೆ.

ಬನವಾಸಿಯ ಮೂಲ ಶಿಕ್ಷಣ ಶಾಲೆಯಿಂದ ಒಕ್ಕಲತನದ ಮುಲ್ಕಿ ಪರೀಕ್ಷೆಗೆ ಕುಳಿತ ೬ ವಿದ್ಯಾರ್ಥಿಗಳಲ್ಲಿ ೩ ಜನ ಹಾಗು ಸಾದಾ ಮುಲ್ಕಿ ಪರೀಕ್ಷೆಗೆ ಕುಳಿತ ೫ ಜನರಲ್ಲಿ ಇಬ್ಬರು ತೇರ್ಗಡೆ ಹೊಂದಿರುವರು. ಹೀಗೆ ಎರಡು ವರ್ಗಗಳನ್ನಿಟ್ಟುಕೊಂಡು ವಿದ್ಯಾರ್ಥಿಗಳನ್ನು ತರಬೇತು ಮಾಡಿದ್ದು ಅಭಿನಂದನೀಯವಾಗಿದೆಂದು ಓರ್ವರು ತಿಳಿಸುತ್ತಾರೆ. ಈ ಶಾಲೆಯನ್ನು ಬೇಗ ಬೇಸಾಯ ಪದ್ಧತಿಯ ಶಾಲೆಯನ್ನಾಗಿ ಮಾರ್ಪಡಿಸುವರೆಂದು ನಂಬಲಾಗಿದೆ.

ಕಳೆದ ಶುಕ್ರವಾರ ರಾತ್ರಿ ಜಲವಳ್ಳಿಗದ್ದೆಯಲ್ಲಿ ರೈತರ ಸಭೆಯಾಗಿ ಕೆಲ ನಿರ್ಣಯಗಳಾದವು. ಸುಮಾರು ೧೫ ಸಾವಿರ ನೋಟೀಸುಗಳು ಒಡೆಯರಿಂದ ರೈತರಿಗೆ ಕೊಡಲ್ಪಟ್ಟಿವೆ. ಅವರಲ್ಲಿ ೧೦ ಸಾವಿರ ರೈತರಿಗೆ ಭೂಮಿಯ ಕಬಜೆ ಸಿಕ್ಕಲಾರದು. ೫ ಸಾವಿರ ಜನರಿಗೆ ಸಿಕ್ಕಬಹುದು ಭೂಮಿಯನ್ನು ಕಳೆದುಕೊಂಡ ರೈತರಿಗೆ ಒಳಪ್ರದೇಶದಲ್ಲಿ ಪಡ ಭೂಮಿಗಳನ್ನು ಕೊಡಿಸಲಾಗುವದು. ರೈತರು ಒಕ್ಕಟ್ಟಿನಿಂದಿರಬೇಕೆಂದು ಮುಂತಾದ ಗೊತ್ತುವಳಿಗಳಾದವು.

ಹಿಂದೆ ಕೆಲಕಾಲ ಕುಮಟಾ ತಾಲೂಕ ಕಾಂಗ್ರೆಸ್ ಕಮಿಟಿ ಸದಸ್ಯರೂ ಮುನಸಿಪಾಲಟಿ ಸದಸ್ಯರೂ ಆಗಿದ್ದ ಪುಂಡಲಿಕ ಶೇಷಗಿರಿ ಶಾನಭಾಗರೂ ಕಳೆದ ಮಂಗಳವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶಿರ್ಶಿ ತಾಲೂಕಿನ ಹಲವು ಸ್ಥಳಗಳಲ್ಲಿಯ ಹರಿಜನರು ವಿಶ್ರಾಂತಿಗೃಹಗಳನ್ನು ಹೊಕ್ಕು ಅಸಭ್ಯರೀತಿಯಿಂದ ವರ್ತಿಸಿದರೆಂಬ ತಕರಾರು ಸಿರಸಿ ಹರಿಜನ ಸೇವಕ ಸಂಘದವರಿಗೆ ಬಂದದ್ದರಿಂದ ಆ ರೀತಿ ಅಸಭ್ಯತನದಿಂದ ವರ್ತಿಸಬಾರದು ಜನತೆಯ ಸಹಾನುಭೂತಿಯ ಬೆಂಬಲ ಪಡೆಯಬೇಕೆಂದು ಮುಂತಾಗಿ ಹರಿಜನ ಸಂಘದವರು ಕೇಳಿಕೊಂಡಿದ್ದಾರೆ.

ಬಳ್ಳಾರಿ

"ಆದವಾನಿಯಲ್ಲಿ ಶ್ರೀ ಎಲಿ ಮಲ್ಲೇಶಪ್ಪನವರ ಕನ್ನಡ ಹಾಯಸ್ಕೂಲಿನ ಉದ್ಘಾಟನ ಸಮಾರಂಭ ಕಲೆಕ್ಟರ ಶ್ರೀ ಅನಂತರಾಮನ್‌ರ ಅಧ್ಯಕ್ಷತೆಯಲ್ಲಿ ಜರಗಿತು. ಇಲ್ಲಿ ೩೦ ಸಾವಿರ ಕನ್ನಡಿಗರಿದ್ದರೂ ಈ ವರೆಗೆ ಕನ್ನಡ ಶಾಲೆಯಿರಲಿಲ್ಲ. ಶ್ರೀ ಮಲ್ಲೇಶಪ್ಪನವರು ೨ ಲಕ್ಷ ರೂಪಾಯಿ ಸಹಾಯ ಮಾಡಿ ಈ ಶಾಲೆಯ ಸಂಸ್ಥಾಪನೆಗೆ ಕಾರಣರಾದರು. ಡಿವಿಜನಲ್ ಇನಸ್ಪೆಕ್ಟರ ಶ್ರೀ ರಘುನಾಥನ್ನರು ಉದ್ಘಾಟನೆ ಮಾಡಿದರು. ಹಲವರು ಭಾಷಣ ಮಾಡಿ ಮಲ್ಲೇಶಪ್ಪನವರ ಔದಾರ್ಯವನ್ನು ಕೊಂಡಾಡಿದರು.

ಬಳ್ಳಾರಿ ಜಿಲ್ಹಾ ಆಹಾರ ಸಮಿತಿಯ ಸಭೆ ೩೧ ಕ್ಕೆ ಕೂಡಿತ್ತು. ಜಿಲ್ಹೆಯ ಸಿಂಪಿಗರಿಗೆ ತಯಾರಿ ಅರಿವೆ ತುಣಕು ಕೊಡುವದರ ಯೋಜನೆಯನ್ನು ಮಾಡಬೇಕೆಂದು ಶ್ರೀ ಹಾಜಿ ಮಹಮ್ಮದ ಇಸ್ಮಾಯಿಲ್‌ರು ಒತ್ತಾಯ ಪಡಿಸಿದರು. ರಮಜಾನ ಹಬ್ಬದ ಬಗ್ಗೆ ಮುಸಲ್ಮಾನರಿಗೆ ಹೆಚ್ಚಿಗೆ ಅರಿವೆ ಕೊಡಲಿಕ್ಕೆ ಅಧಿಕಾರಿಗಳಿಗೆ ಕೇಳಿಕೊಳ್ಳಲಾಯಿತು. ಹಬ್ಬಕ್ಕಾಗಿ ಹೆಚ್ಚಿಗೆ ಗೋದಿ ಮತ್ತು ಸಕ್ಕರೆಯನ್ನು ಕೊಡಬೇಕೆಂದು ಗೊತ್ತಾಯಿತು.

ಕನ್ನಡ ಸಂಸ್ಥಾನ

ದಾವಣಗೆರೆಯ ವ್ಯಾಪಾರಸ್ಥರೂ ನಮ್ಮ ಪತ್ರಿಕೆಯ ಎಜಂಟರೂ ಆಗಿರುವ ಶ್ರೀ ಬೆಳ್ಳೊಳ್ಳಿ ಮುರಿಗೆಪ್ಪನವರ ಕುಮಾರಿ ಕೊಟ್ರಮ್ಮನ ವಿವಾಹ ಚಿತ್ರದುರ್ಗದ ಶ್ರೀ ಹಾಲಪ್ಪನವರೊಡನೆ ದಿನಾಂಕ ೫ ರಲ್ಲಿ ಪ್ರಾಂತಾಧ್ಯಕ್ಷ ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲಿ ವಿಜೃಂಭಣೆಯಿಂದ ಜರಗಿತು.

ಹೈದಾಬಾದ ಕಾಂಗ್ರೆಸ್ಸಿನ ಮುಂದಾಳುಗಳಾಗಿದ್ದ ಸಯ್ಯದ ಸಿರಾಜುಲ್ಲಹಸನ ತಿರುಮಜಿಯವರು ಅಕಾಲ ಮತ್ತು ಅನಿರೀಕ್ಷಿತ ನಿಧನಹೊಂದಿದ ಬಗ್ಗೆ ಗಂಗಾವತಿ ತಾಲೂಕ ಕಾಂಗ್ರೆಸ ಸಮಿತಿಯ ಕಾರ್ಯ ನಿರ್ವಾಹಕ ಸಮಿತಿ ದುಃಖ ಪ್ರದರ್ಶಿಸಿತು.

ದಾವಣಗೆರೆಗೆ ರೇಲ್ವೆ ಗುಡ್ಸಿನ ಮೂಲಕ ಬರುವ ಸರಕುಗಳು ಇತ್ತೀಚಿಗೆ ಬಹಳ ಕಳವಾಗಹತ್ತಿವೆ. ಸೀಲು ಮಾಡಿದ ಪೆಟ್ಟಿಗೆಗಳು ಹಾಗೆಯೆ ಇದ್ದು ಒಳಗೆ ವಸ್ತ್ರ ಸರಕುಗಳು ಕಾಣೆಯಾಗಿರುತ್ತವೆ. ಇದರಿಂದ ವರ್ತಕರಿಗೆ ಬಹಳ ಹಾನಿಯಾಗಹತ್ತಿದೆ. ಓಪನ್ ಡೆಲಿವರಿ ಬೇಡಿದರೆ ಅಧಿಕಾರಿಗಳು ತಿಂಗಳಗಟ್ಟಲೆಯಾದರೂ ಉತ್ತರ ಕೊಡುವದಿಲ್ಲ. ಈ ಬಗ್ಗೆ ರೇಲ್ವೆ ಅಧಿಕಾರಿಗಳು ಕೂಡಲೆ ವಿಚಾರಮಾಡಿ ಈ ಕಳ್ಳತನವನ್ನು ನಿಲ್ಲಿಸಬೇಕಾಗಿ ವ್ಯಾಪಾರಸ್ಥರು ಬಿನ್ನವಿಸುತ್ತಾರೆ.

ದಾವಣಗೆರೆ ಗಿರಣಿಯ ವಖಾರಕ್ಕೆ ೬ ನೇ ತಾರೀಖು ಅಕಸ್ಮಾತ್ ಬೆಂಕಿಹತ್ತಿ ಲಕ್ಷಾಂತರ ರೂಪಾಯಿಗಳು ಹಾನಿಯಾಯಿತೆಂದು ತಿಳಿಯುತ್ತದೆ. ಬೆಂಕಿ ಹತ್ತಿದ್ದು ಗೊತ್ತಾದಕೂಡಲೆ ಆ ಜವಳಿ ಗಿರಣಿಯ ಮತ್ತು ಅಕ್ಕ ಪಕ್ಕದಲ್ಲಿರುವ ಸರಸ್ವತಿ ಕಾರಖಾನೆಗೆ ಬಂದ ಕೆಲಸಗಾರರೆಲ್ಲ ಬೆಂಕಿ ಆರಿಸಲು ಪ್ರಯತ್ನಿಸಿದರು. ಆದರೆ ನೀರಿನ ಅಭಾವವಿದ್ದದರಿಂದ ಬೆಳಗಿನ ವರೆಗೆ ಬೆಂಕಿ ಆರಲಿಲ್ಲ.

ಸಾಂಗಲಿ ಶಾಸನ ಸಭೆಯಲ್ಲಿ ಶಸ್ತ್ರಧಾರಣ ಪ್ರತಿಬಂಧ ಕಾಯದೆಯನ್ನು ರದ್ದುಗೊಳಿಸಬೇಕೆಂಬ ಅಧಿಕಾರೇತರರ ಗೊತ್ತುವಳಿ ಸಿರಾಕೃತವಾಯಿತು. ಮಾರಾಟಕರ ಮಸೂದೆ, ಕಾರಖಾನೆ ಮಸೂದೆ, ಕೆಲಸಗಾರರ ಪರಿಹಾರ ಮಸೂದೆ ಮತ್ತು ಉತ್ಪನ್ನಕರ ಹೆಚ್ಚಿಸುವ ಮಸೂದೆ ಮೊದಲಾದವುಗಳ ಬಹುಮತದಿಂದ ಸ್ವೀಕೃತವಾದವು. ಒಕ್ಕೂಟ ಯೋಜನೆಯನ್ನಭ್ಯಸಿಸಲು ಸಮಿತಿಯೊಂದು ರಚಿಸಲ್ಪಟ್ಟಿತು.

ಮಾರಾಟಕರ ಮತ್ತು ಉತ್ಪನ್ನಕರವನ್ನು ಹೆಚ್ಚಿಸುವ ಮಸೂದೆಗಳನ್ನು ನಿಷೇಧಿಸಲು ಸಾಂಗಲಿ ವರ್ತಕರು ಹರತಾಳಮಾಡಿ ಶಾಸನ ಸಭೆ ವರೆಗೆ ಮತಪ್ರದರ್ಶಿಸುತ್ತ ಹೋಗಿದ್ದರು.

ಸೊಂಡೂರ ಸಂಸ್ಥಾನ ಘಟನಾ ಸಮಿತಿಯಲ್ಲಿ ಸೇರಬೇಕೆಂಬ ಸಂಸ್ಥಾನ ಶಾಸನ ಸಭೆಯ ಸಲಹೆಯನ್ನು ಸೊಂಡೂರ ರಾಜರು [illegible] ... ಕಾರಣವಾಗಿದೆ. [illegible] ನಡೆ ಬಗ್ಗೆ ಘಟನಾ ಸಮಿತಿಯ ಅಧ್ಯಕ್ಷರೊಡನೆ ವಿಚಾರವಿನಿಮಯ ಮಾಡಲಿರುವರು.

ಕೊಲ್ಹಾಪುರ ಸಂಸ್ಥಾನ ಘಟನಾ ಸಮಿತಿಯಲ್ಲಿ ಸೇರಬೇಕೊ ಹೇಗೆಂಬದನ್ನು ಇನ್ನೂ ನಿರ್ಧರಿಸಿಲ್ಲೆಂದು ಕೊಲ್ಹಾಪುರ ಸಂಸ್ಥಾನದ ಘಟನಾ ಸಲಹೆಗಾರರಾದ ಶ್ರೀ ಎ. ಬಿ. ಲಠ್ಠೆಯವರು ಹೇಳಿದರು.

ಕೊಲ್ಹಾಪುರ ಸ್ವತಂತ್ರವಾಗುವದರ ಸಂಬಂಧದಲ್ಲಿಯೂ ಇನ್ನೂ ಯಾವದೇ ನಿರ್ಣಯ ತೆಗೆದುಕೊಂಡಿಲ್ಲೆಂದು ಅವರು ಹೇಳಿದರು. ಸಂಸ್ಥಾನದಲ್ಲಿ ಇನ್ನೂ ಘಟನಾತ್ಮಕ ಸುಧಾರಣೆಗಳಾಗಲಿವೆಂದು ಹಬ್ಬಿದ ಸುದ್ದಿ ನಿರಾಧಾರವೆಂದೂ ಅವರು ಹೇಳಿದರು.

ಕಳೆದ ೮–೧೦ ತಿಂಗಳಗಳಲ್ಲಿ ಜತ್ತ ಸಂಸ್ಥಾನದಲ್ಲಿ ೩೦ ಕ್ಕಿಂತ ಹೆಚ್ಚು ದರೋಡೆಗಳು ಸಂಭವಿಸಿವೆ. ಇವುಗಳ ತಪಾಸಣೆ ಬಹಳ ಮಂದವಾಗಿ ಸಾಗಿದೆ, ಸಂಸ್ಥಾನದ ನಿಷ್ಪಕ್ಷ ನ್ಯಾಯಾಧೀಶರಾಗಿದ್ದಾ. ಅಂಕಲೀಕರರು ವಿಲಂಬ ಮಾಡದೆ ಈ ವಿಷಯದಲ್ಲಿ ವಿಚಾರಣೆ ನಡೆಸಬೇಕೆಂದು ರಾಜೇಸಾಹೇಬರಿಗೆ ಬಿನ್ನವಿಸಿಕೊಂಡಿದ್ದಾರೆ.

ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಜಗನ್ನಾಥ ಶಂಕರಶೇಟ ಶಿಷ್ಯವೃತ್ತಿ ಪಡೆದ ಕನ್ನಡಿಗ

ಶ್ರೀ. ವೆಂಕಟಾಚಲ ದಾತಾರ

ಇದೇ ಮಾರ್ಚ ತಿಂಗಳಲ್ಲಿ ಜರುಗಿದ ಮುಂಬಯಿ ವಿಶ್ವವಿದ್ಯಾಲಯದ ಮ್ಯಾಟ್ರಿಕ್ಯುಲೇಶನ ಪರೀಕ್ಷೆಯಲ್ಲಿ ಸಂಸ್ಕೃತದಲ್ಲಿ ೧೦೦ಕ್ಕೆ [illegible] ಗಳನ್ನು ಪಡೆದು ವಿಶ್ವವಿದ್ಯಾಲಯಕ್ಕೇ [illegible] ಲನೇ ನಂಬರು ಆ ವಿಷಯದಲ್ಲಿ ಬಂದಿರುವರು. ಇವರಿಗೆ ಜಗನ್ನಾಥ ಶಂಕರಶೇಟ ಸಂಸ್ಕೃತ ಶಿಷ್ಯವೃತ್ತಿ ದೊರೆತಿದೆ. ಇವರು ಮುಂಬಯಿ ರೀಸರ್ಚ ಲೆಬೊರೇಟರಿಯ ಒಡೆಯರೂ ಬೆಳಗಾವಿಯ ಸುಪ್ರಸಿದ್ಧ ದಾತಾರ ಮನೆತನದವರೂ ಆಗಿರುವ ಶ್ರೀ. ಅಶ್ವತ್ಥರಾಯರ ಮಕ್ಕಳು. ಈ ಕನ್ನಡ ವಿದ್ಯಾರ್ಥಿಗಳ ಅಭಿನಂದನೀಯ ಯಶಸ್ಸಿಗಾಗಿ ಸಂತೋಷಿಸುತ್ತೇವೆ.

ನೇಕಾರಿಕೆಯ ಉದ್ಯಮ

(೬ ನೇ ಪುಟದಿಂದ)

ಈ ಪರಿಶ್ರಮಕ್ಕೆ ಯಾವ ವಿಧದಿಂದ ಹಾನಿಯುಂಟಾಗದಂತಿದ್ದರೆ ಮಿಲ್ಲುಗಳಿರಲಿಕ್ಕೆ ಯಾವ ಅಡ್ಡಿಯೂ ಇಲ್ಲ. ನಮಗೆ ಸಾಕಷ್ಟು ಬಟ್ಟೆ [illegible] ಮಾಡುವುದಕ್ಕೆ ಸದ್ಯಕ್ಕೆ ಮಿಲ್ಲುಗಳು ಅವಶ್ಯ ಬೇಕಾಗಿವೆ. ಚೈನಾ ದೇಶವು ಅನೇಕ ವರ್ಷಗಳವರೂ ಶತ್ರುವಿನ ಕೈಯಲ್ಲಿ ಸಿಗದಿದ್ದಕ್ಕೆ ಈ ವಿಕೇಂದ್ರೀಕರಣವೇ ಮೂಲ ಕಾರಣ.

ನೇಕಾರ ಹಂತ್ರಮದ ವಿಶಿಷ್ಟತೆ ನಮ್ಮ ದೇಶದಲ್ಲಿ ಉಳಿಯಬೇಕಾದರೆ, ಬೆಳೆಯಬೇಕಾದರೆ ಪ್ರಭುತ್ವದವರು ಕೈಮಗ್ಗದ ನೇಕಾರರಿಗೆ ಸಾಕಷ್ಟು ನೂಲನ್ನು ಅತಿಯೋಗ್ಯ ಬೆಲೆಗೆ [illegible] (೨) ಮಿಲ್ಲುಗಳಲ್ಲಿ "ಧಾಟೀ" ಮತ್ತು [illegible] ನೇಯುವುದನ್ನು ನಿಲ್ಲಿಸಬೇಕು. (೩) [illegible] ಹೆಚ್ಚಿನ ಅಗಲವುಳ್ಳ ಬಟ್ಟೆಯನ್ನು [illegible] ಳಲ್ಲಿ ನೇಯಿಸಬಾರದು. (೪) ಬಣ್ಣದ [illegible] ಗಳನ್ನು ಮಿಲ್ಲುಗಳಲ್ಲಿ ನೇಯಿಸಬಾರದು. ([illegible] ನಂಬರನೂಲನ್ನು ಮಿಲ್ಲುಗಳಲ್ಲಿ [illegible].

ರಾಯಚೂರಿನ ಪ್ರಮುಖ ವ್ಯಾಪಾರಿಗಳಾದ ಶ್ರೀ ಗುಲ್ಬಾರ ತಿಮ್ಮಯ್ಯನವರನ್ನು [illegible] ತಾರೀಖು ಪೋಲೀಸರು ಪೋಲೀಸ [illegible] ಎರಡು ಗಂಟೆ [illegible] ಬಿಟ್ಟರು. ಅವರ [illegible] ಜೋಳ ಭತ್ತ ಜಪ್ತ [illegible] ಗಳ ಹರದಿ ಮತ್ತು [illegible] ದಾರರಿಗೆ ಮತ್ತು [illegible]

ಹಿಂದುಸ್ಥಾನ

ಮುಂಬಯಿ

ಮುಂಬಯಿ [illegible] ಕೆಲವು [illegible] ನಡೆದಿದೆ. [illegible]

ಮುಂಬಯಿ [illegible] ಶ್ರೀ [illegible] ಅಧ್ಯಕ್ಷರು; [illegible] ನೇಮಿಸಿದ್ದಾರೆ. [illegible] ಕಾರ್ಯದರ್ಶಿಗಳಾಗಿರುವರು. [illegible] ಈ ವಿಭಾಗಕ್ಕೆ ಕಳಿಸಬೇಕು.

[illegible] ವಿಜಾಪುರಕ್ಕೆ [illegible], ಧಾರವಾಡಕ್ಕೆ [illegible], ಕಾರವಾರ [illegible] ಕಳಿಸಲಾಗಿದೆಂದು ಸರಕಾರದ [illegible] ಹೊರಟಿದೆ.

[illegible] ಪ್ರಾಂತದಲ್ಲಿ ೧೧ ಸಾವಿರ ಟನ್ ಗೋದಿಯು [illegible] ೧೩೫೦೦ ಟನ್ ಆಹಾರ ಧಾನ್ಯ [illegible] ಬಂದಿದ್ದು ಅದರಲ್ಲಿ ೬೦೦೦ ಟನ್ [illegible] ಕೊಡಲಾಗಿದೆ.

ಹಿಂದೀ [illegible] ಶಿಕ್ಷಣ ಕೊಡಲು ಪೋರಬಂದರದ ಮಹಾರಾಜರ ಯೋಜನೆಯನ್ವಯ ರಾಜಕೋಟದಲ್ಲಿ ಒಂದು [illegible] ೬ ನೇ ತಾರೀಖು ತೆರೆಯಲ್ಪಟ್ಟಿತು. ಅದಕ್ಕೆ [illegible] ಹೆಸರು ಇಡಲಾಗಿದೆ. [illegible] ವಿಜಯ [illegible] ಹೆಸರು ಕೊಡಲಾಗಿದೆ.

[illegible] ರವಿವಾರ [illegible] ಸಂಭವಿಸಿದ್ದರಿಂದ [illegible] ಗಂಟೆ ಕರ್ಫ್ಯೂ ಜಾರಿಮಾಡಲಾಗಿದೆ.

[illegible] ವೈದ್ಯಕೀಯ ಪರಿಚಾರಿಕೆಯರ [illegible] ಡಾಕ್ಟರರ ಹಾಗು ವೈದ್ಯರ ಗೌರವ ವೇತನವನ್ನು [illegible] ರೂಪಾಯಿ ಮಾಡಿದ್ದಾರೆ. ಆದರೆ ಜಿಲ್ಲಾ ಲೋಕಲ್ ಬೋರ್ಡು ಹೆಚ್ಚಿನ ವೆಚ್ಚದಲ್ಲಿ [illegible] ಭಾಗ ವಹಿಸಿದರೆ ಮಾತ್ರ ಈ ಹೆಚ್ಚಿನ ವೇತನ [illegible] ಯಲ್ಲಿ ಬರುವದು.

[illegible] ಹಾಗು [illegible] ನದಿಗಳಿಂದ [illegible] ಹಳ್ಳಿಗಳಿಗೆ ನೀರು ಪೂರೈಸಲು ಮುಂಬಯಿ ಸರಕಾರದವರು [illegible] ವಿಚಾರ ನಡೆಸಿದ್ದಾರೆ. ಇದಕ್ಕೆ ಒಂದು ಕೋಟಿ ರೂಪಾಯಿ ಪ್ರಾರಂಭಿಕ ಹಾಗು [illegible] ಸಾವಿರ ರೂಪಾಯಿ ವಾರ್ಷಿಕ ವೆಚ್ಚ ಬರುವದು.

[illegible] ಕೊರತೆಯ ಮೂಲಕ [illegible] ಅಕ್ಕಿಯ [illegible] ಎರಡು [illegible] ವಾರಕ್ಕೆ [illegible] ಕೊಡಲಾಗುವದು.

[illegible] ಕಳೆದ ಅನೇಕ ತಿಂಗಳು [illegible] ಜಿಲ್ಲೆಯಲ್ಲಿ ಪ್ಲೇಗ [illegible] ಸುದ್ದಿ ಬಂದಿದೆ.

ಮದ್ರಾಸ

ಮದ್ರಾಸದಲ್ಲಿಯ ಬಕಿಂಗಹ್ಯಾಮ ಮತ್ತು ಕರ್ನಾಟಿಕ ಗಿರಣಿಗಳ ಕೆಲಸಗಾರರ ಸಂಘ [illegible] ಮದ್ರಾಸ ಕೂಲಿಕಾರ ಸಂಘವನ್ನು ಮದ್ರಾಸ ಸರಕಾರ ಅಕ್ರಮ ಸಂಸ್ಥೆಯನ್ನಾಗಿ ಸಾರಿದೆ. ಈ ಎರಡು ಗಿರಣಿಗಳ ೧೫೦೦೦ ಜನ ಕೂಲಿಕಾರರು [illegible] ಬೋನಸನ್ನು ಕೊಟ್ಟು ಹೆಚ್ಚಿನ ಸಂಬಳ ಕೇಳಿ ಮೂರು ತಿಂಗಳ [illegible] ಸಂಪುಹೂಡಿದ್ದರು.

ಮದ್ರಾಸ ಕೂಲಿಕಾರಸಂಘದ ಕಟ್ಟಡವನ್ನು [illegible] ಬಾಗಿಲಿಗೆ ಕೀಲಿ [illegible] ಕಾರ್ಯ [illegible] ಮಾಡಲಾಗಿದೆ.

ಸಂಯುಕ್ತಪ್ರಾಂತ

ಭಾರತದಲ್ಲಿ ಸದ್ಯಕ್ಕೆ ಸ್ಥಿತ್ಯಂತರವಾಗುತ್ತಿರು ರಾಜಕೀಯ ಪರಿಸ್ಥಿತಿಯನ್ನು ನೋಡಿ ಹಿಂದೀ ರಾಷ್ಟ್ರೀಯ ಮಹಾಸಭೆಯ ಘಟನೆಯ ತಿದ್ದುಪಡಿಯನ್ನು ಈಗ ಪರಿಶೀಲಿಸುವ ಕಾರ್ಯವನ್ನು ಮುಂದೂಡಲಾಗಿದೆಂದು ತಿಳಿಯುತ್ತದೆ. ಮುಸಾ[illegible] ಹೆಚ್ಚು ಶಿಸ್ತನ್ನು ಕಾಯ್ದುಕೊಳ್ಳಲು ಉಗ್ರೋಪಾಯಗಳನ್ನು ಕೈಕೊಳ್ಳಲಾಗುವದು.

ಪಿಲಭಿತ್ ಜಿಲ್ಲೆ ಗೋಬೆಲ್ ಹಳ್ಳಿಯಲ್ಲಿ ೭ ನೇ ತಾರೀಖಿನ ದಿನ ಒಬ್ಬ ಸ್ತ್ರೀಯಳನ್ನು ಇರಿದ ಕಾರಣ ಉಭಯ ಸಮಾಜಗಳಲ್ಲಿ ಜಾತೀಯ ದೊಂಬಿ ಸಂಭವಿಸಿ ೮ ಜನ ಸತ್ತರು. ೭ ಜನರಿಗೆ ಗಾಯಗಳಾಗಿವೆ. ಪೋಲೀಸ ಮತ್ತು ಸೈನಿಕರೊಂದಿಗೆ ಜಿಲ್ಲಾಧಿಕಾರಿಗಳು ಗಲಭೆಸ್ಥಳಕ್ಕೆ ಹೋಗಿರುವರು. ಉಪಮಂತ್ರಿಗಳಾದರಾವುತರೂ ಪರಿಸ್ಥಿತಿಯನ್ನು ಸರಿಗೊಳಿಸಲು ಹೋಗಿರುವರು.

ಆನಗಡದ ರಾಜಾಸಾಹೇಬರು [illegible] ರವೀಂದ್ರನಾಥ ಟಾಗೂರರ ಸ್ಮಾರಕ ನಿಧಿಗೆ ೭೬ ಸಾವಿರ ರೂಪಾಯಿ ಕೊಟ್ಟಿದ್ದಾರೆ.

ಬಿಹಾರ

೮ ನೇ ತಾರೀಖು ಪಾಟಣಾದಲ್ಲಿ ಕಟ್ಟಿಗೆಯ ಒಂದು ಪೆಟ್ಟಿಗೆಯಲ್ಲಿ ೧೬ ಸಜೀವ ಬಾಂಬ ಸಿಕ್ಕಿದ್ದು ಪೋಲೀಸರು ಆ ಸಂಬಂಧದಲ್ಲಿ ಪೂರ್ಣಿಯಾವಾಸದಿಂದ ಒಬ್ಬ ಭದ್ರಾಧಿಕಾರಿಯನ್ನು ಬಂಧಿಸಿದ್ದಾರೆ. ಪೆಟ್ಟಿಗೆಯ ಮೇಲೆ ಕಾಚಿನ ಸಾಮಾನುಗಳು ಎಚ್ಚರ ಎಂದು ಬರೆಯಲಾಗಿತ್ತು.

ಚಂಪಾರಣ್ಯ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಕಾಂಗ್ರೆಸ್ಸು ೨೭ ಸ್ಥಾನಗಳಲ್ಲಿ ೨೩ ಸ್ಥಾನಗಳನ್ನು ದೊರಕಿಸಿ ಪ್ರಚಂಡ ವಿಜಯ ಸಂಪಾದಿಸಿರುವದು.

ಪಾಖರರ ಮತ್ತು ಪೋಲೀಸರಲ್ಲಿ ಪಾಟಣಾದಲ್ಲಿ ೧೧ ನೇ ತಾರೀಖು ನಡೆದ ತಿಕ್ಕಾಟದಲ್ಲಿ ಗಾಯಗೊಂಡ ಇಬ್ಬರು ಪಾಖರರು ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಗಾಯಗೊಂಡ ಪೋಲೀಸರು ಆಸ್ಪತ್ರೆಯಲ್ಲಿರುವರು. ಪಾಖರ ಶಿಬಿರದ ಮೇಲೆ ದಾಳಿ ಮಾಡಿ ೨೪ ಜನರನ್ನು ಸೆರೆ ಹಿಡಿಯಲಾಯಿತು.

ಬಂಗಾಲ

ಕಲಕತ್ತೆಯಲ್ಲಿ ೯ ನೇ ತಾರೀಖು ೪ ದುಂಗಗಳು ನಡೆದವು. ಮುಚಿಪಾರು ಭಾಗದಲ್ಲಿ ಗುಂಡಿನ ಅತ್ಯಾಚಾರದಿಂದ ಒಬ್ಬನ ಮರಣವಾಗಿದ್ದು ೧೧ ಜನರನ್ನು ಬಂಧಿಸಲಾಗಿದೆ. ಬಜಾರದಲ್ಲಿ ಇರಿತದಿಂದ ಒಬ್ಬ ಸತ್ತಿದ್ದು ೯ ಜನರನ್ನು ಗಾಯಪಡಿಸಲಾಗಿದೆ. ಎಂಟಲ್ಲಿ ಭಾಗದಲ್ಲಿ ಒಬ್ಬನ ಅಪಹಾರವಾಗಿದ್ದು ಇಬ್ಬರನ್ನು ಅಗಿಂದಾಗ ಸೆರೆ ಹಿಡಿಯಲಾಯಿತು.

ಕಲಕತ್ತೆಯ ಚೌಬಜಾ ಹಾಗು ಪಾರ್ಕ ದೀದಿ ಭಾಗಗಳಲ್ಲಿ ರವಿವಾರ ದಿವಸ ಇರಿತದಿಂದ ಇಬ್ಬರು ಸತ್ತಿದ್ದು ೨೫ ಜನರನ್ನು ಬಂಧಿಸಲಾಗಿದೆ.

ಗಡಿ ನಿರ್ಣಯ ಸಮಿತಿಯ ಸಮಕ್ಷದಲ್ಲಿ ಮುಸಲ್ಮಾನ ಬಹುಸಂಖ್ಯಾಕ ದೇಶವವರ ಹೇಳಿಕೆಯನ್ನು ಇಡುವದಕ್ಕಾಗಿ [illegible] ಇವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ಸ್ಥಾಪಿತವಾಗಿದೆ.

ಮದ್ರಾಸದಲ್ಲಿ ಕಳೆದ ತಿಂಗಳ ಡಾ. ರಾಜೇಂದ್ರಪ್ರಸಾದ ಹಾಗು ರಾಜಾಜಿಯವರು [illegible] ಸಭೆಯಲ್ಲಿ ಸಾರ್ವಜನಿಕ ಭಾಷಣ ಮಾಡಲು ಬಂದಾಗ ಗೊಂದಲಿಸಿ ಸಭೆ ಮುರಿದಿದ್ದಕ್ಕೆ ಬಿ ಮತ್ತು ಸಿ ಗಿರಣಿಗಳ ಇಬ್ಬರು ಕೆಲಸಗಾರರಿಗೆ ೨೦ ರಿಂದ ೫೦ ರೂ ದಂಡ ವಿಧಿಸಲಾಯಿತು.

ಮದ್ರಾಸ ಸರಕಾರಕ್ಕೆ ೧೯೪೬—೪೭ ರಲ್ಲಿ ಹೊರಾಟದ ಸಂಬಂಧದಲ್ಲಿ ೬೫೦ ಲಕ್ಷ ರೂ. ಹಾನಿಯಾಗಿದೆ. ಈ ಹಣದಲ್ಲಿ ಕೆಲವೊಂದು ಹಿಂದಿನ ಸಾಲಿನದೂ ಉಂಟು.

ಕೆಳಗಿನ ಸರಕಾರಿ ಅಧಿಕಾರಿಗಳಿಗೆ ಬಡತಿ ಕೊಡಬೇಕಾದರೆ ಯುದ್ಧಸೇವೆಗಿಂತ ಅವರ ಅರ್ಹತೆಯನ್ನು ಲಕ್ಷಿಸಬೇಕೆಂದು ಮದ್ರಾಸ ಸರಕಾರದವರು ಎಲ್ಲ ಖಾತೆಗಳಿಗೆ ತಿಳಿಸಿದ್ದಾರೆ.

ಹೊಸದಿಲ್ಲಿ

ಲಾರ್ಡ ಮೌಂಟಬ್ಯಾಟನ್ನರು ೧೩ ನೇ ತಾರೀಖು ಶುಕ್ರವಾರ ಸಿಮ್ಲಾಕ್ಕೆ ತೆರಳಿ ೧೭ಕ್ಕೆ ಅಲ್ಲಿಂದ ತಿರುಗಿ ಬರುವರು. ಕೇಂದ್ರ ಮಂತ್ರಿಮಂಡಳದ ಸಭೆ ಕೆಲಸವನ್ನು ಮುಗಿಸಿ ೧೮ಕ್ಕೆ ಕಾಶ್ಮೀರ ಮಹಾರಾಜರ ಆಮಂತ್ರಣ ಸ್ವೀಕರಿಸಿ ಕಾಶ್ಮೀರ ಸಂಚಾರಕ್ಕೆ ಹೋಗುವರು. ೨೩ಕ್ಕೆ ದಿಲ್ಲಿಗೆ ಬರುವರು.

ಪಾಕಿಸ್ತಾನ ಘಟನಾ ಸಮಿತಿ ದಿಲ್ಲಿಯಲ್ಲಿ ಸೇರಬಾರದು. ದೇಶದ ಪರಿಸ್ಥಿತಿಯನ್ನು ಮನಃ ಹದಗೆಡಿಸಬಾರದೆಂದು ಮುಂತಾಗಿ ಕೇಂದ್ರ ಶಾಸನಸಭೆಯ ಸದಸ್ಯರಾದ ಶ್ರೀ ಮೋಹನಲಾಲ ಸಕ್ಸೇನಾ ಅವರು ಅಭಿಪ್ರಾಯಪಟ್ಟಿದ್ದಾರೆ.

ಕೋಲಂಬೋ ಬಂದರದಿಂದ ಒಳನಾಡಿಗೆ ಅಕ್ಕಿ ಹಿಟ್ಟು ಮುಂತಾದ ಆಹಾರ ಸಾಮಗ್ರಿಗಳನ್ನು ಹೊತ್ತುಕೊಂಡು ಹೊರಟಿದ್ದ ರೇಲ್ವೆ ಗಾಡಿಯೊಂದನ್ನು ಸುಮಾರು ೧೫೦ ಜನರು ತಡೆದು ಸುಲಿಗೆ ನಡೆಸಿದರು. ಹಾನಿಯೆಷ್ಟಾಗಿದೆಂಬುದು ಗೊತ್ತಾಗಿಲ್ಲ.

ಸಿಂಗಾಪುರದಲ್ಲಿ ಸ್ಥಾಪಿತವಾಗಿದ್ದ ಆಝಾದ ಹಿಂದ ಸರಕಾರದ ಅಧ್ವರ್ಯುಗಳಾದ ನೇತಾಜಿ ಸುಭಾಷ ಬೋಸರ ಸ್ಮಾರಕಕ್ಕಾಗಿ ಮಲಯದ ಹಿಂದೀಯರು ೫ ಲಕ್ಷ ಡಾಲರುಗಳ ಒಂದು ಯೋಜನೆಯನ್ನು ಸ್ವೀಕರಿಸಿದ್ದಾರೆ.

ಸಿಂಹಳದ ತಿರಿಂಕೋಮಲಿ ನೌಕಾಪಡೆಯ ಬ್ರಿಟಿಶ್ ಅಧಿಕಾರಿಗಳು ಸಿಂಹಳದಲ್ಲಿಯ ಅಲ್ಲಲ್ಲಿಯ ಸಂಪನ್ನು ಮುರಿಯುವದಕ್ಕಾಗಿ ತಮ್ಮ ಕೈಕೆಳಗಿನ ನಾವಿಕರನ್ನು ಉಪಯೋಗಿಸಿಕೊಳ್ಳುವ ಪ್ರಯತ್ನದಲ್ಲಿ ಅವರನ್ನು ಕೆಟ್ಟ ರೀತಿಯಿಂದ ನಡೆಸಿಕೊಂಡದ್ದಕ್ಕಾಗಿ ಸುಮಾರು ೫೦೦ ನಾವಿಕರು ೮ ನೇ ತಾರೀಖು ದಂಗೆ ಪ್ರಾರಂಭಿಸಿದರು.

೯ ನೇ ತಾರೀಖು ಕೇಂದ್ರ ಸರಕಾರದ ಕಚೇರಿಗಳೆದುರು ಮುಷ್ಕರಪ್ರದರ್ಶನ ಮಾಡುತ್ತಿದ್ದ ೧೪ ಜನ ಸಾಧುಗಳನ್ನು ಬಂಧಿಸಲಾಯಿತು.

ಸಿಂಹಳದ ಹಿಂದುಸ್ಥಾನ ಸರಕಾರದ ಪ್ರತಿನಿಧಿಗಳಾಗಿದ್ದ ಎಂ ಎಸ್ ಅಣೆಯವರು ಇದೇ ತಿಂಗಳ ಕೊನೆಗೆ ತಮ್ಮ ಸ್ಥಾನವನ್ನು ಬಿಟ್ಟುಗೊಡುವರು. ಘಟನಾ ಸಮಿತಿಯಲ್ಲಿ ತಮ್ಮ ಪ್ರತಿನಿಧಿಗಳಾಗಬೇಕೆಂದು ದಕ್ಷಿಣ ಸಂಸ್ಥಾನಗಳ ನರೇಂದ್ರರೂ ಪ್ರಜರೂ ಮಾಡಿಕೊಂಡ ಬಿನ್ನಹನನ್ನು ಅಣೆಯವರು ಮನ್ನಿಸಿದ್ದಾರೆ. ಜುಲೈ ೮ ಕ್ಕೆ ಅವರು ಸಿಂಹಳದಿಂದ ಹಿಂದುಸ್ಥಾನಕ್ಕೆ ಹೊರಡುವರು.

ಕೇಂದ್ರ ವೇತನ ಮಂಡಳದ ಸಿಫಾರಸುಗಳನ್ನು ಮದ್ರಾಸ ಸರಕಾರ ಸ್ವೀಕರಿಸುವದಿಲ್ಲೆಂದು ತಿಳಿಯುತ್ತದೆ.

ಫೆಡರಲ್ ಕೋರ್ಟಿನ ನ್ಯಾಯಾಧೀಶರಾಗಿದ್ದ ಸರ್ ಮಹಮ್ಮದ ಝಫರುಲ್ಲಾ ಖಾನರು ರಾಜೀನಾಮೆ ಕೊಟ್ಟಿದ್ದರಿಂದ ಗವರ್ನರ ಜನರಲ್‌ರು ಪಾಟಣಾ ಹಾಯಕೋರ್ಟಿನ ನ್ಯಾಯಾಧೀಶ ಸರ್ ಸಯ್ಯದ ಫಜಲಲ್ಲಿಯವರನ್ನು ಫೆಡರಲ್ ಕೋರ್ಟಿನ ನ್ಯಾಯಾಧೀಶರನ್ನಾಗಿ ನೇಮಿಸಿದ್ದಾರೆ.

ವನಸ್ಪತಿ ತುಪ್ಪದ ಸಂಬಂಧದಲ್ಲಿ ವಿಚಾರಣೆ ಮಾಡಿ ವರದಿಯನ್ನೊಪ್ಪಿಸಲು ಹಿಂದುಸ್ಥಾನ ಸರಕಾರದ ಆಹಾರ ಖಾತೆಯವರು ಎರಡು ಕಡೆ ಯೋಜನೆ ಮಾಡಿದ್ದಾರೆ.

ಹಿಂದುಸ್ಥಾನ ಸರಕಾರದಲ್ಲಿ ಕೆಲಸ ಮಾಡ ಬಯಸುವರೂ ಇಲ್ಲವೆ ಪಾಕಿಸ್ತಾನ ಸರಕಾರದಲ್ಲಿ ರಬಯಸುವರೂ ಎಂಬುದಾಗಿ ಕೇಂದ್ರ ಸರಕಾರದ ನೌಕರರ ಅಭಿಪ್ರಾಯವನ್ನು ಇನ್ನು ಸ್ವಲ್ಪ ದಿನದಲ್ಲಿ ಕೇಳಲಿರುವರೆಂದು ತಿಳಿಯುತ್ತದೆ. ಯಾವದೇ ಸರಕಾರದಲ್ಲಿ ಸೇವೆಯನ್ನೊಲ್ಲುವರಿಗೆ ಸ್ವಾತಂತ್ರ್ಯ ಕೊಡಲಾಗುವದು. ಆದರೆ ಆಯಾ ಸರಕಾರಗಳು ತಮ್ಮ ಮನಸಿಗೆ ಬಂದವರನ್ನು ಆರಿಸಿಕೊಳ್ಳಬಹುದು.

ಫ್ರಾನ್ಸಿನಲ್ಲಿ ಗ್ಯಾಸ್, ರೇಲ್ವೆ ಮೊದಲಾದ ಕೂಲಿಕಾರರು ಸಂಪು ಹೂಡಿದ್ದು ಗಾಡಿಗಳೇ ನಿಂತು ಹೋಗುವಂತಾಗಿದೆ. ತಮ್ಮ ಬೇಡಿಕೆಗಳನ್ನು ಸರಕಾರದಿಂದ ಹೊರತಕ್ಕದ್ದರ ಫಲವಿದು.

ಆಸಾಮ

ದಾಸ ಮತ್ತು ದೇಲಿ ಅವರ ಪತ್ರಿಕೆಯ ಸ್ಪೆಶಲ್ ಪ್ರತಿನಿಧಿಗಳಾದ ಅಬ್ದುಲ್ ಕಾದರ ಚೌಧರಿಯವರ ಮೇಲೆ ಅಸಾಮ ಸರಕಾರದವರು ನೋಟೀಸ ಬಜಾಯಿಸಿ ಪತ್ರಿಕೆಗಳಿಗೆ ಸುದ್ದಿ ಕಳಿಸುವ ಮೊದಲು ಚೀಫ ಸೆಕ್ರೆಟರಿ ಇಲ್ಲವೆ ಡೆಪ್ಯುಟಿ ಕಮೀಶನರರಿಗೆ ಕಳಿಸಿ ಕೊಡಬೇಕೆಂದು ವಿಧಿಸಿದ್ದಾರೆ.

ಅಸಾಮ ಲೀಗ ಕೌನ್ಸಿಲ್ಲಿನವರು ಜೂನ ೧೦ ರಿಂದ ತಮ್ಮ ಚಳವಳಿಯನ್ನು ಹಿಂತೆಗೆದುಕೊಳ್ಳಬೇಕೆಂದು ನಿರ್ಧರಿಸಿದರು. ಅಸಾಮ ಸಾರ್ವಜನಿಕ ಸುರಕ್ಷಿತತೆ ಕಾಯದೆಯನ್ವಯ ಸ್ಥಾನಬದ್ಧತೆಯಲ್ಲಿದ್ದ ೧೦ ಜನ ಲೀಗ ಕಾರ್ಯಕರ್ತರನ್ನು ಸರಕಾರದವರು ಪೆರೋಲ ಮೇಲೆ ಬಿಡುಗಡೆ ಮಾಡಿದ್ದಾರೆ.

ಕೇಂದ್ರ ಸಂಬಳ ಸಮಿತಿಯವರ ವರದಿಯ ವಿಚಾರ ಮಾಡಿ ಅಸಾಮ ಸರಕಾರದ ನವಕರರಿಗೆ ಯಾವ ರೀತಿ ಶಿಫಾರಸಗಳನ್ನು ಅನ್ವಯಿಸಬೇಕೆಂದು ಮುಂತಾದ್ದನ್ನು ವಿಚಾರ ಮಾಡಲು ಅಸಾಮ ಸರಕಾರದವರು ಒಂದು ಸಮಿತಿಯನ್ನು ನಿಯಮಿಸಿದ್ದಾರೆ.

ಕಾಯದೆ ವಿರುದ್ಧ ಮೆರವಣಿಗೆ ತೆಗೆದ ಆರೋಪದ ಮೇಲೆ ಇಬ್ಬರು ಮುಸ್ಲಿಂ ಲೀಗ ಕಾರ್ಯಕರ್ತರಿಗೆ ಸಿಲ್ಛರ ಮ್ಯಾಜಿಸ್ಟ್ರೇಟರು ಪ್ರತಿಯೊಬ್ಬರಿಗೆ ಒಂದೊಂದು ತಿಂಗಳ ಶಿಕ್ಷೆ ವಿಧಿಸಿದರು. ಸಿಲ್ಛರ ನಗರ ಸಭೆಯ ಮೇಲಿದ್ದ ಕಾಂಗ್ರೆಸ ಧ್ವಜವನ್ನು ಕಿತ್ತಿ ಲೀಗ ಧ್ವಜವನ್ನು ಏರಿಸುವ ಪ್ರಯತ್ನಕ್ಕಾಗಿ ಇವರ ಮೇಲೆ ಖಟ್ಲೆ ನಡೆದಿದ್ದಿತು. ಇನ್ನೂ ನಾಲ್ಕು ಲೀಗ ಕಾರ್ಯಕರ್ತರಿಗೆ ಸಿಲ್ಹೆಟದಲ್ಲಿ ಶಿಕ್ಷೆ ವಿಧಿಸಲಾಯಿತು.

ಪಂಜಾಬ

ಪಾಕಿಸ್ತಾನವಿರೋಧಿರಂಗದಕಾರ್ಯಕಾರಿಮಂಡಳದ ಸಭೆ ಸರದಾರ ಸುಂಗಳಸಿಂಗರ ಅಧ್ಯಕ್ಷತೆಯಲ್ಲಿ ಸೇರಿ ವೈಸರಾಯರ ಹೊಸಯೋಜನೆಯಿಂದ ಉದ್ಭೂತವಾದ ಸಮಸ್ಯೆಗಳನ್ನು ಚರ್ಚಿಸಿ ವಿಭಜನಾ ರೇಷೆಯು ಚಿನಾಬ ನದಿಯ ಗುಂಟ ಹೋಗುವಂತೆ ಒತ್ತಾಯಪಡಿಸಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಲಾಹೋರದ ಭಾಟಿ ಅಗಸಿಯಲ್ಲಿ ೬ ನೇ ತಾರೀಖು ಸ್ಫೋಟ ಸಂಭವಿಸಿ ೪ ಜನರು ಗಾಯಗೊಂಡರು ಇದಕ್ಕೂ ಪೂರ್ವದಲ್ಲಿ ಒಂದು ಮನೆಯಲ್ಲಿ ಇದೇ ಬಗೆಯ ಸ್ಫೋಟ ಸಂಭವಿಸಿತು. ಈ ವರೆಗೆ ಯಾರೂ ಬಂಧಿಸಲ್ಪಟ್ಟಿಲ್ಲ. ಕೊಲ್ಲೆಯ ಎರಡು ಪ್ರಯತ್ನ ನಡೆದ ವರದಿಗಳು ಬಂದಿವೆ.

ಲಾಹೋರಿನ ಮೋಚಿಗೇಟ ಪೋಲೀಸ ಸಬ್ ಡಿವಿಜನದಲ್ಲಿ ಕೊಲೆ ಒಂದೇಸವನೆ ನಡೆದದ್ದರಿಂದ ೬೪ ಗಂಟೆ ಕರ್ಫ್ಯೂ ಜಿಲ್ಲಾ ಮ್ಯಾಜಿಸ್ಟ್ರೇಟರು ೧೧ ನೇ ತಾರೀಖ ಸಾಯಂಕಾಲ ೬ ಗಂಟೆಯಿಂದ ಸಾರಿದ್ದಾರೆ.

ಸಂಸ್ಥಾನಗಳು

ಜೋಧಪುರದ ಮಹಾರಾಜರಾದ ಸರ್ ಉಮೇದಸಿಂಗಜಿಯವರು ಕರುಳಿನ ಬೇನೆಯಿಂದ ಬಳಲುತ್ತಿದ್ದರು. ಅವರ ಮೇಲೆ ಶಸ್ತ್ರಕ್ರಿಯೆ ಮಾಡಲಾಯಿತು. ಆದರೆ ಅದು ಅಯಶಸ್ವಿಯಾಗಿ ಮಹಾರಾಜರು ನಿಧನ ಹೊಂದಿದರು. ಸ್ವತಂತ್ರ ಭಾರತದಲ್ಲಿ ಜೋಧಪುರದ ಮಹಾರಾಜರು ಆದರ್ಶ ಘಟನಾತ್ಮಕ ಅರಸರಾಗುತ್ತಿದ್ದರೆಂದು ಘಟನಾ ಸಮಿತಿಯ ಸದಸ್ಯರಾದ ಜಯ ನಾರಾಯಣ ವ್ಯಾಸರು ಅಭಿಪ್ರಾಯಪಟ್ಟರು.

ನಿಜಾಮ ಹೈದ್ರಾಬಾದದ ದಿವಾಣರಾಗಿದ್ದ ಸರ್ ಮಿರ್ಝಾ ಇಸ್ಮಾಯಿಲ್‌ರು ಕೆಲವು ಖಾಸಗಿ ಕಾರಣಗಳ ಮೂಲಕ ರಾಜೀನಾಮೆ ಕೊಟ್ಟಿದ್ದರಿಂದ ಅವರ ಸ್ಥಳದಲ್ಲಿ ಛತ್ತಾರಿ ನವಾಬರನ್ನು ದಿವಾಣರನ್ನಾಗಿ ನೇಮಿಸಲಾಗಿದೆಂದು ಮುಂತಾಗಿ ಸರಕಾರದ ಪ್ರಕಟನೆ ಹೊರಟಿದೆ.

ಹೈದರಾಬಾದ ಕಾಂಗ್ರೆಸ್ಸಿನಲ್ಲಿ ೧) ಕನ್ನಡ ಜಿಲ್ಲೆಗಳು ೨) ಮಹಾರಾಷ್ಟ್ರ ಜಿಲ್ಲೆಗಳು ೩) ಆಂಧ್ರರು (೪ ಹೈದರಾಬಾದ ಮತ್ತು ಸಿಕಂದರಾಬಾದ ನಗರಗಳು ೫) ಸಂಸ್ಥಾನದಲ್ಲಿಯ ತೆಲಗು ಜಿಲ್ಲೆಗಳು ಹೀಗೆ ಭಾಗಗಳನ್ನು ರಚಿಸಿಕೊಳ್ಳಬೇಕೆಂದು ಡಾ. ಪಟ್ಟಾಭಿ, ದೇವ, ದಿವಾಕರ ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ.

ಗುಜರಾಥದ ೨೦ ಸಾವಿರ ಶಿಕ್ಷಕರು ಸುರತ ಸ್ಕೂಲಬೋರ್ಡ ಹುಕುಮಿನ ನಿಷೇಧಾರ್ಥ ತಾ ೧೫ ಕ್ಕೆ ಒಂದು ದಿವಸ ಉಪವಾಸ ಆಚರಿಸಲಿದ್ದಾರೆ. ಫೆಬ್ರುವರಿ ತಾ ೨೦ ನೇ ದಿವಸ ಶಿಕ್ಷಕ ದಿನಾಚರಣೆ ನಿಮಿತ್ತ ಶಿಕ್ಷಕರು ಕೆಲಸಕ್ಕೆ ಬರದಿದ್ದರಿಂದ ಅವರ ಒಂದು ದಿನದ ಸಂಬಳ ಕಡಿಮೆಗೊಳಿಸಲು ಸ್ಕೂಲ ಬೋರ್ಡಿನವರು ನಿಶ್ಚಯಿಸಿದ್ದೇ ಈ ನಿಷೇಧಕ್ಕೆ ಕಾರಣವಿರುವದು.

ನಾಲ್ಕು ಮಾತು — ರಂಗನಾಥ ದಿವಾಕರ

ಪಾಕಿಸ್ತಾನ--ಹಿಂದುಸ್ತಾನ

ವಿಚಾರ, ವಿವೇಕ, ದೂರದೃಷ್ಟಿ ಪರಸ್ಪರರ ಹಿತಸಂಬಂಧ, ಭವಿಷ್ಯ, ರಾಷ್ಟ್ರೀಯತ್ವ ಎಲ್ಲ ದೃಷ್ಟಿಯಿಂದಲೂ ಅನಿಷ್ಟವಾದ ಹಿಂದುಸ್ತಾನದ ವಿಭಜನೆ ಎಂಬದು ಈಗ ಆಗಿ ಹೋದಂತೆಯೆ ಎಂದು ನಾನು ತಿಳಿಯುತ್ತೇನೆ. ಇವೆಲ್ಲವೂ ದುಬ್ಬಗೂಡಿ ಜಾತೀಯ ಭಾವನೆ, ಜಾತಿಗೊಂದು ರಾಜ್ಯವಿರಬೇಕೆಂಬ ಹಟ, ಅತ್ಯಂತಿಕ ಪರಸ್ಪರ ಅವಿಶ್ವಾಸ ಇವೇ ಈಗ ಸದ್ಯಕ್ಕೆ ಯಶಸ್ಸನ್ನು ಪಡೆದಂತಾಗಿದೆ. ಉಪಾಯವಿಲ್ಲ. ಇನ್ನು ಈ ವಿಭಜನೆಯ ಪರಿಣಾಮಗಳೇನು ಎಂಬದಂತೂ ಸ್ಪಷ್ಟವಿದೆ. ಈ ಎರಡೂ ನೆರೆ ದೇಶಗಳಲ್ಲಿ ಈಗಿಂದಲೆ ರಾಜಕೀಯ, ವ್ಯಾಪಾರ ವಿಷಯಕ, ಹಾಗೂ ಸಂರಕ್ಷಣೆ ವಿಷಯಕ ಒಪ್ಪಂದಗಳು ಆಗದೆ ಹೋದರೆ ಎರಡೂ ಪರಸ್ಪರ ಶತ್ರು ರಾಷ್ಟ್ರಗಳಾಗಿ ಪರಿಣಮಿಸುವ ಸಂಭವವಿದೆ. ಹಾಗೆ ಆದರೆ ಪಾಕಿಸ್ತಾನವು ಬೇರೆ ರಾಷ್ಟ್ರಗಳೊಡನೆ ಸಂಧಾನ ಕಟ್ಟಿಕೊಂಡು ಹಿಂದುಸ್ತಾನದ ಮೇಲೆ ದಾಳಿ ಮಾಡುವ ಸಂಭವವಿರುವದು. ಅದೇ ರೀತಿ ಹಿಂದುಸ್ತಾನವು ಪಾಕಿಸ್ತಾನದ ಮೇಲೆ ದಾಳಿ ಮಾಡುವ ಸಂಭವವಾದರೂ ಇದೆ. ಪ್ರತ್ಯಕ್ಷ ದಾಳಿ ಮಾಡದಿದ್ದರೂ ಸಾಕಷ್ಟು ತಿಕ್ಕಾಟವಾಗುವ ಸಂಭವವಂತೂ ಇದ್ದೇ ಇದೆ. ಈ ಬಗೆಯ ತಿಕ್ಕಾಟಗಳಾಗಿ ಪರಸ್ಪರರ ಶಕ್ತಿಯ ನಾಶವಾಗುವದು ಯಾವದೇ ರೀತಿಯಿಂದ ಇಷ್ಟವಾದುದಲ್ಲ. ಹೀಗಿರುವದರಿಂದ ಇಬ್ಬರ ಹಿತವು ಪರಸ್ಪರ ಸ್ನೇಹದಲ್ಲಿ ಹಾಗೂ ಸ್ನೇಹಮೂಲಕ ಮಾಡಲಾದ ಒಪ್ಪಂದಗಳಲ್ಲಿರುವದು. ಅಂಥ ಒಪ್ಪಂದಗಳನ್ನು ಮಾಡಿಕೊಳ್ಳುವದು ಈಗ ಕೂಡಲೆ ಸಾಧ್ಯವಾಗಲಿಕ್ಕಿಲ್ಲ. ವಿಭಜನೆಯಾಗಿ ಕೆಲವೊಂದು ಕಾಲ ಸಂದು ಹೋಯಿತೆಂದರೆ ಅಷ್ಟರಲ್ಲಿ ಪರಸ್ಪರರ ಅಹಂಕಾರ ಬೆಳೆದು ಹೋಗುವದು, ಹಲವೊಂದು ವ್ಯಾಪಾರ ಉದ್ಯೋಗಗಳ ಸ್ವಾರ್ಥ ಹೆಚ್ಚಿ ಹೋಗುವದು, ಪರಕೀಯರೂ ಸ್ವಾರ್ಥ ಪ್ರೇರಿತರಾಗಿ ಒಡಕು ಹುಟ್ಟಿಸಲು ಪ್ರಯತ್ನಪಡುವರು. ಹೀಗಾಗಿ ಅನೇಕ ತೊಂದರೆಗಳುಂಟಾಗುವವು. ಆದುದರಿಂದ ಉಭಯ ಪಕ್ಷದವರು ಈಗಲೆ ಈ ವಿಷಯದತ್ತ ಗಮನ ಕೊಟ್ಟು ಹಲವೊಂದು ಒಪ್ಪಂದಗಳನ್ನು ಮಾಡಿಕೊಂಡು ಬಿಟ್ಟರೆ ಮುಂದೆ ೧೦–೨೦ ವರುಷಗಳ ಮಟ್ಟಿಗಾದರೂ ಪರಸ್ಪರರಲ್ಲಿ ತಿಕ್ಕಾಟವುಂಟಾಗಲು ಆಸ್ಪದವುಳಿಯಲಿಕ್ಕಿಲ್ಲ. ಆದರೆ ಹೀಗೆ ಆಗಬೇಕಾದರೆ ಉಭಯ ಪಕ್ಷದವರೂ ಶಾಂತರೀತಿಯಿಂದ ವಿಚಾರವಿನಿಮಯ ಮಾಡಬೇಕಾಗುವದು. ವಿವೇಕಕ್ಕೆ ಎಡೆ ಕೊಡಬೇಕಾಗುವದು. ಇಲ್ಲದಿದ್ದರೆ ಉಭಯತರಿಗೂ ಭಯ.

ಪಾಕಿಸ್ತಾನ—ಹಿಂದುಸ್ತಾನ ಈ ಎರಡು ದೇಶಗಳ ವಿಚಾರ ಏನೇ ಇರಲಿ, ಹಿಂದುಸ್ತಾನದಲ್ಲಿಯ ಮುಸಲ್ಮಾನ ಬಾಂಧವರ ಗತಿ ಏನು? ಅದೇ ರೀತಿ ಪಾಕಿಸ್ತಾನದಲ್ಲಿಯ ಹಿಂದುಗಳ ಗತಿಯೇನು? ಪಾಕಿಸ್ತಾನದಲ್ಲಿಯ ಹಿಂದುಗಳ ಗತಿಯೇನಾಗಬಲ್ಲದೆಂಬುದನ್ನು ಸಿಂಧ ಸರಕಾರದವರು ಸ್ಪಷ್ಟಗೊಳಿಸಕೊಡಗಿರುವರು! ಆದರೂ ಹಿಂದುಗಳು ತಾವು ಪರಕೀಯ ರಾಷ್ಟ್ರದಲ್ಲಿರುವೆವೆಂದು ಭಾವಿಸುವದಿಲ್ಲ. ಯಾಕೆಂದರೆ ಹಿಂದು ಹಾಗು ಮುಸಲ್ಮಾನ ಇವೆರಡು ಧರ್ಮಗಳಿದ್ದರೂ ಇವೆರಡು ಬೇರೆ ರಾಷ್ಟ್ರಗಳೆಂದು ಅವರು ವಾದಿಸುವದಿಲ್ಲ. ಮುಸಲ್ಮಾನ ಬಾಂಧವರಿಗೆ ಮಾತ್ರ ತಾವು ಪ್ರತ್ಯೇಕ ರಾಷ್ಟ್ರದವರು ಎಂದು ಲೀಗಿನವರು ಪಾಠ ಹೇಳಿರುವರು. ಹೀಗಿರುವದರಿಂದ ಹಿಂದುಸ್ತಾನದಲ್ಲಿರುವ ಮುಸಲ್ಮಾನರೆಲ್ಲರೂ ತಾವು ಪ್ರತ್ಯೇಕ ರಾಷ್ಟ್ರದವರು ಎಂದು ತಿಳಿದುಕೊಳ್ಳಬಹುದು. ಹಾಗೆ ಆದ ಪಕ್ಷದಲ್ಲಿ ಅವರು ಹಿಂದುಸ್ತಾನದಲ್ಲಿ ಹಿಂದುಸ್ತಾನದ ನಾಗರಿಕರಾಗಿ ಉಳಿಯಲಾರರು. ಫ್ರೆಂಚರು, ಬ್ರಿಟಿಶರು, ಚೀನಿ ಜನರು ಯಾವ ರೀತಿ ಇಲ್ಲಿ ಇರುವರೊ ಆ ರೀತಿ ಅವರು ಇಲ್ಲಿ ಪರಕೀಯರಾಗಿ ಇರಬೇಕಾಗುವದು. ಈ ಮಾತನ್ನು ಅವರು ಎಷ್ಟರ ಮಟ್ಟಿಗೆ ವಿಚಾರ ಮಾಡಿರುವರೊ ಗೊತ್ತಾಗಿಲ್ಲ. ಅವರು ಈ ಹಿಂದುಸ್ತಾನ ಭಾಗದಲ್ಲಿ ನಾಗರಿಕ ಹಕ್ಕುಗಳನ್ನು ಪಡೆದು ಇರಬೇಕಾದರೆ ಅವರು ತಾವು ಬೇರೆ ರಾಷ್ಟ್ರದವರು ಎಂದು ಸಾಧಿಸಲಾರರು. ಅವರು ಬೇರೆ ರಾಷ್ಟ್ರದವರೇ ಆಗಿದ್ದರೆ, ಅವರು ಪಾಕಿಸ್ತಾನಕ್ಕಾದರೂ ಹೊರಟು ಹೋಗಬೇಕಾದೀತು. ಇಲ್ಲವೆ ಇಲ್ಲಿಯೆ ಇರುವದಾದರೆ ಇಲ್ಲಿ ಪರರಾಷ್ಟ್ರದವರು ಇದ್ದಂತೆ ನಾಗರಿಕ ಹಕ್ಕುಗಳಿಲ್ಲದೆ ಇರಬೇಕಾಗುವದು. ಈ ಮಾತನ್ನು ಲೀಗಿನವರು ಯಾರಿಗೂ ಎಂದೂ ಸ್ಪಷ್ಟ ಮಾಡಿ ಹೇಳಿಲ್ಲ. ಹಿಂದುಸ್ತಾನದಲ್ಲಿಯ ಮುಸಲ್ಮಾನರು ಈ ಮಾತನ್ನು ಎಂದೂ ಸ್ಪಷ್ಟವಾಗಿ ವಿಚಾರಿಸಿಯೂ ಇಲ್ಲ. ಈಗಲಾದರೂ ವಿಚಾರಿಸಬೇಕು. ಹಿಂದಕ್ಕೊಮ್ಮೆ ನಾನು ಈ ವಿಷಯವನ್ನು ನಮ್ಮಲ್ಲಿಯ ಮುಸಲ್ಮಾನ ಬಾಂಧವರ ಮುಂದೆ ಬಿಚ್ಚಿ ಇಟ್ಟಿದ್ದೆನು. ಆದರೆ ಕೇವಲ ಜಾತ್ಯಂಧರಾಗಿ ಮುಂದೆ ಸಾಗಿದವರಿಗೆ ಇಂಥ ವಿಚಾರಗಳು ರುಚಿಸುವದೆಂತು? ಇರಲಿ. ಈಗ ಕೇವಲ ವಿಚಾರದ ಪ್ರಶ್ನೆ ಇಲ್ಲ. ಈಗ ಪ್ರತ್ಯಕ್ಷ ಒಂದು ಪಾಕಿಸ್ತಾನ ಒಂದು ಹಿಂದುಸ್ತಾನ ಹೀಗೆ ಎರಡು ವಿಭಾಗಗಳಾಗಿ ಬಿಟ್ಟಿವೆ. ಇನ್ನು ನಾವು ಎಲ್ಲಿರಬೇಕು, ಹೇಗೆ ಇರಬೇಕು ಎಂಬುದನ್ನು ಮುಸಲ್ಮಾನ ಬಾಂಧವರು ನಿರ್ಧರಿಸಲಿಕ್ಕೆ ಬೇಕು.

ಭಾಷಾನುಗುಣ ಪ್ರಾಂತ

ಭಾಷಾನುಗುಣ ಪ್ರಾಂತಗಳಾಗಲು ಇದ್ದ ಅಡಚಣಿಗಳೆಲ್ಲ ತಮ್ಮಿಂದ ತಾವೆ ಈಗ ಮಾಯವಾಗಿ ಬಿಟ್ಟಿವೆ. ಈಗ ಭಾಷಾನುಗುಣ ಪ್ರಾಂತ ಮಾಡುವ ಗೋಜಿಗೆ ಹೋದರೆ ನಮ್ಮ ನಮ್ಮಲ್ಲಿ ಹೊಡೆದಾಟಗಳಾಗಿ ಸತ್ತಾಂತರವಾಗಲು ತಡವಾಗಬಹುದು ಎಂಬುದೊಂದು ಅಡಚಣಿ ಇತ್ತು. ಅದೇ ರೀತಿ ಹೆಚ್ಚು ಹಿಂದೂ ಪ್ರಾಂತಗಳನ್ನು ಮಾಡಿದರೆ ಲೀಗಿನವರು ವಿರುದ್ಧ ನಿಲ್ಲತಕ್ಕವರಿದ್ದರು. ಹಿಂದುಸ್ತಾನ ಪಾಕಿಸ್ತಾನ ವಿಭಜನೆಯ ಮೂಲಕ ಹಾಗೂ ಇದೇ ಆಗಸ್ಟ ೧೫ ಕ್ಕೆಯೆ ಸತ್ತಾಂತರವಾಗುವದರ ಮೂಲಕ ಈ ಎರಡೂ ಅಡಚಣಿಗಳು ಇಲ್ಲದಂತಾಗಿವೆ. ಇನ್ನು ಭಾಷಾನುಗುಣ ಪ್ರಾಂತಗಳನ್ನು ಮಾಡುವದರಿಂದ ಸಿಡಿದು ಹೋಗುವ ಪ್ರವೃತ್ತಿ ಹೆಚ್ಚಾಗುವದು. ಹಲವು ಪ್ರಾಂತಗಳು ಅರ್ಥಿಕ ದೃಷ್ಟಿಯಿಂದ ಸ್ವಾವಲಂಬಿಯಾಗಲಾರವು, ಗಡಿಗಳ ನಿರ್ಣಯವಾಗುವ ಸಂದರ್ಭದಲ್ಲಿ ಬಹಳ ತಿಕ್ಕಾಟವಾಗುವದು. ಈ ಮುಂತಾದ ಆಕ್ಷೇಪಗಳು ಇನ್ನೂ ಇವೆ. ಆದರೆ ಯಾವದೇ ಮಾತಿಗೆ ಹಲವೊಂದು ಆಕ್ಷೇಪಗಳಿದ್ದೇ ಇರುವವು. ಅವುಗಳನ್ನು ಹೋಗಲಾಡಿಸಿಯೆ ನಾವು ಮುಂದೆ ಸಾಗಬೇಕಾಗುವದು. ಭಾಷಾನುಗುಣ ಪ್ರಾಂತರಚನೆಯಿಂದ ಹಾನಿಗಿಂತ ಲಾಭಗಳು ಹೆಚ್ಚು ಎಂಬುದು ಈಗ ಸಿದ್ಧವಾದ ಮಾತು. ಇನ್ನು ಅರ್ಥಿಕ ಸ್ವಾವಲಂಬಿತ್ವದ ದೃಷ್ಟಿಯಿಂದ ನೋಡಿದರೂ ಕೇಂದ್ರ ಸರಕಾರವು ಹೆಚ್ಚು ದೃಢ ಹಾಗೂ ಹೆಚ್ಚು ಅಧಿಕಾರವುಳ್ಳದ್ದಾಗುವದು ಎಂಬಲ್ಲಿ ಸಂಶಯವುಳಿದಿಲ್ಲ. ಅದೇ ರೀತಿ ಇಡೀ ಹಿಂದುಸ್ತಾನದ ಔದ್ಯೋಗಿಕ ಅರ್ಥಿಕ ಯೋಜನೆ ಒಂದೇ ಒಂದಾಗುವದರಿಂದ ಆ ಮಾತಿಗೆ ಅಷ್ಟೊಂದು ಮಹತ್ವವುಳಿದಿಲ್ಲ. ದುರ್ಬಲ ಕೇಂದ್ರವಾಗಿ ಪ್ರತಿಪ್ರಾಂತವು ತನ್ನ ಭಾರವನ್ನೆಲ್ಲ ತಾನೇ ಹೊರಬೇಕು ಎಂಬ ಸಂದರ್ಭ ಈಗ ಉಳಿದಿಲ್ಲ. ಇನ್ನು ಗಡಿಗಳ ಬಗ್ಗೆ ತಿಕ್ಕಾಟ ಸ್ವಲ್ಪ ಆಗಬಲ್ಲದು. ಆದರೆ ಅದನ್ನು ಅದೆಷ್ಟು ಕಡಮೆ ಮಾಡುವದು ಸಾಧ್ಯವಿರುವದು. ಯೋಗ್ಯವಾದ ಸೀಮಾ ಸಮಿತಿಗಳ ನೇಮಕದಿಂದ ಹಾಗು ಅವುಗಳೆದುರಿಗೆಯೆ ಎಲ್ಲ ಸಾಕ್ಷೀ ಪುರಾವೆ ಇಡಬೇಕು. ಅವುಗಳ ನಿರ್ಣಯ ಕೊನೆಯದು ಎಂದು ನಿರ್ಧಾರ ಮಾಡಿದರೆ ಈ ಮಾತು ಎಷ್ಟೋ ಸುಸೂತ್ರವಾಗಬಲ್ಲದು. ಈ ರೀತಿ ಎಲ್ಲ ಅಡಚಣಿಗಳ ನಿರಾಕರಣವಾಗಲು ಯಾವ ದೊಡ್ಡ ತೊಂದರೆಗಳೂ ಕಾಣುವದಿಲ್ಲ. ಆದುದರಿಂದ ಸೂತ್ರಚಾಲಕರು ಹಾಗೂ ಮುತ್ಸದ್ದಿಗಳು ನೆನೆಗುದಿಗೆ ಬಿದ್ದ ಈ ವಿಷಯವನ್ನು ಕ್ಷಿಪ್ರದಲ್ಲಿಯೆ ಕೈಕೊಂಡು ಮುಗಿಸಿ ಬಿಡುವರೆಂದು ನಂಬಲು ಈಗ ಆಸ್ಪದವಾಗಿದೆ.

ಸೋಶಾಲಿಸ್ಟ ಪಕ್ಷ

ಕಾಂಗ್ರೆಸ್ ಸೊಶಾಲಿಸ್ಟ ಪಕ್ಷ ಎಂಬುದೊಂದು ಪಕ್ಷವು ಹಿಂದುಸ್ತಾನದಲ್ಲಿ ಹಲವೊಂದು ವರುಷಗಳ ವರೆಗೆ ಕಾಂಗ್ರೆಸ್ಸಿನ ಅಂತರ್ಗತವಾಗಿ ಕೆಲಸ ಮಾಡುತ್ತ ಬಂದಿತು. ಕಾಂಗ್ರೆಸ್ಸು ಅಂತರ್ಗತ ಪಕ್ಷಗಳನ್ನು ಮನ್ನಿಸುವದಿಲ್ಲ. ಆ ಪ್ರಕಾರ ಇದನ್ನು ಮನ್ನಿಸಿದ್ದಿಲ್ಲ. ಆದರೂ ತನ್ನಷ್ಟಕ್ಕೆ ತಾನು ಈ ಪಕ್ಷವು ಬೆಳೆದುಕೊಂಡು ಬಂದಿತ್ತು. ಕಾಂಗ್ರೆಸ್ಸಿನಲ್ಲಿ ಪಕ್ಷಗಳು ಇರಕೂಡದು ಎಂಬ ವಿಚಾರವು ಪ್ರಬಲವಾದ ಬಳಿಕ ಹೋದ ಮಾರ್ಚ ತಿಂಗಳಲ್ಲಿ ಕಾನಪೂರದಲ್ಲಿ ಕೂಡಿದಾಗ ಸೋಶಾಲಿಸ್ಟ ಪಕ್ಷದವರು 'ಕಾಂಗ್ರೆಸ್' ಎಂಬ ಅಭಿಧಾನವನ್ನು ಬಿಟ್ಟುಬಿಟ್ಟರು. ಹಾಗೂ ಕಾಂಗ್ರೆಸ್ ಸಭಾಸದರಲ್ಲದವರನ್ನು ಸಹ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಬಹುದಾಗಿ ನಿರ್ಧರಿಸಿದರು. ಅರ್ಥಾತ್ ಇದೊಂದು ಸ್ವತಂತ್ರ ಪಕ್ಷ ಎಂದು ಮಾರ್ಪಟ್ಟಿತು. ಆದರೂ ಇದರಲ್ಲಿಯ ಮುಖ್ಯ ಕಾರ್ಯಕರ್ತರಾರೂ ಕಾಂಗ್ರೆಸ್ಸನ್ನು ಬಿಟ್ಟು ಬೇರೆಯಾಗಬೇಕೆಂಬ ಇಚ್ಛೆಯುಳ್ಳವರಿರಲಿಲ್ಲ. ಕಾಂಗ್ರೆಸ್ಸಿಗೆ ಸೋಶಾಲಿಸ್ಟ ತತ್ವಜ್ಞಾನಕ್ಕೆ ಹಾಗೂ ಮಾರ್ಗಕ್ಕೆ ಒಪ್ಪುವಂತೆ ಮಾಡಬೇಕು ಎಂಬುದೆ ಅವರ ಮೂಲ ಉದ್ದೇಶ. ಅವರ ಉದ್ದೇಶ ಹೀಗಿದ್ದರೂ ಅವರ ಕಾರ್ಯಪದ್ಧತಿ ಬೇರೆಯದಾಗಿ ಬಿಟ್ಟಿತು. ಒಂದು ಪ್ರತ್ಯೇಕ ಪಕ್ಷ ಬೇರೆ ಹುಟ್ಟಿದ ಬಳಿಕ ಸ್ವಾಭಾವಿಕವಾಗಿಯೆ ಅದರದೊಂದು ಪ್ರತ್ಯೇಕ ಅಭಿಮಾನ, ಅದರದೇ ಒಂದು ಕಾರ್ಯಪ್ರಣಾಲಿ ಇವೆಲ್ಲ ಆಗತೊಡಗಿದವು. ದೇಶದಲ್ಲಿ ಈಗಿನ ಸಂದರ್ಭದಲ್ಲಿ ಈ ಬಗೆಯ ಎರಡು ಪಕ್ಷಗಳು ಇರುವದು ಯೋಗ್ಯವೊ ಹಿತಕಾರಿಯೊ ಎಂಬ ಪ್ರಶ್ನೆ ಎಲ್ಲರಿಗೂ ಎದುರಾಯಿತು. ಈ ಪ್ರಶ್ನೆಯನ್ನು ಹೇಗೆ ಬಿಡಿಸಬೇಕು? ಎರಡೂ ಪಕ್ಷಗಳ ವಿಚಾರಪ್ರಣಾಲಿ, ಉದ್ದೇಶ, ಮುಂತಾದವುಗಳಲ್ಲಿ ವಿರೋಧವಿದ್ದುದಾದರೆ ಅವುಗಳನ್ನು ಕೂಡಿಸುವದರಲ್ಲಿ ಅರ್ಥವಿಲ್ಲ. ಆದರೆ ಹೊಂದಿಕೊಂಡು ಹೋಗುವದು ಸಾಧ್ಯವಿದ್ದಲ್ಲಿ ಎರಡು ಪಕ್ಷಗಳನ್ನು ಮಾಡಿಕೊಂಡು ಕೆಲಸ ಮಾಡುವದರಿಂದ ಶಕ್ತಿಯ ಹಾನಿಯಾಗುವದು.

o o o _ . o

ಕಾಂಗ್ರೆಸ್ಸು ಬರಬರುತ್ತ ಹೆಚ್ಚೆಚ್ಚು ಸೊಶಾಲಿಸ್ಟ ಪಕ್ಷದ ತತ್ವಗಳನ್ನು ಸ್ವೀಕರಿಸುತ್ತ ಬಂದಿದೆ ಎಂಬುದು ಸ್ಪಷ್ಟವೆ ಇದೆ. ಕಾಂಗ್ರೆಸ್ಸು ಭಂಡವಲಶಾಹಿಯನ್ನು ಎತ್ತಿ ಹಿಡಿಯುವದು ಸಾಧ್ಯವೆ ಇಲ್ಲ. ಇಷ್ಟೇ ಅಲ್ಲ ಅದನ್ನು ನಷ್ಟಪಡಿಸಿಯೆ ತೀರುವದೆಂಬಲ್ಲಿ ಯಾರಿಗೂ ಸಂಶಯವಿಲ್ಲ. ಕಾಂಗ್ರೆಸ್ಸಿನ ಕರಾಚಿ ಠರಾವನ್ನು (೧೯೩೧) ಮೊದಲು ಮಾಡಿಕೊಂಡು ಈಗಿನ ವರೆಗಿನ ಎಲ್ಲ ಗೊತ್ತುವಳಿಗಳನ್ನು ಪರಿಶೀಲಿಸಿ ನೋಡಿದರೆ ಕಾಂಗ್ರೆಸ್ಸು ಎತ್ತ ಸಾಗಿದೆ ಎಂಬುದು ಸ್ಪಷ್ಟವಾಗುವದು. ಹೀಗಿದ್ದರೆ ಕಾಂಗ್ರೆಸ್ಸು ಒಮ್ಮೆಲೆ ಸೋಶಾಲಿಸ್ಟ ಪಕ್ಷವನ್ನು ಏಕೆ ಅಪ್ಪಿಕೊಳ್ಳಲಿಲ್ಲ, ಎಂಬ ಪ್ರಶ್ನೆಯನ್ನು ಯಾರಾದರೂ ಕೇಳಬಹುದು. ಬ್ರಿಟಿಶರನ್ನು ಮೊದಲು ಹೊರಗಟ್ಟುವದು ಕಾಂಗ್ರೆಸ್ಸಿನ ಪ್ರಥಮ ಕರ್ತವ್ಯವಾಗಿತ್ತು. ಅದನ್ನು ಸಾಧಿಸುತ್ತಿರುವಾಗ ಕಾಂಗ್ರೆಸ್ಸಿಗೆ ಹಿಂದುಸ್ತಾನದಲ್ಲಿಯ ಎಲ್ಲ ಪಕ್ಷಗಳ ಬೆಂಬಲವೂ ಬೇಕಿತ್ತು. ಆ ಮೂಲಕ ಕಾಂಗ್ರೆಸ್ಸು ಒಮ್ಮೆಲೆ ಪೂರ್ಣ ಸೋಶಾಲಿಸ್ಟ ಪಕ್ಷವಾಗುವದು ಸಾಧ್ಯವಿರಲಿಲ್ಲ. ಆದರೆ ಇನ್ನು ಸ್ವಾತಂತ್ರ್ಯವು ಕೈವಶವಾದ ಬಳಿಕ ಪಂಡಿತ ಜವಾಹರಲಾಲರ ನೇತೃತ್ವದಲ್ಲಿ ಕಾಂಗ್ರೆಸ್ಸು ಸೊಶಾಲಿಸ್ಟ ತತ್ವಜ್ಞಾನವನ್ನು ಬಿಟ್ಟು ಇನ್ನಾವದೇ ತತ್ವಜ್ಞಾನವನ್ನು ಸ್ವೀಕರಿಸಬಹುದು ಎಂದು ತಿಳಿಯುವದು ದೊಡ್ಡ ತಪ್ಪು. ಆದುದರಿಂದ ಸೊಶಾಲಿಸ್ಟ ಪಕ್ಷದವರೆನಿಸಿಕೊಳ್ಳುವವರು ಈ ಮಾತುಗಳನ್ನು ವಿಚಾರಿಸುವದು ಅವಶ್ಯವು. ಪಕ್ಷಗಳನ್ನು ಬೆಳಿಸಿದಷ್ಟು ಬಡಿದಾಟಗಳೇ ಹೆಚ್ಚಾಗುವವು.

ಸಾತಾರೆಯ ಪಾಠ

ಈಚೆಗೆ ಸಾತಾರೆಯಲ್ಲಿ ಸರಕಾರದವರು ೫೦–೬೦ ಜನರನ್ನು ಒಮ್ಮೆಲೆ ಹಿಡಿದು ಹಾಕಿ ಸೆರೆಯಲ್ಲಿಡುವ ಪ್ರಸಂಗ ಬಂದಿತು. ಜಿಲ್ಲೆಯ ವಿಶಿಷ್ಟ ಭಾಗವಾದ ಮಾಳವೆ, ಕರ್‍ಹಾಡ ತಾಲೂಕಗಳಲ್ಲಿ ಬಣಗಳಾಗಿ ಅವು ವಿಕೋಪಕ್ಕೆ ಹೋಗಿ ಅವುಗಳ ಮುಖಂಡರು ಪಾಳೆಯಗಾರರಂತೆ ನಡೆಯಹತ್ತಿದರು. ಜನಸಾಮಾನ್ಯರಲ್ಲಿ ಭಯದ ವಾತಾವರಣವು ಪಸರಿಸಿತು. ಆಯಾ ಬಣಗಳ ಜನರು ಬೇಕ ಬೇಕಾದ ಗುನ್ಹೆ ಮಾಡಿದರೂ ಅವರ ವಿರುದ್ಧ ಸಾಕ್ಷೀ ಪುರಾವೆ ಹುಟ್ಟುವದೆ ಸಾಧ್ಯವಾಗದೆ ಹೋಯಿತು. ಆಯಾ ಬಣಗಳಲ್ಲಿ ಕೂಡ ಪರಸ್ಪರ ದ್ವೇಷ ಬೆಳೆದು ಪರಸ್ಪರರ ಕಾರ್ಯಕರ್ತರನ್ನು ಕೊಲ್ಲಿಸುವ, ಹೊಡೆಸುವ ಪ್ರಕಾರಗಳು ನಡೆದವು. ಹೀಗಾಗಿ ವ್ಯವಸ್ಥಿತ ರಾಜ್ಯಕಾರಭಾರವು ನಡೆಯದಂತಾಯಿತು! ಇಂಥ ಸಂದರ್ಭದಲ್ಲಿ ಮುಂಬಯಿ ಸರಕಾರದವರು ಈ ಪರಿಸ್ಥಿತಿಗೆ ಕಾರಣರೆಂದೆನಿಸಿದ ೫೦–೬೦ ಜನರನ್ನು ಸೆರೆಹಿಡಿದಿರುವರು. ಇಂಥ ಪರಿಸ್ಥಿತಿಗೆ ಎಡೆಗೊಟ್ಟರೆ ಯಾವ ಸರಕಾರವೂ ನಡೆಯುವದು ಸಾಧ್ಯವಾಗಲಿಕ್ಕಿಲ್ಲ. ಯಾವದೇ ಅನ್ಯಾಯದ ಅಥವಾ ಅಪರಾಧದ ವಿಚಾರಣ ನಡೆದು ನ್ಯಾಯಾನ್ಯಾಯದ ನಿರ್ಣಯವಾಗಿ ಅನ್ಯಾಯ ಇಲ್ಲವೆ ಅಪರಾಧ ಮಾಡಿದವನಿಗೆ ಯೋಗ್ಯ ಶಿಕ್ಷೆ ಆಗದೆ ಹೋದರೆ ಸಮಾಜದಲ್ಲಿ ಅವ್ಯವಸ್ಥೆ ಉಂಟಾಗುವದು ಸ್ವಾಭಾವಿಕ. ಅದೇ ಬಗೆಯ ಸ್ಥಿತಿ ಸಾತಾರೆಯ ಹಲವೊಂದು ಭಾಗಗಳಲ್ಲಿ ಆಗಿಬಿಟ್ಟಿತು. ಬೆದರಿಕೆ ಹಾಕಿ ಹಣ ಎತ್ತುವದು, ತದ್ವಿರುದ್ಧ ತಕರಾರು ಮಾಡಿದರೆ ಅವರವರಿಗೆ ಪ್ರಾಯಶ್ಚಿತ್ತ ಕೊಡುವದು, ಲೂಟಿ ದರೋಡೆಗಳನ್ನು ಮಾಡಿಸುವದು, ಒಂದು ಬಣದವರು ಇನ್ನೊಂದು ಬಣದವರನ್ನು ಹೊಡೆಸುವದು, ಕಡಿಸುವದು ಇವೆಲ್ಲ ನಡೆಯುತಿದ್ದವು. ತೀರ ಮೊನ್ನಿನದೊಂದು ಉದಾಹರಣೆಯೆಂದರೆ ಬಸ್ಸಿನಿಂದ ಪ್ರವಾಸ ಮಾಡುವ ಒಂದು ಪಕ್ಷದ ಮನುಷ್ಯನನ್ನು ಇನ್ನೊಂದು ಪಕ್ಷದವರು ತಡೆದು ನಿಲ್ಲಿಸಿ ಬಸ್ಸಿನಿಂದ ಎಳೆದು ಗುಂಡುಹಾಕಿ ಕೊಂದುಬಿಟ್ಟರು. ಈ ಗುನ್ಹೆ ಮಾಡಿದವರನ್ನು ೧೦–೨೦ ಜನರು ನೋಡಿರುವರು, ಅವರು ಗುರುತು ಹಿಡಿಯಬಲ್ಲರು. ಆದರೆ ಭಯದ ಮೂಲಕ ಯಾರೂ ಸಾಕ್ಷಿ ಹೇಳಲು ಸಿದ್ಧರಿಲ್ಲ! ಇಂಥ ಪರಿಸ್ಥಿತಿಯನ್ನು ನಡೆಯಗೊಡುವ ಸರಕಾರವು ಸರಕಾರವೆನಿಸಿಕೊಳ್ಳಲು ಯೋಗ್ಯವಿಲ್ಲ. ಎಲ್ಲಿಯೂ ಇಂಥ ಪರಿಸ್ಥಿತಿ ಉಂಟಾಗದಂತೆ ಜನರು ಹಾಗು ಸರಕಾರದವರು ನೋಡಿಕೊಳ್ಳಬೇಕು.

ಪಂ. ಜವಾಹರರು ಹಿಂದುಸ್ತಾನದ ಪ್ರಥಮ ಅಧ್ಯಕ್ಷರು

(೪ನೇ ಪುಟದಿಂದ)

ರೂಪಿಸಲ್ಪಡಬಹುದು. ಹಿಂದುಸ್ತಾನವನ್ನು ವಿಭಜಿಸಿ ಬಿಡುವದರಿಂದ ಸಧ್ಯದ ಘಟನಾ ಸಮಿತಿಯ ಮೇಲೆ, ಮೋ ೧೬ ರ ಘೋಷಣೆಯ ಮೂಲಕ ಹೇರಲಾದ ಗುಂಪೀಕರಣ ಮೊದಲಾದ ನಿರ್ಬಂಧಗಳು ಇಲ್ಲದಂತಾಗಿರುವದರಿಂದ "ಅ" ಗುಂಪಿನ ಮತ್ತು ಬಂಗಾಲ—ಪಂಜಾಬ ಮುಸ್ಲಿಮೇತರ ಭಾಗಗಳ ಬಲಿಷ್ಠ ಅಖಂಡ ರಾಜ್ಯವನ್ನು ಸ್ಥಾಪಿಸಬಾರದೇಕೆ ಎಂಬ ಪ್ರಶ್ನೆಯೂ ಒಮ್ಮೆ ಉದ್ಭೂತವಾಗದಿರಲಿಲ್ಲ. ಆದರೆ ತಾ. ೭ ಕ್ಕೆ ಸೇರಿದ (ಘಟನಾ ಸಮಿತಿಯ) ಒಕ್ಕೂಟ ಮತ್ತು ಪ್ರಾಂತಿಕ ಉಪಸಮಿತಿಗಳ ಸಂಯುಕ್ತ ಸಭೆಯಲ್ಲಿ ಈ "ಅಖಂಡ" ಸರಕಾರದ ವಿಚಾರವನ್ನು ಬಿಟ್ಟುಕೊಟ್ಟು ಹಿಂದುಸ್ತಾನಕ್ಕೆ ಸ್ವಾಯತ್ತ ಪ್ರಾಂತಗಳಿಂದ್ದೊಳಗೊಂಡ ಬಲಿಷ್ಠ ಸಂಯುಕ್ತ ಕೇಂದ್ರ ಸರಕಾರವಿರಬೇಕೆಂದು ನಿಶ್ಚಯಿಸಲ್ಪಟ್ಟಿತು. ಅಖಂಡ ಸರಕಾರವಾಗಿದ್ದರೆ ಪ್ರಾಂತಗಳಿಗೆ ಸ್ವತಂತ್ರ ಅಸ್ತಿತ್ವ ಇಲ್ಲದಂತಾಗುತಿತ್ತು. ಈಗಿನ ನಿರ್ಣಯದಂತೆ ಪ್ರಾಂತಿಕ ವಿಷಯಗಳ ಮತ್ತು ಕೇಂದ್ರ ಸರಕಾರದ ವಿಷಯಗಳ ಬೇರೆ ಬೇರೆ ಯಾದಿಗಳು ನಿರ್ಮಿಸಲ್ಪಡುವವು. ಕೆಲವು ವಿಶಿಷ್ಟ ಪ್ರಸಂಗಗಳಲ್ಲಿ ಕೇಂದ್ರ ಸರಕಾರಕ್ಕೆ ಪ್ರಾಂತಿಕ ಸರಕಾರಗಳ ಮೇಲೆ ಅಧಿಕಾರ ನಡೆಸಲು ಅವಕಾಶವಿದೆ. ಆದರೆ "ಈ ಬಲಿಷ್ಠ ಸಂಯುಕ್ತ ಸರಕಾರ"ದ ಯೋಜನೆ ಒಕ್ಕೂಟದಲ್ಲಿ ಸೇರುವ ಸಂಸ್ಥಾನಗಳಿಗೆ ಅನ್ವಯಿಸುವದಿಲ್ಲ. ಅರ್ಥಾತ್ ಅವು ಮಂತ್ರಿತ್ರಯ ಯೋಜನೆಯಂತೆ ಸಂರಕ್ಷಣ, ಸಂಪರ್ಕ ಮತ್ತು ವಿದೇಶ ಸಂಬಂಧದ ಅಧಿಕಾರಗಳನ್ನಷ್ಟೆ ಕೇಂದ್ರಕ್ಕೆ ಬಿಟ್ಟು ಕೊಡುವವು. ಹೀಗಿದ್ದರೂ ಅನೇಕ ಸಂಸ್ಥಾನಗಳು ಒಂದನ್ನೊಂದು ನಿರೀಕ್ಷಿಸುತ್ತ ಇನ್ನೂ ಘಟನಾ ಸಮಿತಿಯನ್ನು ಪ್ರವೇಶಿಸಬೇಕೆಂಬ ಇಚ್ಛೆಯುಳ್ಳ ಸಂಸ್ಥಾನಗಳು ಉಳಿದವುಗಳಿಗಾಗಿ ಕಾಯದೆ ನಾಳೆ ತಾ. ೨೦ ರೊಳಗೆ ಪ್ರತಿನಿಧಿಗಳನ್ನಾರಿಸಿಬಿಡಬೇಕೆಂದು ಘಟನಾಸಮಿತಿಯ ಕಚೇರಿಯಿಂದ ಸೂಚನೆ ಹೊರಟಿದೆ.

ಒಕ್ಕೂಟ ಮತ್ತು ಪ್ರಾಂತಿಕ ಘಟನಾ ಉಪಸಮಿತಿಗಳು ಮಾಡಿದ ಬೇರೆ ಕೆಲವು ನಿರ್ಣಯಗಳು ಇಂತಿವೆ.

❋ ಒಕ್ಕೂಟದ ಅಧ್ಯಕ್ಷ ಪದಕ್ಕೆ ಪ್ರೌಢ ಮತದಾನ ಪದ್ಧತಿಯಿಂದ ಅಪ್ರತ್ಯಕ್ಷ ಚುನಾವಣೆಯಾಗಬೇಕು. ಅಂದರೆ ಹಿಂದುಸ್ತಾನದ ಜನರೆಲ್ಲ ಪ್ರೌಢ ಮತದಾನ ಪದ್ಧತಿಯಿಂದ ಆರಿಸಿದ ಮತದಾರ ಕಾಲೇಜುಗಳು ತಿರುಗಿ ಮತದಾನ ಮಾಡಿ ರಾಷ್ಟ್ರಾಧ್ಯಕ್ಷನನ್ನು ಆರಿಸಬೇಕು.

❋ ಪ್ರಾಂತಿಕ ಶಾಸನ ಸಭೆಗಳಿಗೂ ಪ್ರೌಢ ಮತದಾನ ಪದ್ಧತಿಯಿಂದಲೇ ಆಯ್ಕೆಗಳಾಗಬೇಕು. ಪ್ರಾಂತಿಕ ಗವರ್ನರರನ್ನು ಒಕ್ಕೂಟ ಅಧ್ಯಕ್ಷನೇ ಆರಿಸುವನು. ಪ್ರಾಂತದಲ್ಲಿ ಅರಾಜಕತೆಯುಂಟಾದರೆ ಮಂತ್ರಿಮಂಡಲವನ್ನು ಲೆಕ್ಕಿಸದೆ ಒಕ್ಕೂಟಾಧ್ಯಕ್ಷನ ಸಲಹೆ ಪಡೆದು ಗವರ್ನರನು ಕ್ರಮ ಕೆಗೆದುಕೊಳ್ಳಬಹುದು.

❋ ಒಕ್ಕೂಟಕ್ಕೆ ಬ್ರಿಟಿಶ ಪಾರ್ಲಿಮೆಂಟಿನಂತೆ ಎರಡು ಶಾಸನಸಭೆಗಳಿರಬೇಕು. ಕೆಳಗಿನದು "ಲೋಕ ಸಭೆ", ಮೇಲಿನದು "ರಾಜ ಸಭೆ" ಒಕ್ಕೂಟದಲ್ಲಿ ಸೇರುವ ನರೇಂದ್ರರಾದಿಯಾಗಿ ಘಟಕಗಳಿಗೆಲ್ಲ ನರೇಂದ್ರ ಸಭೆಯಲ್ಲಿ (ಸದಸ್ಯ ಸಂಖ್ಯೆ–೨೫೦) ಪ್ರಾತಿನಿಧ್ಯ ದೊರೆಕರೆ ೫೦೦ ಸದಸ್ಯರುಳ್ಳ ಲೋಕ ಸಭೆಯಲ್ಲಿ ಜನರ ಪ್ರತಿನಿಧಿಗಳಿರುವರು. ಶಾಸನಾಧಿಕಾರ ಲೋಕ ಸಭೆಗಷ್ಟೇ ಇದ್ದರೂ ಮಸೂದೆಗಳನ್ನು ಎರಡೂ ಸಭೆಗಳಲ್ಲಿ ಮಂಡಿಸಬಹುದು.

❋ ಭಾಷಾನುಗುಣ ಪ್ರಾಂತ ರಚನೆಗೆ ಅವಕಾಶವಿರುವಂತೆ ಘಟನೆಯಲ್ಲಿ ವ್ಯವಸ್ಥೆ ಮಾಡಬೇಕು.

ಘಟನಾ ಸಮಿತಿಯ ಮುಂದಿನ ಅಧಿವೇಶನ ಜುಲೈ ಮೊದಲಲ್ಲಿ ಪ್ರಾರಂಭವಾಗಲಿದೆ. ಆಗ ಈ ಎಲ್ಲ ವಿಷಯಗಳ ಮೇಲೆ ನಿರ್ಣಯವಾಗಬಹುದಲ್ಲದೆ, ಈಗ ಲೀಗ ಪ್ರತಿನಿಧಿಗಳೂ ಪ್ರವೇಶಿಸುವ ನಿರ್ಣಯಕ್ಕೆ ಬಂದಿರುವದರಿಂದ ಅಲ್ಪಸಂಖ್ಯಾಕರ ಉಪಸಮಿತಿಯ ಕಾರ್ಯಕಲಾಪಗಳೂ ಭರದಿಂದ ಪ್ರಾರಂಭವಾಗಬಹುದು.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಕಾರ್ಯಕಲಾಪಗಳು

ಕಾಂಗ್ರೆಸ್ಸಿಗರಿಂದ ಸರಕಾರದ ಹಣಕಾಸಿನ ನೀತಿಯ ಟೀಕೆ ಮತ್ತು ಸಭಾತ್ಯಾಗ

ಜುಲೈಯರಲ್ಲಿ ಶ್ರೀ ಚಿಕ್ಕಲಿಂಗಯ್ಯನವರು ಸಭಾಧ್ಯಕ್ಷರಿಗೆ ಕಾಂಗ್ರೆಸ ನಾಯಕರು ಮೇ ೩೧ ರಲ್ಲಿ ಅವಮಾನಕರ ಮಾತಾಡಿದರೆಂಬುದನ್ನು ಪುನಃ ಪ್ರಸ್ತಾಪಿಸಿ ಅದರಮೇಲೆ ವಾದವಿವಾದ ನಡೆದು ಕಡೆಯಲ್ಲಿ ಅಧ್ಯಕ್ಷರಾದ ಡಾ ರಾಯಪ್ಪನವರು ಆ ಬಗ್ಗೂ ತಮ್ಮ ಬಾಧ್ಯತೆಯ ಸೂಚನೆಯ ಬಗ್ಗೂ ನಿಧಾನವಾಗಿ ತಮ್ಮ ತೀರ್ಮಾನ ಕೊಡುವುದಾಗಿ ತಿಳಿಸಿದರು. ಅನಂತರ ತೆಂಗಿನಕಾಯಿಯ ಬೆಲೆ ವಿಪರೀತವಾಗಿ ಏರಿರುವುದರ ಕಾರಣವನ್ನು ಸಭಿಕರು ಕೇಳಲಾಗಿ ಅದನ್ನು ಪರ್ಯಾಲೋಚಿಸಲಾಗುವದೆಂದು ಡಾ ರಾಯಪ್ಪನವರು ಉತ್ತರವಿತ್ತರು. ಮರುದಿನದ ಸಭೆಯಲ್ಲಿ ಅಧ್ಯಕ್ಷರು ತೀರ್ಮಾನ ಕೊಟ್ಟು ತಮ್ಮ ಬಾಧ್ಯತೆಯ ಸೂಚನೆಯನ್ನು ತಳ್ಳಿ ಹಾಕಿದರು.

"ಮೈಸೂರಿನ ಆರ್ಥಿಕ ನೀತಿಯಿಂದ ಮುದರಾಸಿನವರಿಗೆ ಸಹಾಯವಾಗಿದೆ." ಎಂಬ ಅಂಶವನ್ನು ಶ್ರೀ ಎಸ್ ವಿ ಕೃಷ್ಣಮೂರ್ತಿ ರಾಯರು ಜೂನ ೩ ರ ಸಭೆಯಲ್ಲಿ ಒತ್ತಿ ಹೇಳಿದರು. ಅನಂತರ ಅವರೂ ಇನ್ನಿತರರೂ ಸರಕಾರದ ಹಣಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಯ ಅವ್ಯವಸ್ಥೆಯಿಂದ ಇತರ ಕಾರಣಗಳಿಂದ ಹೇಗೆ ದುರ್ವ್ಯಯವಾಗುತ್ತಿದೆಯೆಂಬುದನ್ನೂ ಸರಕಾರದ ಈಗಿನ ಆಹಾರ ರೀತಿಯಿಂದ ಜನರು ಕೊಡುತ್ತಿರುವ ಹಣ ಸರಕಾರದ ಮೂಲಕ ಅಲ್ಪಸಂಖ್ಯಾಕರಿಗಾಗಿ ಹೇಗೆ ಅಪವ್ಯಯವಾಗುತ್ತಿದೆಯೆಂಬುದನ್ನೂ ಚೆನ್ನಾಗಿ ವಿವರಿಸಿದರು. ಶ್ರೀ ಭೂಪಾಳಂ ಚಂದ್ರಶೇಖರ ಅಯ್ಯನವರು ಸಂಸ್ಥಾನದ ಆರ್ಥಿಕಸ್ಥಿತಿ ಉತ್ತಮವಾಗಿದ್ದರೂ ಅದನ್ನು ಸರಿಯಾಗಿ ನಿರ್ವಹಿಸಲು ಜೊಬಾಬ್ದಾರ ಸರಕಾರವಲ್ಲದೆ ಸಧ್ಯದ ಸರಕಾರ ಸಮರ್ಥವಿಲ್ಲ ಎಂದು ಟೀಕಿಸಿದರು.

ಶ್ರೀ ಎನ್ ಶ್ರೀನಿವಾಸಮೂರ್ತಿಯವರು ವಿಶ್ವವಿದ್ಯಾನಿಲಯದ ಪರಿಸ್ಥಿತಿಯನ್ನು ಉತ್ತಮಗೊಳಿಸುವುದರ ಬಗ್ಗೆ ಮಾತಾಡಿದರು.

"ಈಸೂರಿನ ಹೋರಾಟದ ರಾಜಕೀಯ ಬಂದಿಗಳಲ್ಲಿ ಇದುವರೆಗೆ ೧೧ ಜನರನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ಉಳಿದ ೭ ಜನ ಕೈದಿಗಳು ದೊಡ್ಡ ಅಪರಾಧದ ಕಾರಣದಿಂದ ಬಿಡುಗಡೆ ಮಾಡಲ್ಪಟ್ಟಿಲ್ಲ" ಎಂದು ಸರಕಾರದ ಕಾಯಿದೆಯ ಕಾರ್ಯದರ್ಶಿಗಳು ಶ್ರೀ ಕೆ ಬಂಗಾರಪ್ಪ ಎಂಬ ಸದಸ್ಯರ ಪ್ರಶ್ನೆಗೆ ಉತ್ತರವಾಗಿ ಹೇಳಿದರು.

ಸಂಸ್ಥಾನದಲ್ಲಿ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಯ ಬಗ್ಗೆ ಕೊಡುತ್ತಿರುವ ಸಹಾಯ ಸವಲತ್ತುಗಳನ್ನು ಸರಕಾರದ ಅಭಿವೃದ್ಧಿ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ಸಿ ಇ ನೊರೋನ್ಹಾರವರು ವಿವರಿಸಿದ ನಂತರ ಗೃಹಕೈಗಾರಿಕೆಗಳಿಗೆ ತಿಂಗಳೊಂದಕ್ಕೆ ೨೫ ರೂಪಾಯಿಗಳಿಂದ ಹಿಡಿದು ೩೦೦೦ ರೂ. ಗಳ ವರೆಗೆ ಕೊಡುತ್ತಿರುವ ಸಹಾಯ ದ್ರವ್ಯ ಸಾಲದೆಂದು ಶ್ರೀಮತಿ ಗಂಗಮ್ಮನವರು ಹೇಳಿದರು. ವಿದ್ಯಾವಂತ ಮಹಿಳೆಯರಿಗೆ ಸಾಕಷ್ಟು ಉತ್ತೇಜನವಿಗುತ್ತಿಲ್ಲವೆಂಬುದನ್ನು ಶ್ರೀಮತಿ ಸುಬ್ಬಮ್ಮನವರು ಸರಕಾರದ ಗಮನಕ್ಕೆ ತಂದರು. ಉತ್ತರವಾಗಿ ವಿದ್ಯಾವಂತ ನಿರುದ್ಯೋಗಿಗಳು ಸ್ವಂತ ಕೈಗಾರಿಕೆಗಳನ್ನು ನಿರ್ವಹಿಸಿಕೊಳ್ಳಲು ಅನುಕೂಲವಾಗುವಂತೆ ೨೦೦೦ ರೂಪಾಯಿಗಳ ವರೆಗೆ ಸಾಲಕೊಡಲು ಸರಕಾರದವರು ಯೋಜನೆ ಮಾಡಿದ್ದಾರೆಂದೂ ಅದಕ್ಕಾಗಿ ೪೦೦ ಅರ್ಜಿಗಳು ಬಂದಿದ್ದು ಅವುಗಳನ್ನು ಪರಿಶೀಲಿಸಲಾಗುತ್ತಿದೆಯೆಂದೂ ಕೈಗಾರಿಕೆಗಳ ಸಹಾಯಕ ನಿರ್ದೇಶಕರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ಹೇಳಿದರು.

ಪ್ರ. ಪ್ರ. ಸಭೆಯ ಎಂಟನೆಯ ದಿನದ ಸಭೆಯಲ್ಲಿ ಶಿಕ್ಷಕರ ಸಂಬಳ ಹೆಚ್ಚಿಸುವ ವಿಚಾರವನ್ನು ಶ್ರೀ ಜೆ ಟಿ ಗೋಪಾಲ ಕೃಷ್ಣನ್ನರು ಎತ್ತಿದರು. ಅದಕ್ಕೆ "ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳ ಉಪಾಧ್ಯಾಯರ ಮೂಲ ಸಂಬಳವನ್ನೂ ತುಟ್ಟಿಭತ್ತೆಯನ್ನೂ ಹೆಚ್ಚಿಸಬೇಕೆಂದು ಸರಕಾರಕ್ಕೆ ಒತ್ತಾಯಗಳು ಬಂದಿವೆ. ಅದನ್ನು ಪರಿಶೀಲಿಸಲು ಸಮಿತಿಯೊಂದನ್ನು ನಿಯಮಿಸಲಾಗಿದೆ. ಫೆಬ್ರುವರಿ ತಿಂಗಳಲ್ಲಿ ಅವರೆಲ್ಲರಿಗೂ ಒಂದು ತಿಂಗಳ ಸಂಬಳದಷ್ಟು ಪರಿಹಾರ ಕೊಡಲಾಗಿದೆ" ಎಂಬ ಉತ್ತರ ಕೊಡಲಾಯಿತು. ಉಕ್ತ ಸಮಿತಿಯವರು ೮ ತಿಂಗಳಿಂದಲೂ ಸುಮಾರು ೧೧ ಸಭೆಗಳನ್ನು ನಡೆಸಿ ಪರ್ಯಾಲೋಚನೆ ನಡೆಸುತ್ತಿದ್ದಾರೆಂದೂ ಅವರು ಇನ್ನೊಂದೆರಡು ತಿಂಗಳುಗಳಲ್ಲಿ ತಮ್ಮ ವರದಿಯನ್ನೊಪ್ಪಿಸುವರೆಂದೂ ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ಹೇಳಲಾಯಿತು. ಆ ಸಮಿತಿಯ ಶಿಫಾರಸುಗಳು ಹಿಂದಿನ ತಾರೀಖಿನಿಂದ ಅಮಲಿನಲ್ಲಿ ಬರುವಂತೆ ಮಾಡಲಾಗುವದೆಂದೂ ತಿಳಿಸಲಾಯಿತು. ಏಡೆಡ್ ಶಾಲೆಗಳು, ಸ್ಥಳೀಯ ಸಂಸ್ಥೆಗಳಿಂದ ನಡೆಸಲ್ಪಡುವ ಶಾಲೆಗಳು ಮತ್ತು ಖಾಸಗಿ ಶಾಲೆಗಳು ಸಮಿತಿಯ ಕಾರ್ಯಕ್ಷೇತ್ರದೊಳಗೆ ಬರುವುದಿಲ್ಲವೆಂದೂ ಸ್ಪಷ್ಟಪಡಿಸಲಾಯಿತು.

ರೈತರಿಗೆ ಅವನು ಕೊಡುತ್ತಿರುವ ಹಣಕ್ಕೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ—ಮಲೆನಾಡಿನ ಬಗ್ಗೆ ಸರಕಾರ ಸಾಕಷ್ಟು ಗಮನ ಕೊಟ್ಟಿಲ್ಲ ನಿಮ್ನ ವರ್ಗಗಳ ಏಳಿಗೆ ಧನಸಹಾಯ ಕಡಿಮೆಯಾಯಿತು. ಕಡೂರು ಚಿಕ್ಕಮಗಳೂರು ರಸ್ತೆಯ ದುರಸ್ತಿಯ ಬಗ್ಗೆ ಇನ್ನೂ ಹಣಮಂಜೂರಾಗಿಲ್ಲ. ಎಂಬಂತಹ ಹಲವಾರು ವಿಷಯಗಳ ಮೇಲೆ ಪ್ರಶ್ನೋತ್ತರಗಳಾದವು.

ಜೂನ ೫ ರ ಮಧ್ಯಾಹ್ನ ಮಿ ಅಲಂ ಎಂಬ ಮುಸ್ಲಿಂ ಸದಸ್ಯರು "ಹಿಂದೂ ಗೂಂಡಾಗಳು" ಎಂಬ ಪದ ಪ್ರಯೋಗ ಮಾಡಲಾಗಿ ಗೊಂದಲವೆದ್ದು ಅವರು ಅದನ್ನು ಹಿಂತೆಗೆದುಕೊಂಡರು.

ಚಿಕ್ಕ ಮಗಳೂರಿಗೆ ಇಂಟರ್ ಕಾಲೇಜು ಬೇಕೆಂಬ ಮತ್ತು ಮುಸ್ಲಿಮರಲ್ಲಿ ಒತ್ತಾಯದ ವಿದ್ಯಾಭ್ಯಾಸ ತರಬೇಕೆಂಬ ಬೇಡಿಕೆಗಳು ಸರಕಾರದ ಮುಂದಿಡಲ್ಪಟ್ಟವು.

ಪ್ರಜಾ ಪ್ರತಿನಿಧಿ ಸಭೆಯ ಗೃಹ ಸಮಿತಿಗೆ ೮ ಜನರನ್ನು ಆರಿಸಲಾಯಿತು. ಅವರಲ್ಲಿ ಬಬ್ಬಳು ಮಹಿಳೆ ಮತ್ತೊಬ್ಬರು ಮುಸಲ್ಮಾನರು. ಅನಂತರ ರಾ ಬ ರಾಮಸ್ವಾಮಿಯವರನ್ನೂ ಶ್ರೀಮತಿ ಗಂಗಮ್ಮನವರನ್ನೂ ಸರಕಾರದವರು ಸಮಿತಿಗೆ ನಿಯಮಿಸಿದರು.

ಕಾಂಗ್ರೆಸ್ ಪಕ್ಷದ ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರು ತಂದ ಭಾರತ ಸಮಸ್ಯಾ ಪರಿಹಾರದಿಂದಾದ ಸಂತೋಷವನ್ನು ವ್ಯಕ್ತಪಡಿಸುವ ಗೊತ್ತುವಳಿ ಸರ್ವಾನುಮತದಿಂದ ಪಾಸಾಯಿತು.

ಮುಂಗಡ ಪತ್ರಿಕೆಯ ಮೇಲಿನ ಭಾಷಣಗಳು ಪುನಃ ಪ್ರಾರಂಭವಾದಾಗ ತಮ್ಮ ಪಕ್ಷದ ಸದಸ್ಯರಿಗೆ ಅಧ್ಯಕ್ಷರು ಉಕ್ತಪತ್ರಿಕೆಯ ಮೇಲೆ ಮಾತಾಡಲು ಸಾಕಷ್ಟು ಸಮಯ ಕೊಡುತ್ತಿಲ್ಲವೆಂದೂ ಸಭೆಯಲ್ಲಿ ಶಿಸ್ತಿಲ್ಲವೆಂದೂ ಈವರ್ತನೆಗಾಗಿ ಅಧ್ಯಕ್ಷರನ್ನು ವಿರೋಧಿಸುತ್ತೇವೆಂದೂ ಶ್ರೀ ಎಂ. ಎನ್. ಜೋಯಿಸರು ಹೇಳಲು ಕಾಂಗ್ರೆಸ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು.

ಮೈಸೂರು ರಾಜಸ್ಥಾನಕ್ಕೆ ಸೇರಬೇಕೆಂದು ಮುಸ್ಲಿಂಲೀಗಿನವರೊಬ್ಬರೂ ಸರಕಾರ ಮುಸ್ಲಿಂ ಪ್ರೋತ್ಸಾಹಕ ನೀತಿಯನ್ನು ಅನುಸರಿಸುತ್ತಿದೆಯೆಂದು ಮತ್ತೊಬ್ಬ ಸದಸ್ಯರೂ ಹರಿಜನರಿಗೆ ದೇವಾಲಯ ಪ್ರವೇಶಕ್ಕೆ ಅವಕಾಶ ಕೊಡಬೇಕೆಂದೂ ಹರಿಜನ ಸದಸ್ಯರೊಬ್ಬರು ವ್ಯವಸಾಯ ಪದ್ಧತಿ ಉತ್ತಮಗೊಳ್ಳುವಂತೆ ಮಾಡಬೇಕೆಂದು ಮುಗಿಂದೊಬ್ಬ ಸದಸ್ಯರೂ ಹೇಳಿದರು.

ಜೂನ ೭ ರಲ್ಲಿ ಪೋಲೀಸು ಇಲಾಖೆಯ ಸುಧಾರಣೆಯ ಬಗ್ಗೆ ಶ್ರೀ ಬಿ. ಎನ್. ಗುಪ್ತರು ತಂದ ನಿರ್ಣಯ ಪಾಸಾಗಿ ಸರಕಾರದ ಅನುಕೂಲ ಉತ್ತರದೊರೆಯಿತು.

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರಖಾನೆಯ ಕೆಲಸಗಾರರ ಸೌಕರ್ಯದ ವಿಚಾರವಾಗಿ ಜೂನ ೯ ರಲ್ಲಿ ಕೇಳಲಾದ ಪ್ರಶ್ನೆಗೆ ಪರಿಶೀಲಿಸಲಾಗುವುದೆಂದು ಮಂತ್ರಿಗಳಾದ ಶ್ರೀ ಸಿದ್ದಪ್ಪನವರು ಉತ್ತರಕೊಟ್ಟರು.

ಶಾಲೆಗಳಲ್ಲಿ ವಂದೇಮಾತರಂ ಹಾಡಲಡ್ಡಿಯಿಲ್ಲವೆಂದು ಬಹುಮತದ ನಿರ್ಣಯವಾಗಿ ಮುಸ್ಲಿಂ ಲೀಗಿನ ಪರಾಭವವಾಯಿತು.

ಹಿಂದೂ ಅಂತರ್ಜಾತೀಯ ವಿವಾಹವನ್ನು ಕಾನೂನು ರೀತ್ಯಾ ಅಂಗೀಕರಿಸಬೇಕೆಂಬ ಮಸೂದೆ ಬಹುಮತದಿಂದ ಪಾಸಾಯಿತು.

ಜೂನ ೧೦ ರ ಸಭೆಯಲ್ಲಿ ೧೯೬೭ ರ ಮುದ್ರಣ ಕಾಯಿದೆಯನ್ನು ತಿದ್ದಲು ಸರಕಾರ ತಂದಿದ್ದ ಗೊತ್ತುವಳಿ ಬಹುಮತ ವಿರೋಧದಿಂದ ಬಿದ್ದು ಹೋಯಿತು. ಅನಂತರ ಸಭೆ ಅನಿಯಮಿತ ಅವಧಿ ವರೆಗೆ ಮುಂದುವರಿಯಿತು.

ಅ. ಭಾ. ಕಾ. ಕ. ಸಭೆಯು ಜೂಲೈನ ೩ ನೆಯ ವಾರದಲ್ಲಿ ಮೈಸೂರಿನಲ್ಲಿ ನಡೆಯುವುದೆಂದು ಗೊತ್ತಾಗಿದೆ.



ಮುಂಬಯಿ ಶೇರ ಪೇಟೆ

ತಾ ೧೧

ಕಳೆದವಾರ ಶೇರ ಪೇಟೆಯಲ್ಲಿ ಬಹಳ ಏರಿಳಿತಗಳಾದವು. ಮೌಂಟಬ್ಯಾಟನ್ ಯೋಜನೆಯನ್ನು ಕಾಂಗ್ರೆಸ್ಸೂ ಲೀಗೂ ಒಪ್ಪುವ ವಿಷಯದಲ್ಲಿ ಪರಸ್ಪರ ವಿರುದ್ಧ ವಾರ್ತೆಗಳೆದ್ದು ಬೆಲೆಗಳನ್ನು ಮೇಲೆ ಕೆಳಗೆ ಎಳೆದವು. ಟಾಟಾ ಉಕ್ಕಿನ ಕಾರಖಾನೆಯಲ್ಲಿ ಸಂಪು ಪ್ರಾರಂಭವಾಗುವದೆಂಬ ನಿರಾಧಾರ ಸುದ್ದಿಯೂ ಶೇರ ಪೇಟೆಯಲ್ಲಿಯ ಬದಲಾ ವ್ಯಾಪಾರವನ್ನು ಸರಕಾರ ನಿಲ್ಲಿಸುವದೆಂಬ ಗುಣುಗುಣುವೂ ಬೆಲೆಗಳನ್ನಿಳಿಸಿದವು. ಆದರೀಗ ಸ್ಥಿತಿಗತಿ ಒಂದು ನೆಟ್ಟಗೆ ಬಂದಂತಿದೆ. ಟಾಟಾ ಸ್ಟೀಲ ಡೆಫರ್ಡ ೧೯೦೭-೮-೦ ಯಿಂದ ೨೦೫೦-೦—೦ ರ ವರೆಗೇರಿ ೨೦೪೦-೦—೦ ಕ್ಕೆ ಕೊನೆಗೊಂಡವು. ಡಾಯಿಂಗ ೧೯೯೫-೦-೦ ವರೆಗೇರಿ ೧೦೭೫-೦-೦ ಕ್ಕೂ ಫಿನ್ಲೆ ೨೯೯—೦-೦ ರಿಂದ ೩೦೯-೦-೦ ಕ್ಕೇರಿ ೩೦೮—೦-೦ ಕ್ಕೂ ಕೋಹಿನೂರು ೬೩೯—೦—೦ ರಿಂದ ೬೪೭-೦—೦ ಕ್ಕೇರಿ ೬೪೨—೦—೦ ಕ್ಕೂ ಸ್ವದೇಶಿ ೬೨೪-೦-೦ ರಿಂದ ೬೩೬-೦—೦ ಕ್ಕೇರಿ ೬೩೦—೦-೦ ಕ್ಕೂ ಗೋಕಾಕ ೨೯೮-೦-೦ ರಿಂದ ೩೨೦-೦-೦ ಕ್ಕೂ ಸ್ಥಿತ್ಯಂತರ ಹೊಂದಿದವು. ಇಂಡಿಯನ್ ಆರ್ನ್ಸ ೩೩-೧೦-೦ ರಿಂದ ೩೬-೪-೦ ಕ್ಕೂ ಅಸೋ. ಸಿಮೆಂಟ್ಸ ೧೬೩—೦—೦ ರಿಂದ ೧೭೫-೮-೦ ಕ್ಕೂ ಸುಧಾರಿಸಿದವು. ಬ್ಯಾಂಕುಗಳಲ್ಲಿ ಸೆಂಟ್ರಲ ೯೯-೦-೦ ರ ಸುತ್ತ ಸರಿಯುತಿದ್ದರೆ ಇಂಪೀರಿಯಲ ಎಸ್ ಬಿ ೨೨೧೦-೦-೦ ರಿಂದ ೨೨೪೫-೦-೦ ಕ್ಕೂ ರಿಝರ್ವ ೧೨೦-೦-೦ ರಿಂದ ೧೨೧-೦-೦ ಕ್ಕೂ ಏರಿದವು. ಜಿ. ಪಿ. ನೋಟ ೧೦೧—೨—೦ ರಿಂದ ೧೦೧—೧೩—೦ ಕ್ಕೇರಿತು.

ಚಿನ್ನ—ಬೆಳ್ಳಿ

ವಿಭಜನೆಯ ಸುದ್ದಿಯಿಂದ ಮೊದಲು ಚಿನಿವಾರ ಕಟ್ಟೆಯಲ್ಲಿ ಬೆಲೆ ಇಳಿಯುವಂತೆ ಕಂಡರೂ ತಿರುಗಿ ಮೇಲೇರ ತೊಡಗಿತು. ಪೇಟೆಯಲ್ಲಿ ಚಿನ್ನವೇ ಇಲ್ಲ. ಹೊರಗಿಂದ ತರಿಸುವದು ಸಾಧ್ಯವಿಲ್ಲ. ತಯಾರಿ ಚಿನ್ನ ೧೧೨—೮—೦ ವರೆಗೇರಿ ೧೧೨—೦—೦ ರಲ್ಲಿ ಕೊನೆಗೊಂಡಿತು. ಬೆಳ್ಳಿ ೧೬೬—೪—೦ ರಿಂದ ೧೬೯-೧೨-೦ ಕ್ಕೇರಿತು.

ಅರಳೆ ಪೇಟೆ

ಬ್ರಿಟಿಶ ಪ್ರಕಟನೆಯಿಂದ ಅರಳೆ ಪೇಟೆಯ ಮೇಲೆ ಏನೂ ಪರಿಣಾಮವಾಗಲಿಲ್ಲ. ಸೆಪ್ಟಂಬರ ವಾಯಿದೆ ೪೩೬-೬-೦ ರಿಂದ ೪೩೫-೦-೦ ಕ್ಕಿಳಿದು ಅದರ ಹತ್ತಿರವೇ ಸುಳಿದಾಡುತಿತ್ತು. ಆದರೆ ಅರಳೆಯ ನಿರ್ಯಾತಕ್ಕೆ ಅಗಸ್ಟ ಕೊನೆಯ ವರೆಗೆ ಸರಕಾರ ಅಪ್ಪಣೆ ಕೊಟ್ಟಿದ್ದರಿಂದ ಅದು ಒಮ್ಮಿಂದೊಮ್ಮೆ ೪೪೮-೮-೦ ರ ವರೆಗೇರಿ ೪೪೭—೧೨—೦ ರಲ್ಲಿ ಕೊನೆಗೊಂಡಿತು. ಹಜರ ೪೩೮ – ೪—೦ ರಲ್ಲಿದೆ.

ಎಣ್ಣೆಕಾಳು

ಶೇಂಗಾ	೧೫೦-೦-೦
ಅಗಸಿ	೨೬-೬-೦
ಅಗಸಿ ಎಣ್ಣೆ	೧೮-೧೨-೦

ಸಾಂಗಲಿ ಪೇಟೆ

ಅರಿಷಣ ಹೇರು		೧೦೦-೧೦೮
ಮೆಣಸಿನಕಾಯಿ ಹೇರು ,,		೧೦೦-೧೭೫
ಶೇಂಗಾ	ಖಂಡಿ	೧೨೫

ಶಿವಮೊಗ್ಗೆ

ಅಡಿಕೆ ದೇಶಾವರ ನಂ ೧ ಮಣ ೧ಕ್ಕೆ	೫೦-೫೧
,, ,, ೨	೪೬-೪೯
ಅನ್ನಾವರಂ	೪೦-೪೬
ಪೇಟನ	೫೧-೫೨
ರಾಮಚಂದ್ರಪುರ	೪೫-೪೮
ರಾಜಾಅಲವು	೪೪-೪೭॥
ತೊರಸಾಲು	೪೦-೪೫
ಬೆಟ್ಟೆ ವಂತಿ	೩೩-೩೪
ಬೆಟ್ಟೆ	೨೮-೨೯

ಹುಬ್ಬಳ್ಳಿ

ಜಯವಂತ ಹತ್ತಿ	ನಂ. ೧	೨೫೫-೨೬೦
"	ನಂ. ೨	೨೨೫-೨೪೦
"	ನಂ. ೩	೨೦೦-೨೨೦
ಅಪಲಂಡ ಹತ್ತಿ		೨೪೫-೨೬೦
ಜಿನ ಹೊಸದು		೧೬೦-೧೭೦
ಜಿನ ಹಳೇದು		೧೭೫-೧೮೨
ಡಬಲರೋಲ		೧೫೫-೧೬೫
ಸಾಜಿನ		೧೫೦-೧೫೫

ಬೆಂಗಳೂರು-ಮೈಸೂರು

ಗೋರಖಪುರದಲ್ಲಿ ನಡೆಯಲಿರುವ ಅ. ಭಾ. ರೇಲ್ವೆ ಕೆಲಸಗಾರರ ಸಮ್ಮೇಳನಕ್ಕೆ ಮೈಸೂರು ರೇಲ್ವೆ ಕೆಲಸಗಾರರ ಸಂಘದ ಉಪಾಧ್ಯಕ್ಷರಾದ ಶ್ರೀ. ಎನ್. ಎಲ್ ನರಸಪ್ಪನವರು ಜೂನ ೩ರಲ್ಲಿ ಪ್ರಯಾಣ ಬೆಳೆಸಿದರು.

ಮೈಸೂರ ಸಂಸ್ಥಾನವು ಮುಂದೆ ರಚಿತವಾಗುವ ಹಿಂದೂ ಯೂನಿಯನ್ನಿಗೆ ಸೇರಬೇಕೆಂದೂ ಅದಕ್ಕಾಗಿ ಅಲ್ಲಿಯ ಘಟನಾ ಸಮಿತಿಗೆ ಕೂಡಲೆ ಸೇರಬೇಕೆಂದೂ ಒತ್ತಾಯ ಮಾಡುವ ತಂತಿಯೊಂದನ್ನು ಈಗ ದಿಲ್ಲಿಯಲ್ಲಿರುವ ಮೈಸೂರಿನ ದಿವಾನರಿಗೆ ಪ್ರ. ಪ್ರ. ಸಭೆಯ ಪ್ರಗತಿ ಪಂಥದ ಅಧ್ಯಕ್ಷರು ಕಳುಹಿಸಿದ್ದಾರೆ.

ಜೊಬಾಬ್ದಾರ ಸರಕಾರವನ್ನು ಅತಿ ತ್ವರೆಯಿಂದ ಮೈಸೂರಿನಲ್ಲಿ ರಚಿಸಬೇಕೆಂದೂ ಶಾಸನ ಸಭೆಯ ಬೆಂಬಲವನ್ನು ಪಡೆಯುವ ಶಕ್ತಿಯನ್ನು ಹೊಂದಿದಂತಹ ತಾತ್ಕಾಲಿಕ ಮಂತ್ರಿಮಂಡಲವೊಂದು ಈ ಕೂಡಲೆ ಸ್ಥಾಪಿತವಾಗುವದು ಅಗತ್ಯವೆಂದೂ ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಜೂನ ೫ರ ಸಂಜೆ ಕಾಂಗ್ರೆಸ್ ಭವನದಲ್ಲಿ ತಾವು ಕರೆದಿದ್ದ ಪತ್ರಿಕಾ ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತ ಹೇಳಿದರು.

ಮಿನರ್ವಾಮಿಲ್ಸ್ ಕೆಲಸಗಾರರ ಸಂಘದವರು ಮಾಲೀಕರ ಮುಂದೆ ಇಟ್ಟಿದ್ದ ೧೧ ಬೇಡಿಕೆಗಳನ್ನು ಸರಕಾರದವರು ವಿಚಾರಣೆಗಿಟ್ಟಿದ್ದಾರೆ. ಇದೇ ತಿಂಗಳು ೧೧ಕ್ಕೆ ಅದು ಆರಂಭವಾಗಲಿದೆಯೆಂದು ಉಕ್ತಕೆಲಸಗಾರರ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮೈಸೂರು ನಗರದ ಕಟ್ಟಡದ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆ ಜೂನ ೧೮ ಸಂಜೆ ನಡೆಯಿತು. ಸಂಘದ ನಿಯಮಗಳನ್ನು ರಚಿಸಿ ಅದನ್ನು ರಜಿಸ್ಟರ್ ಮಾಡಿಸಿ ಅದರ ಆಶ್ರಯದಲ್ಲಿ ಬ್ಯಾಂಕಿಂಗ್, ಆಹಾರದ ಉಗ್ರಾಣ ಮತ್ತು ಇನ್ಶೂರೆನ್ಸ್ ಶಾಖೆಗಳುಳ್ಳ ಸಹಕಾರ ಸಂಘ ಸ್ಥಾಪಿತವಾಗಬೇಕೆಂಬ ಗೊತ್ತುವಳಿ ಪಾಸಾಯಿತು.

ದಕ್ಷಿಣ ಕನ್ನಡ

ಉಡುಪಿಯ ಕ್ರಿಶ್ಚಿಯನ್ ಹೈಸ್ಕೂಲಿನ ನಿವೃತ್ತ ಕನ್ನಡ ಪಂಡಿತರಾಗಿದ್ದ ಶ್ರೀ ವೆಂಕಟರಾಮಾಚಾರ್ಯರು ಆಕಸ್ಮಿಕವಾಗಿ ನಿಧನ ಹೊಂದಿದರೆಂದು ತಿಳಿದು ಬಂದಿದೆ.

ಕುಂದಾಪುರ ತಾಲೂಕಿನ ಪ್ರಸಿದ್ಧ ಪಂಚಾಂಗಕರ್ತರಾದ ಶ್ರೀ ಮೊಗೇರಿ ಭಾಸ್ಕರ ಅಡಿಗರಿಗೆ ದ್ವಾರಕಾಪೀಠದ ಜಗದ್ಗುರುಗಳು "ದೈವಜ್ಞ ಪಂಚಾನನ" ಎಂಬ ಬಿರುದನ್ನು ದಯಪಾಲಿಸಿರುವರು.

ಕುಂಬಳೆಯ ಸುಳ್ಯ ರಸ್ತೆಯಲ್ಲಿದ್ದ ಬಸ್ಸು ಚಲಾವಣೆ ಕಳೆದ ಎರಡು ವಾರಗಳಿಂದ ರದ್ದಾಗಿ ಪ್ರಯಾಣಿಕರಿಗೆ ತುಂಬಾ ಅನಾನುಕೂಲವಾಗಿದೆ.

ಮಂಗಳೂರಲ್ಲಿ ತಾ ೩೧ ಕ್ಕೆ ರಾ. ಬ. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ದಿವಂಗತ ಎಚ್ ಕೊರಗಪ್ಪ ಸ್ಮಾರಕ ಸಮಿತಿಯ ಸಭೆ ಕೂಡಿ ಅಧಿಕಾರವರ್ಗದವರ ಆಯ್ಕೆಯಾಯಿತು.

ಸ್ಥಳೀಯ ಡೆಪ್ಯುಟಿ ಇನ್ಸ್ಪೆಕ್ಟರರಾದ ಉ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಕುಂದಾಪುರದ 'ಕದಳೀ ಸಾಹಿತ್ಯ ಭಂಡಾರ' ದವರು ಕನ್ನಡ ಸಾಹಿತ್ಯೋತ್ಸವವನ್ನು ಜೂನ ೧ ರಲ್ಲಿ ನೆರವೇರಿಸಿದರು.

ದ. ಕ. ಜಿಲ್ಲಾ ಮಕ್ಕಳ ಕೂಟದ ದ್ವಿತೀಯ ಸಮ್ಮೇಲನವು ಮೇ ೨೮-೨೯ ರಲ್ಲಿ ಉಡುಪಿ ಪಡೆಯಾಡಿ ಶ್ರೀ ವಿದ್ಯಾನಿಧಿ ತೀರ್ಥಸ್ವಾಮಿ ಪ್ರಾಥಮಿಕ ಶಾಲೆಯಲ್ಲಿ ಜರುಗಿತು.

ಈ ವಾರದ ಕಥೆ



ಅಂದು ದೇಸಾಯರ ಮನೆಯಲ್ಲಿ ಸಂತೋಷದಕೂಟ. ಮಕ್ಕಳಿಲ್ಲದ ದೇಸಾಯರಿಗೆ ಮಗನು ಜನಿಸಿದುದಕ್ಕೆ ಇಂಥಾ ಕಠಿಣ ಕಾಲದಲ್ಲಿಯೂ ದೂರ ದೂರದಿಂದ ಮಿತ್ರರೂ ಆಹ್ವಾನಿತರಾದ ಇನ್ನಿತರರೂ ಸೇರಿದ್ದರು. ಉದ್ಯಾನವನದಲ್ಲಿ ಸೇರಿದ ಜನರೆಲ್ಲರನ್ನೂ ಬರಮಾಡಿಕೊಂಡು, ಇನ್ನೂ ಬರುತ್ತಲಿರುವ ಮಿತ್ರ ವರ್ಗದವರನ್ನು ಎದುರುಗೊಳ್ಳಲು ಉತ್ಸಾಹಪೂರ್ಣರಾದ ದೇಸಾಯರೇ ಮನೆಯ ಮುಂದಿನ ಗೇಟಿನಲ್ಲಿ ನಿಂತಿದ್ದರು. ಸಂಜೆಯ ಅಲ್ಪೋಪಹಾರವೆಂದು ನಿರ್ಣಯಿಸಿದ್ದರೂ ದೇಸಾಯರು ಅದನ್ನೇ ದೊಡ್ಡ ಊಟದಷ್ಟು ಏರ್ಪಾಟು ಮಾಡಿದ್ದರು. ಬಂದವರೆಲ್ಲಾ ನವನಾಗರಿಕರೇ ಝಗಝಗಿಸುವ ವೇಷಭೂಷಣಗಳೊಂದಿಗೆ, ದೇಸಾಯರ ಅಂತಸ್ತಿಗೆ ತಲೆದೂಗುವಹಾಗೆ ಅಲಂಕಾರವನ್ನು ಮಾಡಿಕೊಂಡಿದ್ದರು. ಗಂಡಸರೇ ಇಷ್ಟು ಮಾಡಿದಮೇಲೆ ಹೆಂಗುಸರದಿನ್ನೇನು? ಅವರಂತೂ ಮಿಂಚಿನಂತೆ ಅಲಂಕಾರಮಾಡಿಕೊಂಡು ಚಕಮಕಿಸುತ್ತಿದ್ದರು! ಅದೇನು ಕಾಡುಹಳ್ಳಿಯೆ? ದೊಡ್ಡ ನಗರದಲ್ಲಿ ಯಾವುದಕ್ಕೇನು ಕಡಮೆ? ಎಲ್ಲಿ ನೋಡಿದರೂ ನಗು, ಹಾಸ್ಯ, ಕುಲು ಕುಲು ಧ್ವನಿಗಳು ಸಂತೋಷದ ಕೂಗುಗಳು, ಸಂಗೀತದ ಹರುಷ ಸ್ವರಗಳು, ಎಲ್ಲವೂ ಆನಂದಮಯ. ಎಲ್ಲರ ಮುಖಗಳಲ್ಲಿಯೂ ನಗುವಿನ ನೋಟವೇ, ಹುರುಪೇ.

ಸ್ವತಃ ದೇಸಾಯರು ಎಲ್ಲರನ್ನೂ ಸ್ವಾಗತಿಸಿ, ಆಹ್ವಾನಿತರೆಲ್ಲಾ ಬಂದರೆಂದು ಗಟ್ಟಿಮಾಡಿಕೊಂಡನಂತರ, ಸೇವಕರನ್ನು ಕರೆದು ಬಂದ ಅತಿಥಿಗಳಿಗೆ ಫಲಾಹಾರಾದಿಗಳನ್ನು ಹಂಚಲು ಅಪ್ಪಣೆಯನ್ನಿತ್ತರು. ತೋಟದಲ್ಲಿ ಏರ್ಪಡಿಸಿದ ಆಸನಗಳಲ್ಲಿ ಎಲ್ಲರೂ ಕುಳಿತಿರುವಾಗ ಮನೆಯಲ್ಲಿ ತಯಾರಿಸಿದ ಅಲ್ಪೋಪಹಾರದ ತಿಂಡಿ ಪದಾರ್ಥಗಳನ್ನು ಹಂಚಿದರು. ಟೇಬಲದ ಮೇಲಿರಿಸಿದ ತಿಂಡಿತಿನಸುಗಳಿಗೇನು ಕಡಮೆಯಿರಲಿಲ್ಲ. ಎಲ್ಲಾ ತರಹದ ಹಣ್ಣುಗಳು, ವಿವಿಧ ಸಿಹಿ ತಿನಸುಗಳು, ಕಾರದಸಾಮಾನುಗಳು, ಬಿಸ್ಕತ್‌ಗಳು ಎಲ್ಲವನ್ನೂ ಇರಿಸಿದ್ದರು. ಯಾರಿಗೆಷ್ಟು ಬೇಕೋ ಏನು ಬೇಕೋ ತಿನ್ನುವುದಕ್ಕೆ ಸ್ವಾತಂತ್ರ್ಯವಿತ್ತು.

ದೇಸಾಯರು ಯಾವುದಕ್ಕೂ ಕಡಮೆ ಮಾಡಿರಲಿಲ್ಲ. ವಂಶೋದ್ಧಾರಕನಾದ ಪುತ್ರಜನನದ ನೆನಪಿಗೆಂದು ಏರ್ಪಡಿಸಿದ ಈ ಸಮಾರಂಭವು ಆ ಪ್ರಾಂತಕ್ಕೆ ಮಾದರಿಯದಾಗಿರಬೇಕೆಂದು ಹೆಚ್ಚು ಶ್ರದ್ಧೆವಹಿಸಿ, ಸ್ವತಃ ತಾವೇ ನಿಂತು, ಎಲ್ಲವನ್ನೂ ನೋಡಿಕೊಂಡಿದ್ದರು. ಅಂದಮೇಲೆ ಸೇರಿದ ಜನರು ಯಾವ ತಪ್ಪನ್ನೂ ಕಂಡು ಹಿಡಿಯುವಂತಿರಲಿಲ್ಲ. ಇದರ ಜೊತೆಗೆ ಸಂಗೀತ ಜಲಸಾದ ಕಾರ್ಯಕ್ರಮವೂ ಇತ್ತು. ಯಾವುದನ್ನು ತಿನ್ನಬೇಕು, ಏನನ್ನು ಕೇಳಬೇಕು, ಕಾಲ ಹೇಗೆ ಕಳೆಯಬೇಕು ಎಂಬ ಯೋಚನೆಗಳಿಗೆ ಸ್ಥಾನವೇ ಇರಲಿಲ್ಲ. ಅಂದು ಸಂಜೆ ಅಲ್ಲಿ ನೆರೆದ ಆ ಸಮಾರಂಭದಲ್ಲಿ ಎಲ್ಲರೂ ಮಗ್ನರಾಗಿದ್ದರು. ಹೊರಗೆ ಏನು ನಡೆಯುತ್ತಿದೆ ಎಂಬುದರ ಅರಿವು ಯಾರಿಗೂ ಇರಲಿಲ್ಲ.

ಹೀಗೆ ಇವರೆಲ್ಲರೂ ಮೈಮರೆತು, ಸಂತೋಷದಲ್ಲಿದ್ದಾಗ, ಬೀದಿಯಲ್ಲಿ ಏನೋ ಹೆಚ್ಚಿನ ಗಲಾಟೆಯಾದಂತಾಗಿ, ಎಲ್ಲರ ದೃಷ್ಟಿಯೂ ಆ ಕಡೆ ಎಳೆಯಲ್ಪಟ್ಟಿತು. ಅಲ್ಲಿ ನಡೆದ ಕಾರ್ಯವೇನೆಂದು ನೋಡಲು ಎಲ್ಲರೂ ಇದ್ದಕ್ಕಿದ್ದಂತೆ ಹೊರಗೆ ಬಂದರು. ಕೆಲವರ ಕೈಯಲ್ಲಿ ಅರೆತಿಂದ ಹಣ್ಣು, ಅದೇ ನುಂಗುತ್ತಲಿದ್ದ ಅವರ ಬಾಯಿಯಲ್ಲಿಯ ಅನ್ನದ ತುತ್ತು, ಅರೆಕಡಿದ ಚಪಾತಿಯ ತುಂಡು, ಕೆಲವರ ಕೈಯಲ್ಲಿ ಐಸ್‌ಕ್ರೀಮ ಚೂರುಗಳು, ಇನ್ನಿತರರ ಕೈಗಳಲ್ಲಿ ಬಿಸ್ಕೀಟಿನ ಚೂರುಗಳು! ಎಲ್ಲರೂ ಇದ್ದಕ್ಕಿದ್ದಹಾಗೇ ಹೊರಗೆ ಅನಾಹುತವೇನೋ ನಡೆದಿದೆ ಎಂಬುದನ್ನು ನೋಡುವ ಆತುರದಿಂದ ಹೊರಬಿದ್ದರು.

ಹೊರಗೆ ಅವರ ಕಣ್ಣಿಗೆ ಕಾಣಿಸಿದುದು ಚಿಂತಾಜನಕವಾದ ಬಡವರ ಚಿತ್ರ. ಹರಕು ಚಿಂದಿಯನ್ನುಟ್ಟು, ಜೀರ್ಣಕಾಯರಾದ, ದೀನಾವಸ್ಥೆಯಲ್ಲಿದ್ದ ಮೂವರು ಭಿಕ್ಷುಕರು ನಿಂತಿರುವರು. ನಿಲ್ಲುವುದಕ್ಕೂ ಶಕ್ತಿಯಿಲ್ಲದಂತಿತ್ತು ಅವರ ಆಗಿನ ಸ್ಥಿತಿ. ಗೇಟಿನ ಕಾವಲದವನು ಕೈಯಲ್ಲಿಯ ದೊಡ್ಡ ಗಡುತರವಾದ ಲಾಠಿಯನ್ನು ತಿರುವುತ್ತ ಅವರನ್ನು ಅಂಗಳದೊಳಗಿಂದ ಬೀದಿಯಲ್ಲಿ ಬೈಗಳ ಮಳೆ ಸುರಿಸುತ್ತ ದೂಡುತ್ತಿದ್ದನು. ಬೀದಿಯಲ್ಲಿ ಮನೆಯ ಎದುರಿಗೆ ಸಹಾ ನಿಲ್ಲಬಾರದೆಂದು ಅವನ ಹಠ. ಅವರು ಬಹು ದೈನ್ಯದಿಂದ ಬೇಡುತ್ತಲಿರುವರು. ಇಪ್ಪತ್ತೈದು ವರುಷದ ಪ್ರಾಯದವನು, ಅವನ ಹತ್ತು ವರುಷದ ತಮ್ಮ ಮತ್ತು ಐವತ್ತು ವರುಷದ ತಾಯಿ, ಈ ಮೂವರನ್ನೇ ದೇಸಾಯರ ಮನೆಯ ಕಾವಲುಗಾರನು ಬೆದರಿಸಿ ಹೊರದೂಡುತ್ತಿದ್ದರು. ಬಹಳ ಹಸಿದು ಹಸಿವೆಂದು ಹೇಳಿಕೊಳ್ಳುವ ಅವರ ಮಾತುಗಳನ್ನು ಸಿಪಾಯಿಯು ಗಮನಿಸಲೇ ಇಲ್ಲ. ತನ್ನ ಅಮಲಿನಲ್ಲೇ "ಕಳ್ಳಸೂಳೇ ಮಕ್ಕಳು. ಭಿಕ್ಷೆ ಹಾಕಬೇಕಂತೆ. ಇವರ ಗಂಟೇನು ಹೋಯಿತು? ಎಷ್ಟು ಹೇಳಿದರೂ ಕೇಳರು" ಎಂದು ಮಾತನಾಡುತ್ತಾ ಆ ಭಿಕ್ಷುಕರನ್ನುದ್ದೇಶಿಸಿ "ಹೋಗೋದಿಲ್ಲೇನು? ನಾಯಿಗಿದ್ದಷ್ಟು ನಾಚಿಕೆ ಕೂಡ ನಿಮಗಿಲ್ಲ ಎಲ್ಲಾ ಬಿಟ್ಟವರು. ನಿಮಗೆಲ್ಲಿಯ ಮಾನ, ಮರ್ಯಾದೆ? ಒಂದು ಜಾತಿಯವರಾದರೆ ತಾನೇ ನಿಮಗೆ ದೋಷವಿರಬೇಕು? ಹೂಂ ನಡೆಯಿರಿ. ಇದೇನು ಅನ್ನದಾನದ ಛತ್ರ (ಧರ್ಮಶಾಲೆ) ಎಂದು ತಿಳಿದೀರೇನು? ಸಾಗಲಿ! ನಡೆಯಿರಿ!" ಎಂದು ಗದರಿಸಿಮಾತನಾಡಲು ಆ ಯುವಕನು "ಮಹಾರಾಯರೆ, ಮೂರು ದಿನದಿಂದ ಅನ್ನಾ ಇಲ್ಲ. ಸುತ್ತೀ ಸುತ್ತಿ, ಊರೆಲ್ಲಾ ಸುತ್ತಿಬಂದ್ವಿ; ಒಬ್ಬ ಮಾರಾಯನ ಮನೇಲಾದ್ರೂ ಒಂದಗುಳು ಅನ್ನಾ ಸಿಕ್ಕಲಿಲ್ಲ, ಹಸಿವಿ ಬಾಳಾ ಪೀಡಿಸತೈತಿ, ಕಾಲಾಗ ತ್ರಾಣಾ ಇಲ್ಲ, ನಡೀಲಾಕೆ ಶಕ್ತಿ ಇಲ್ಲ. ನನ್ನ ತಾಯಿ ಮುದುಕಿ, ಕುರುಡಿ, ತಮ್ಮ ಇನ್ನೂ ಸಣ್ಣಾಂವ ಹ್ಯಾಂಗಾದ್ರೂ ದಯಮಾಡ್ರಿ, ಸ್ವಾಮೀ ಕಡೇಗೆ ಊಟ ಗಂಜೀನಾದ್ರೂ ಹಾಕಿದ್ರೆ ಮಾರಾಯ್ರೇ ಮುಂದಿನೂರಿಗೆ ಹೋಗಿ ಹೊಟ್ಟೆ ಹೊರಕೋತೇವಿ ದಯಾಬರಲಿ ನಮ್ಮೇಲೆ" ಎಂದು ಬೇಡಿಕೊಂಡನು.

ಅಲ್ಲಿ ಸೇರಿದ ಜನರಲ್ಲೊಬ್ಬನು "ನಿಮಗೆ ಕುಡಿಯೋದಕ್ಕೆ ಗಂಜೀ ಬೇಕೇನು? ನಿನ್ನ ಬದುಕಿಗಿಷ್ಟು ಬೆಂಕೀಹಾಕ ಏನು ಧಾಡಿ ನಿಂಗೆ? ಹೋಗು ಎಲ್ಲ್ಯಾದರೂ ಕೆಲಸಾ ಮಾಡಿ, ದುಡಿದು ಸಂಪಾದಿಸಬಾರದೆ? ಯಾಕ ಹೀಗೆ ಭಿಕ್ಷೇ ಬೇಡ್ತಿ?" ಎಂದು ಹೇಳಿದ ಮಾತಿಗೆ "ಯಾರು ಕೊಡ್ತಾರ್ರೀ ನಮಗೆ ಕೆಲ್ಸಾನಾ? ಕೇಳೋಕೆ ಹೋದ್ರೆ ದೂರದಟ್ಟಿ ಬಿಡ್ತಾರೆ. ಅವರವರಿಗೆ ಅವರದೆ ಭಾರಾ. ನನಗ್ಯಾರ್ರೀ ಕೆಲಸಾ ಕೊಡ್ತಾರೆ?" ಎಂದು ಹೇಳಿ ಸುಮ್ಮನಾದ.

ಇನ್ನೊಬ್ಬನು ವಿಕಟವಾಗಿ ನಗುತ್ತ "ನಿಮಗೆ ಹಸಿವಾಗ್ತಿದೆ ತಾನೇ? ಇಕೋ" ಎಂದು ಕೈಯಲ್ಲಿಯ ಐಸ್‌ಕ್ರೀಮ ತೆಗೆದು ಅವರ ಮೋರೆಯ ಮೇಲೆ ಬಿಸುಟ. ಇದರ ಹಿಂದೆ ಮಿಕ್ಕವರೆಲ್ಲಾರೂ ತಮ್ಮ ಕೈಯಲ್ಲಿಯ ತಿಂಡಿ ಸಾಮಾನುಗಳೆಲ್ಲವನ್ನೂ ಅವರ ಮುಖದ ಮೇಲೆ ಚೆಲ್ಲಿದರು. ಹಾಸ್ಯದಿಂದ ನಗಹತ್ತಿದರು. ಒಂದೇ ಸವನೆ ಅವರ ಮೇಲೆ ಈ ತಿಂಡಿ ಪದಾರ್ಥಗಳ ಮಳೆ ಸುರಿಸಲು ಮಾಡುವುದೇನೆಂಬುದನ್ನು ತಿಳಿಯದೆ ಸುಮ್ಮನೆ ನಿಂತು ಬಿಟ್ಟರು ಆ ಭಿಕ್ಷುಕರು.

ಇಷ್ಟು ಹೊತ್ತಿಗೆ ದೇಸಾಯರ ಕಿವಿಗೆ ಸುದ್ದಿ ಹೋಗಿದ್ದಿತು. ಕಿಡಿ ಕಿಡಿ ಕೆಂಡಕಾರುತ್ತ, ಮೋರೆ ಕೆಂಪಗೆ ಮಾಡಿಕೊಂಡು ಹೊರಗೆ ಬಂದವರೇ "ಧಡ್ಡ ಸೂಳೇಮಕ್ಕಳೇ, ಹೋಗ್ತಿರೋ ಇಲ್ಲೊ? ನಿಮಗೇನು ಧಾಡಿ, ಎಲ್ಲಾದರೂ ಹೋಗಿ ಬದುಕಬಾರದೆ?" ಎಂದು ಇನ್ನೂ ಏನೇನೋ ಬೈದರು. ಆ ಯುವಕ ಅವರನ್ನುದ್ದೇಶಿಸಿ "ಅಪ್ಪಾ ಸಾಹೇಬರೇ ಸ್ವಲ್ಪೇ ಗಂಜೀ ದಯಪಾಲಿಸ್ರೀ ಪ್ಯಾಪರ, ಮೂರದಿನಾಯ್ತು, ಅಪ್ಪಾದ್ರೆ, ಕಾಪಾಡ್ರಿಯಪ್ಪಾ." ಎಂದು ದೈನ್ಯದಿಂದ ಕೇಳಿಕೊಂಡ ಮಾತುಗಳಿಗೆ ದೇಸಾಯರು ಇನ್ನಿಷ್ಟು ರೇಗಿದರೇ ಹೊರತು ಅವರನ್ನು ಸಮಾಧಾನ ಗೊಳಿಸಲು ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಮಗನು ಹುಟ್ಟಿದುದಕ್ಕೆ ಭಾಗ್ಯವಂತರ ಹೊಟ್ಟೆ ತುಂಬಿದರೇನೇ ತನ್ನ ಮಗನು ಸಿರಿವಂತಿಕೆಯ ಮದದಿಂದಲೇ ಬೆಳೆಯುವನೆಂದು ತಿಳಿದಿದ್ದರು. ಬೆಲೆಬಾಳುವ ತಿಂಡಿತಿನಸುಗಳನ್ನು ಅತಿಥಿಗಳು ಬೀದಿಯಲ್ಲಿ ಬಿಸಾಡಿದರೆ, ಇವರಿಗೆ ಕೋಪವಿಲ್ಲ, ಅದರೆ ಹಸಿವೆಯಾದ ಕರುಳಿನ ತಂತಿ ಮಿಡಿದರೂ ಬಡವರ ಹೊಟ್ಟೆಯ ಚೀಲವು ಬರಿದಾಗಿದ್ದರೂ ಅವರನ್ನು ಸಂತೈಸುವುದರಿಂದ ತನ್ನ ಮನೆತನವೇ ಉದ್ಧಾರವಾಗಬಹುದೆಂಬ ಉದಾರ ಹೃದಯವಿರಲಿಲ್ಲ. ಇನ್ನಿಷ್ಟು ರೊಚ್ಚಿಗೆದ್ದು, ಮನೆಯ ಆಳುಗಳನ್ನು ಕರೆದು ಅವರನ್ನು ಬಹುದೂರದವರೆಗಟ್ಟಿ ಬರಬೇಕೆಂದು ಹೇಳಿ ಅವರು ಹೋಗುವರೋ ಇಲ್ಲವೋ ಎಂಬುದನ್ನು ನಿರ್ಧಾರ ಮಾಡಿಕೊಳ್ಳಲು ಅಲ್ಲಿ ನಿಂತು ಬಿಟ್ಟರು. ಬಂದ ಹಾದಿಗೆ ಸುಂಕವಿಲ್ಲವೆಂದು ತಿಳಿದು ಭಿಕ್ಷುಕರು ಬರಿದಾದ ಹೊಟ್ಟೆಯ ಚೀಲದಿಂದಲೇ ಮುಂದೆ ಸಾಗಿದರು,

"ಬಿಡುಗಣ್ಣವರಿಗೆ ಕಾಣುವದಿಲ್ಲ
ಅಮೃತದ ತೇಗಿನ ಮದವಂತಹದು
ಹಸಿದವ ಬಲ್ಲ ಹಸಿವೆಯ ಶೂಲಿ!"

ರಾತ್ರಿ ಹತ್ತು ಗಂಟೆಯ ಸಮಯ. ಆ ಕಷ್ಟಜೀವಿಗಳು ನಿರಾಶೆಯಿಂದ ಇಲ್ಲ ಇಲ್ಲವೆಂಬ ಮಾತಿನ ಪಾಠವನ್ನು ಕೇಳಿ ಕೇಳಿ ಊರ ಹೊರಗಿನ ಆಲದ ಮರವನ್ನಾಶ್ರಯಿಸಿದರು. ಯಾರೂ ಆಶ್ರಯವನ್ನು ಕೊಡದ ಬಡಜನರಿಗೆ ದೈವವು ಆಶ್ರಯವನ್ನೊದಗಿಸಲು ಯಾವಾಗಲೂ ಸಿದ್ಧವೇ. ಪ್ರಕೃತಿದೇವಿಯು ತನ್ನ ವಿಶಾಲ ಪ್ರಪಂಚದಲ್ಲಿ ಸಾಕಷ್ಟು ನೆರವನ್ನೀಯಲು ಮುಂದೆ ಬಂದಿರುವಕೆಂದೇ ಬಡಬಗ್ಗರು ಜೀವಿಸಲು ಅನುಕೂಲವಾಗಿದೆ. ಆ ಆಲದಮರದಡಿಯಲ್ಲಿ ಅನೇಕ ಬಡಜನರು ವಾಸಿಸುತ್ತಿದ್ದರು. ಇದನ್ನು ತಿಳಿದೋ ತಿಳಿಯದಲೋ ಅವರಲ್ಲಿಗೆ ಬಂದು ಸೇರಿದಾಗ ಕೇವಲ ಗಂಜಿ ಕುಡಿಯುತ್ತಿದ್ದರು; ಬೇಡಿತಂದ ಅನ್ನವನ್ನು ಭಕ್ಷಿಸುತ್ತಿದ್ದರು, ಇನ್ನೂ ಕೆಲವರು ಹಿಟ್ಟನ್ನು ರೊಟ್ಟಿಮಾಡಿ ತಿನ್ನುತ್ತಿದ್ದರು. ಈ ಮೂವರು ಮಾಡುವುದೇನನ್ನೂ ತೋಚದೇ ತಿಳಿಯಾದ ಬೆಳುದಿಂಗಳ ಸವಿಯನ್ನು ಸವಿಯುವ ಇಚ್ಛೆಯಿಂದ ಬುಡದಿಂದ ಸ್ವಲ್ಪದೂರ ಬಯಲಿನಲ್ಲಿ ಇನ್ನಿತರರನ್ನು ದಿಟ್ಟಿಸಿ ನೋಡುತ್ತ ಕುಳಿತರು. ಇವರನ್ನು ನೋಡುತ್ತ, ಓರ್ವ ವ್ಯಕ್ತಿಯು ಸುಮ್ಮನೆ ಕುಳಿತಿದ್ದ. ಹೆಳವ ಇವರ ದೀನಾವಸ್ಥೆಯನ್ನು ನೋಡಿ ಕುಂಟುತ್ತ ಇವರನ್ನು ಸಮೀಪಿಸಿ "ಏನಪ್ಪಾ, ಯಾಕೆ ಸುಮ್ಮನೆ ಅಳುತ್ತೀರಿ ಮಾಮಾ? ಇವತ್ತೇನು ತಿಂಬಾಕೇನೂ ಸಿಗಲಿಲ್ಲೇನು?" ಎಂದು ಕೇಳಿದ. ದಿನವೂ ಅಲೆದುದರಿಂದ, ಅವರ ನೊಂದ ದೇಹಕ್ಕೆ ಹೆಚ್ಚು ಶ್ರಮವಾಗಿದ್ದಿತು. ಕಣ್ಣಲ್ಲಿ ನೀರು. ಅದನ್ನೊರಸಿಕೊಳ್ಳುತ್ತ "ಹೌದಪ್ಪ ಮೂರುದಿನಾಯ್ತು, ನಮ್ಮಲ್ಯಾರಿಗೂ ಅನ್ನಾ ಇಲ್ಲ ರೊಟ್ಟಿ ಇಲ್ಲ. ಗಂಜೀನೂ ಇಲ್ಲ. ಈ ಮುದುಕಿ ತಾಯಿ, ನರಳುವ ತಮ್ಮ, ಇವರನ್ನು ಹೇಗೆ ಸಮಾಧಾನ ಮಾಡೋದು. ನನ್ನ ಜನ ಸುಡಲಿ. ವಯಸ್ಸಾಗಿದ್ದರೂ ಈ ಇಬ್ಬರ ಹೃದಯಗಳಿಗೆ ಶಾಂತಿಯನ್ನುಂಟುಮಾಡಲಾಗಿಲ್ಲ. ನಾನು ಜೀವಿಸಿದುದರ ಫಲವಾದರೂ ಏನು?" ಎಂದು ಹೇಳಿದ ಮಾತುಗಳು ಆ ಹೆಳವನ ಹೃದಯವನ್ನು ಕರಗಿಸಿದವು. ಅವರ ಈ ಮುಃಸ್ಥಿತಿಗೆ ಮರುಗಿದನು, "ಹೌದಪ್ಪಾ ನಮ್ಮ ಬಾಳೇ ಹೀಂಗೆನೋಡು, ಬಡವರೆಂದರೆ ಯಾರಿಗೆ ಬೇಕು? ನಮ್ಮ ಹಣೇಬರಾನೇ ಇಷ್ಟು. ಗ್ರಹಚಾರೊಪ್ಪ. ಬೇಡಾಂದ್ರೆ ಯಾರಕೇಳ್ತಾರೆ?" ಎಂದು ಸಮಾಧಾನದ ಮಾತುಗಳಿಂದ ಅವರನ್ನು ಸಮೀಪಿಸಿ, ಅಲ್ಲೇ ಗಿಡದ ನೆರಳಿನಲ್ಲಿ ಕುಳಿತಿದ್ದ ಹೆಂಡತಿಯನ್ನು ಕರೆದು "ಅಲ್ಲಾ ಅನ್ನಾ ಏನಾದರೂ ಅದೇನು?" ಎಂದು ಕೇಳಿದ. ಆದಕ್ಕವಳು "ಇದೆ, ಇನ್ನೂ ನಮ್ಮ ಊಟವಾಗಿಲ್ಲ." ಎಂದು ಹೇಳಿದ ಮಾತು ಕೇಳಿ ಹೆಳವನಿಗೆ ಸಂತೋಷವೆನಿಸಿತು. ಹಿಗ್ಗಿದ. "ಇಲ್ಲಿ ನಾ ಪಾಪ ಮೂರುದಿನವಾಗಿದೆ ಇವರಿಗೆ ಗಂಜಿ ಸಹಾ ಸಿಕ್ಕಿಲ್ಲವಂತೆ ನೋಡು, ಆ ಮುದುಕಿ, ಹುಡುಗ ಹೇಗೆ ಕಣ್ಣೊಳಗೆ ಪ್ರಾಣ ಇಟ್ಕೊಂಡು ಕೂತಿದ್ದಾರೆ." ಎಂದು ಹೇಳಿದ ಮಾತಿಗೆ ಸಂತೋಷದಿಂದ ಮುಂದೆ ಬಂದು ಹಸಿದ ಹೊಟ್ಟೆಗಳಿಗೆ ಅನ್ನವನ್ನು ನೀಡಿದಳು. ಮೂರುಕು ಡಬ್ಬಿಯಲ್ಲಿ ಅವರದನ್ನು ತಿನ್ನುತ್ತಿರಲು ಆ ಹೆಳವನು ಹೆಂಡತಿಯನ್ನು ಕೂಗಿ "ಇನ್ನಿಷ್ಟು ಅದೇನು?" ಎಂದು ಕೇಳಿದ. "ಸ್ವಲ್ಪ, ನಿಮಗಿರಲೆಂದು ಇಟ್ಟಿದ್ದೇನೆ" ಎಂದವಳ ಮಾತಿಗೆ ಆ ಕುಂಟನು ತಡಿಯದಲೇ "ಎಲ್ಲವನ್ನೂ ಇವರಿಗೆ ಹೊಟ್ಟೆತುಂಬಾ ನೀಡಿಬಿಡು, ಈ ರಾತ್ರಿ ನನಗಿಲ್ಲದಿದ್ದರೆ ನಾನೇನೂ ಸಾಯುವದಿಲ್ಲ." ಎಂದು ಹೇಳಿದನು. ಈ ಬಡವನ ಉದಾರ ದಾನಕ್ಕೆ ಅವರು ಹಿಗ್ಗಿದರು. ಈ ಹಿಗ್ಗಿನಲ್ಲಿ ಆ ಹೆಳವ, ಅವನ ಹೆಂಡತಿ, ಇವರಿಬ್ಬರೂ ಮೈಮರೆತರು! ಒಂದೆಡೆ ಇದೆ, ಇನ್ನೊಂದೆಡೆ ಇಲ್ಲ; ಇದ್ದವರಿಲ್ಲವೆಂದರು, ಇಲ್ಲದವನು ಇದೆಯೆಂದ!

ಭವಿಷ್ಯ

ಜ್ಯೋತಿಷಿ:-ಕೃಷ್ಣಶಾಸ್ತ್ರಿ ಘಡೆ, ಭವಿಷ್ಯಕಥನ ಕಾರ್ಯಾಲಯ, ಖಡೇಬಜಾರ ಬೆಳಗಾವಿ

ಜೂನ ೧೬ ರಿಂದ ೨೨ ರ ವರೆಗೆ

ಮೇಷ

ಪ್ರಕೃತಿ ಉತ್ತಮ. ಅದರಂತೆಯೆ ಹೆಂಡತಿಯದು. ಆದರೆ ಉಭಯತರಲ್ಲಿ ಮೇಲಿಂದ ಮೇಲೆ ತೀವ್ರ ಮತಭೇದದ ಪ್ರಸಂಗ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಸಂಗ್ರಹದಲ್ಲಿ ಹೆಚ್ಚಳ. ಕೆಲವೊಂದು ಹರಕೀಯ ವಸ್ತು ನಿಮ್ಮ ಕೈಯಿಂದ ಕಳೆದು ಹೋಗುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಷ್ಟದಿಂದಲೆ ಯಶಸ್ಸು. ಮಕ್ಕಳಲ್ಲಿ ಭಾವೀ ಉತ್ಕರ್ಷದ ಘಟನೆಗಳು. ಮಿತ್ರ ಸುಖದಲ್ಲಿ ಅನಪೇಕ್ಷಿತ ಕಾರಣಗಳಿಂದ ವಿರಸ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಹೆಚ್ಚು ಅನುಕೂಲ. ಅಶ್ವಿನಿಯ ೪ ಮತ್ತು ಭರಣಿಯ ಮೊದಲನೆಯ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೬, ೧೭, ೧೮, ೧೯ ಅನುಕೂಲ.

ವೃಷಭ

ಪ್ರಕೃತಿ ಉತ್ತಮ. ಸ್ತ್ರೀ ಸುಖದಲ್ಲಿ ಮಾತ್ರ ವಿರಸ. ಉಭಯತರಲ್ಲಿ ಕ್ಷುಲ್ಲಕ ಮಾತಿಗಾಗಿ ಭಯಂಕರ ಮತಭೇದದ ಪ್ರಸಂಗ. ಉಳಿದ ವಿಷಯಗಳಲ್ಲಿ ಮಾತ್ರ ಪ್ರಾಪಂಚಿಕ ಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ. ಮತ್ತು ಲಾಭ ಅನುಕೂಲ. ಆದರೆ ವೆಚ್ಚವು ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಾನಿಯು ಅಂಜಿಕೆ. ಆದರೂ ಶೀಘ್ರ ರಚಿಸಿದ ಕಪಟ ಜಾಲದಲ್ಲಿ ಶತ್ರು ಸಿಕ್ಕುಬೀಳುವ ಸುಸಂಧಿ. ಮಿತ್ರತ್ವದಲ್ಲಿ ವಿರೋಧ. ಕೆಲ ಪಾರಮಾರ್ಥಿಕ ಕೃತ್ಯಗಳು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಕೃತ್ತಿಕೆಯ ೪ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೭, ೧೮, ೧೯, ೨೦ ಅನುಕೂಲ.

ಮಿಥುನ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ಕುಟುಂಬದಲ್ಲಿಯ ಒಬ್ಬ ಮತ್ಸರೀ ವ್ಯಕ್ತಿಗಳಿಂದ ಉಭಯತರ ಮನಸ್ಸು ಒಬ್ಬರೊಬ್ಬರ ಬಗ್ಗೆ ಕಲುಷಿತ ಮಾಡುವ ಪ್ರಯತ್ನ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಗಾಗಿ ಎರಡನೆಯವರ ಕೈಕಾಲು ಬೀಳುವ ಪ್ರಸಂಗ. ಆದರೆ ದ್ರವ್ಯ ಲಾಭ ತುಂಬ. ವೆಚ್ಚ ಹೆಚ್ಚು ಪ್ರಮಾಣದಲ್ಲಿ ಆದರೆ ಆಮಾಮಗನ ವಿಷಯದಲ್ಲಿ ಹಿತಕ್ಕಾಗಿಯೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ವಿಜಯ. ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸ ಮನಸಿನಂತೆ. ಮೃಗಾದ ೪ ನೆ ಮತ್ತು ಆರಿದ್ರಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೬, ೨೦, ೨೧, ೨೨ ಅನುಕೂಲ.

ಕರ್ಕ

ಪ್ರಕೃತಿ ಉತ್ತಮ. ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳು ಆಜ್ಞಾಭಂಗ ಮಾಡುವದರಿಂದ ಬಹಳ ಮನಸ್ತಾಪ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಮೇಲಿಂದ ಮೇಲೆ. ಸರಳವಾಗಿ ಮಾತಾಡಿದರೂ ಕೇಳುವವರ ಮನಸಿನ ಮೇಲೆ ವಿಪರೀತ ಪರಿಣಾಮ. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ಪ್ರಗತಿ ಅತ್ಯಲ್ಪ. ಧೈರ್ಯಗೆಡಿಸುವ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಟ್ಟುವದು. ಮಿತ್ರ ಸುಖ ಉತ್ತಮ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಪುಷ್ಯದ ೪ ಮತ್ತು ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೦, ೨೧, ೨೨ ಅನುಕೂಲ.

ಸಿಂಹ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯದು ಬಹಳ ಕೆಡುವದು. ಉಳಿದ ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಸ್ಥಾವರದಲ್ಲಿ ಮಾತ್ರ ಬಂಧುವರ್ಗದವರ ಇಲ್ಲವೆ ನೆರೆಯುವರ ಹಕ್ಕದಾರರಿಂದ ಕೆಲ ಮಟ್ಟಿಗೆ ಭಂಡಾಟಿಕೆ. ಉದ್ಯೋಗದಲ್ಲಿ ಪ್ರಗತಿ ಬಹಳ ಉತ್ತಮ. ಮತ್ತು ಪ್ರತಿಷ್ಠೆ ಲಾಭವೂ ಬಹಳ ಜೋರಿನಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹತಬಲವಾಗುವಂತಹ ಸ್ಥಿತಿ. ವಿಪರೀತ ವೆಚ್ಚವನ್ನು ಒಮ್ಮೆಲೆಮಾಡಬೇಕಾದ ಪ್ರಸಂಗ. ಮಿತ್ರ ಸುಖ ಉತ್ತಮ. ಆದರೆ ಶತ್ರುಗಳ ತೊಂದರೆಯೂ ವಿಪರೀತ. ಪ್ರವಾಸಾದಿ ಕೆಲಸ ಹಿತಕರ. ಮಘಾದ ೪ ನೆಯ ಮತ್ತು ಪೂರ್ವಾದ ಮೊದಲನೆಯ ೩ ಚರಣಕ್ಕೆ ತೊಂದರೆ ಕಡಿಮೆ. ತಾ. ೧೬, ೧೭, ೧೮, ೧೯, ಅನುಕೂಲ.

ಕನ್ಯಾ

ನಿಮ್ಮ ಪ್ರಕೃತಿಯಲ್ಲಿ ಕುರಕುರಿ. ಆದರೆ ಸ್ತ್ರೀಸುಖ ಅನುಉತ್ತಮ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕಸುಖ ಅನುಕೂಲ. ಆದರೆ ಎರಡನೆಯವರಿಗೆ ಅದು ಹಾಗಿದ್ದುದನ್ನು ಕಾಣಬಾರದೆಂದು ಕುಟುಂಬದಲ್ಲಿಯ ಜನರು ಪರಸ್ಪರ ಸಿಟ್ಟು ರೊಚ್ಚಿನಲ್ಲಿರುವರೆಂದು ಸುಳ್ಳು ಸುಳ್ಳೆ ಸೋಗು ಮಾಡುವದು. ಸ್ಥಾವರದಲ್ಲಿ ಸ್ವಲ್ಪ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅಲ್ಲದೆ ಅವಚಿತ ಲಾಭದ ಸಂಭವವೂ ಇದೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಹವಳರಿಯವರಿಗಿಂತ ಇತರರಿಗೆಉವಾರ ಹೆಚ್ಚು ಸುಖದು. ಸ್ವಪ್ನ ಶುಭ

ಮತ್ತು ಭಾವೀ ಸೂಚಕ. ಮಹತ್ವದ ಲೇಖೀವ್ಯವಹಾರ ಮತ್ತು ಪ್ರವಾಸಾದಿ ಕೆಲಸ ಅಪೇಕ್ಷೆಗಿಂತ ಹೆಚ್ಚು ಹಿತದು. ಉತ್ತರಾದ ೪ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ ತಾ. ೧೬, ೧೮, ೧೯, ೨೦, ಉತ್ತಮ.

ತುಲಾ

ಪ್ರಕೃತಿ ಸಾಧಾರಣವೆ. ನಿಮ್ಮ ನಿಮ್ಮಲ್ಲಿ ಕಲಹ ಹೆಚ್ಚುತ್ತ ನಡೆವುದು. ಎಲ್ಲದರಲ್ಲಿಯೂ ಮಕ್ಕಳು ಮತ್ತು ಹೆಂಡತಿ ದಬಾಯಿಸುವ ಮಾತಾಡುವರು. ಉದ್ಯೋಗದಲ್ಲಿ ಮಾತ್ರ ಜೋರಾದ ಪ್ರಗತಿ ಬಹಳ ಕೀರ್ತಿ ಮತ್ತು ಪ್ರತಿಷ್ಠೆ ಹಾಗು ದ್ರವ್ಯ ಲಾಭ ತುಂಬ ಬಹಳ ದಿನಗಳಿಂದ ಅಪೇಕ್ಷಿಸಿದ ವಸ್ತುವಿನ ಪ್ರಾಪ್ತಿಯಾಗುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ ಅವಚಿತ ಲಾಭದ ಸಂಭವ. ಸ್ತ್ರೀ ಬಗ್ಗೆ ಪಾಪ ವಿಚಾರ. ಪ್ರವಾಸಾದಿ ಕೆಲಸ ಹಿತದು. ಚಿತ್ರಾದ ೪ ಮತ್ತು ಸ್ವಾತಿಯ ೩ ಚರಣಗಳಿಗೆ ಹೆಚ್ಚು ತೊಂದರೆ ಕಡಮೆ ತಾ. ೧೯, ೨೦, ೨೧, ೨೨, ಅನುಕೂಲ.

ವೃಶ್ಚಿಕ

ಪ್ರಕೃತಿ ಬಹಳ ಉತ್ತಮ. ಪ್ರಾಪಂಚಿಕ ಸುಖ ಸಾಧಾರಣವೆ. ಆದರೆ ಸ್ತ್ರೀ ಸುಖ ಉತ್ತಮ. ಬಂಧುವರ್ಗದವರಲ್ಲಿ ಉನ್ನತಿ. ಮಕ್ಕಳು ಅಪಮಾನಮಾಡುವ ಅಂಜಿಕೆ. ಉದ್ಯೋಗದಲ್ಲಿ ಉತ್ತಮ ಲಾಭ. ಆದರೆ ಪ್ರತಿಷ್ಠೆ ಮತ್ತು ಪ್ರಗತಿಯ ವಿಷಯದಲ್ಲಿ ಬಹಳ ಅಡಚಣೆಗಳಿಗೊಳಗಾಗುವ ಪ್ರಸಂಗ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪರಭಾರೆ ಶತ್ರುಗಳ ಅಲ್ಪ ಸ್ವಲ್ಪ ಹಾನಿ ಪ್ರವಾಸಾದಿ ಕೆಲಸ ಕಷ್ಟವಹ. ಅನುರಾಧೆಯ ೪ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು ತಾ. ೧೭, ೧೮, ೨೧, ಅನುಕೂಲ.

ಧನು

ಪ್ರಕೃತಿ ಉತ್ತಮ. ಸ್ತ್ರೀ ಸಹವಾಸ ಮತ್ತು ಉಭಯತರಲ್ಲಿ ಮಕ್ಯಕ್ಕ ಪೂರ್ಣಸಿದ್ಧರೂ ರತಿ ಸುಖದಲ್ಲಿ ವಿರಸ. ಮಕ್ಕಳಲ್ಲಿ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮವೇ. ಆದರೆ ಮುಳುಗುವ ಇಲ್ಲವೆ ಅನವಶ್ಯಕ ಕೆಲಸದಲ್ಲಿ ವೆಚ್ಚವು ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಕಾಯಿದೆಯ ದೃಷ್ಟಿಯಿಂದ ಅನುಕೂಲತೆ ಆದರೆ ಸಹಾಯಕರ ವೃತ್ತಿ ಕುಟಿಲ ಕಂಡು ಬರುವದರಿಂದ ಮನಸ್ಸು ಚೈನಿಯಲ್ಲಿಲ್ಲದಿರುವದು ಮಿತ್ರತ್ವದಲ್ಲಿ ವಿರೋಧ ಪ್ರವಾಸಾದಿ ಕೆಲಸ ಹಿತದು. ಮೂಲಾದ ೪ ಮತ್ತು ಪೂರ್ವಾಷಾಢಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ ತಾ. ೧೬, ೧೯, ೨೦, ಅನುಕೂಲ.

ಮಕರ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಮಿತ್ರರೊಡನೆ ಬರುವ ವಿರೋಧದಿಂದ ಮನಸಿನಲ್ಲಿ ಸ್ವಲ್ಪೂ ಚೈನಿಯಿಲ್ಲ. ಕೆಲ ಪ್ರಿಯ ಮತ್ತು ಕೆಲ ಅಪ್ರಿಯರಾದ ಜನರಗೂಡ ಸಹವಾಸ ಒಂದೇ ಸಮಯಕ್ಕೆ ಸಂಭವಿಸುವದರಿಂದ ಬಹಳ ಗೊಂದಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ. ಆದರೆ ಅದು ಹಾಗಾಗುವ ವರೆಗೆ ತೊಂದರೆ ಮತ್ತು ಶ್ರಮಸಹಿತ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅಪಯಶದ ಭೀತಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ ತಾ. ೧೭, ೨೧, ೨೨, ಅನುಕೂಲ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಹೆಂಡತಿಗೂಡ ಮೇಲಿಂದಮೇಲೆ ವಿರೋಧ ಆದರೆ ರತಿ ಸುಖ ಮನಸಿನಂತೆ ಮಕ್ಕಳಿಂದ ಉತ್ತಮ ಸುಖ ಮತ್ತು ಲೋಕಮತ ಪ್ರಶಂಸಿಸುವ ವರ್ತನ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ. ವಾದದಲ್ಲಿ ಮತ್ತ ಸ್ಪರ್ಧೆಯಲ್ಲಿ ಯಶಸ್ಸು ಪ್ರವಾಸಾದಿ ಕೆಲಸ ಹಿತದು ಧನಿಷ್ಠಾದ ೪ ನೇ ಮತ್ತು ಶತತಾರಿಕೆಯ ಮೊದಲನೆ ೩ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೧೬, ೧೭, ೧೯, ೨೦, ಅನುಕೂಲ.

ಮೀನ

ಪ್ರಕೃತಿ ಸಾಧಾರಣವೆ. ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಸಂಗ್ರಹದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಯೂ ಮಧ್ಯಮ. ಆದರೆ ಲಾಭ ಉತ್ತಮ. ದೊಡ್ಡ ಮನಸ್ಸಿನ ಕೆಲ ಸತ್ಕೃತ್ಯಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ, ಆದರೆ ಶತ್ರುವೂ ಮತ್ತೆ ಜೋರು ಮಾಡುವ ಸಿದ್ಧತೆಯಲ್ಲಿ. ಸ್ವಪ್ನ ಶುಭ ಮತ್ತು ಭಾವೀಸೂಚಕ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಉತ್ತರಾಭಾದ್ರಪದದ ೪ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೧೬, ೧೭, ೨೧, ೨೨ ಅನುಕೂಲ.

(೧ ನೇ ಪುಟದಿಂದ)

ಸುಧಾರಣಾ ಪತ್ರಿಕೆಗಳು

ಹಿಂದೀಯರು ಮತ್ತು ಮೂಲನಿವಾಸಿಗಳು ಬಿಳಿಯರ ದುರುದ್ದೇಶವನ್ನು ಮುರಿಯಲು ಸಂಘಟಿತರಾಗತೊಡಗಿ ಬ್ರಿಟಿಶ "ಕಲೋನಿಯಲ್ ಆಫೀಸಿ" ನವರಿಗೆ ಆ ಸುದ್ದಿ ಮುಟ್ಟಿ ೧೯೦೬ ನೆಯ ಪತ್ರಿಕೆಯೊಂದು ಪ್ರಕಟವಾಯಿತು. ಆ ಸುಧಾರಣಾ ಪತ್ರಿಕೆಯಲ್ಲಿ ಎಲ್ಲ ಕುಲದವರಿಗೂ ಸಮಪ್ರಾತಿನಿಧ್ಯವಿರಬೇಕೆಂದಿದ್ದುದರಿಂದ ಪೂರ್ವ ಆಫ್ರಿಕದ ಎಲ್ಲೆಡೆಯಲ್ಲಿಯೂ ಅದನ್ನು ಸ್ವಾಗತಿಸಲಾಯಿತು; ಆದರೆ ಇದರಿಂದ ಸಂತಪ್ತರಾದ ಯುರೋಪಿಯನ್ನರು ಪುನಃ ತಮ್ಮ ಚಳವಳಿಯನ್ನು ಬಲಪಡಿಸಿ ಬ್ರಿಟಿಶ ಮುತ್ಸದ್ದಿಗಳ ಕಿವಿಗೆ ಚಾಣಾಕ್ಷಮಂತ್ರವನ್ನೂದಿ ೨೧೦ ನೆಯ ಪತ್ರಿಕೆ ಪ್ರಕಟವಾಗುವಂತೆ ಮಾಡಿದರು. ಆ ಪತ್ರಿಕೆಯ ಪ್ರಕಾರ ಶ್ವೇತಕುಲದವರು ಹೆಚ್ಚಿನ ನಾಗರಿಕರೆಂದೂ ಅದರಿಂದ ಅವರಿಗೆ ಶಾಸನ ಸಭೆಗಳಲ್ಲಿ ಹೆಚ್ಚಿನ ಪ್ರಾತಿನಿಧ್ಯವಿರಬೇಕೆಂದೂ ಹಿಂದೀಯರಿಗೂ ಮೂಲನಿವಾಸಿಗಳಿಗೂ ಅಲ್ಪ ಸ್ವಲ್ಪ ಪ್ರಾತಿನಿಧ್ಯವಿದ್ದರೆ ಸಾಕೆಂದೂ ಅವರ ಹಿತರಕ್ಷಣೆಯ ಭಾರವನ್ನು ಯುರೋಪಿಯನ್ನರೇ ನಿರ್ವಹಿಸಬಲ್ಲರೆಂದೂ ಆಗುವುದರಿಂದ ಅದರಲ್ಲಿಯ ಸಲಹೆಗಳು ಮಾನ್ಯವಲ್ಲವೆಂದು ಹಿಂದೀಯರೂ ಆಫ್ರಿಕನ್ನರೂ ಒಕ್ಕೊರಲಿಂದ ಸಾರಿದ್ದಾರೆ.

ತಾವೇ ಶ್ರೇಷ್ಠರೆಂಬ ದುರಭಿಮಾನ ತಾಳಿದ ಬಿಳಿಯರು ಸವರ್ಣ ಕುಲದ ದುಡಿತದಿಂದ ಐಷ್ವೈಶ್ವರ್ಯ ಸಂಪನ್ನರಾಗಿ ಬಾಳಲು ಮೇಲೆ ಹೇಳಿದಂತೆ ಹಲವಾರು ಹಂಚಿಕೆಗಳನ್ನು ತಯಾರಿಸಿ, ಅವುಗಳಿಂದ ಪೂರ್ವ ಆಫ್ರಿಕದ ಮೇಲೆ ನೈಸರ್ಗಿಕವಾಗಿ ಹೆಚ್ಚಿನ ಹಕ್ಕಿರುವ ಆಫ್ರಿಕನ್ನರನ್ನೂ ಹಿಂದೀಯರನ್ನೂ ಕಟ್ಟಿಹಾಕಲು ಹೆಣಗುತ್ತಿದ್ದಾರೆ. ಈ ಪ್ರಯತ್ನದ ಹುಟ್ಟಡಗಿಸಲು ಸವರ್ಣಕುಲದ ಸರ್ವರೂ ಇಂದು ಒಗ್ಗಟ್ಟಾಗಿ ಹೋರಾಟ ನಡೆಸತೊಡಗಿದ್ದಾರೆ. ಅವರ ಮುಂದಾಳುಗಳೆಂದರೆ ಭಾರತೀಯ ವ್ಯಾಪಾರಿ ಪ್ರಮುಖರೇ. ಪೂರ್ವ ಆಫ್ರಿಕದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪಿತವಾಗಿದೆ. ಅದರ ಧ್ವಜದಡಿಯಲ್ಲಿ ಶ್ವೇತೇತರರೆಲ್ಲರೂ ಒಂದಾಗಿ ಚಳವಳಿ ನಡೆಸತೊಡಗಿದ್ದಾರೆ. ಆ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಶ್ರೀ ಎಸ್. ಜಿ. ಅಮೀನರು ಕೆಲಸ ಮಾಡುತ್ತಿದ್ದಾರೆ. ಬಿಳಿಯರ ಅರಸೊತ್ತಿಗೆಯನ್ನು ಹೊಡೆದೋಡಿಸಿ ದ. ಆಫ್ರಿಕಕ್ಕೆ ಸ್ವರಾಜ್ಯ ದೊರಕುವಂತೆ ಮಾಡಲು ಸಂಪೀಡಿತ ಸವರ್ಣರ ಈ ಮಹಾಪ್ರಯತ್ನಕ್ಕೆ ಜಗತ್ತಿನ ಪ್ರಜಾಸತ್ತಾತ್ಮಕ ರಾಷ್ಟ್ರಗಳೆಲ್ಲವೂ ಬೆಂಬಲಕೊಡಬೇಕಾಗಿದೆ; ಅದರಲ್ಲೂ ಹಿಂದುಸ್ಥಾನವು ತ್ರಿಕರಣಪೂರ್ವಕವಾಗಿ ಸಹಾಯ ಮಾಡತಕ್ಕದ್ದು ಅದರ ಕರ್ತವ್ಯವೆಂದು ಒಪ್ಪತಕ್ಕದ್ದಾಗಿದೆ. ಅದುದರಿಂದಲೇ ಶ್ರೀ ಅಮೀನರು, "ಹಿಂದುಸ್ಥಾನದಲ್ಲಿ ನಡುಗಾಲ ಸರಕಾರ ಸ್ಥಾಪಿತವಾದದ್ದನ್ನು ಕಂಡು ಪೂರ್ವ ಆಫ್ರಿಕದ ಜನಸಂಖ್ಯೆಯಲ್ಲಿ ನೂರಕ್ಕೆ ೯೯ ರಷ್ಟಿರುವ ಆಫ್ರಿಕನ್ನರು ಆರ್ಥಿಕ ಮತ್ತು ರಾಜಕೀಯ ಪ್ರಗತಿಗಾಗಿ ಮತ್ತು ಸ್ವಾತಂತ್ರ್ಯಕ್ಕಾಗಿ ತಾವು ನಡಸುತ್ತಿರುವ ಹೋರಾಟಕ್ಕೆ ಹಿಂದುಸ್ಥಾನ ಸಹಾಯ ಮಾಡುವದನ್ನೇ ಎದುರುನೋಡುತ್ತಿದ್ದೇವೆಂದು ಪ್ರಕಟವಾಗಿ ಹೇಳಿದ್ದಾರೆ. ಇದೇಕಾರ್ಯ ನಡೆಸಲು ಸಕಾಲ. ಅದುದರಿಂದ ಪೂರ್ವ ಆಫ್ರಿಕದಲ್ಲಿ ನಡೆಯುತ್ತಿರುವ ನಮ್ಮ ಹೋರಾಟದ ಕಡೆ ವಿಶೇಷ ಲಕ್ಷ್ಯಕೊಡಬೇಕೆಂದು ನಾನು ಹಿಂದೀಯರೆಲ್ಲರನ್ನೂ ಕೇಳಿಕೊಳ್ಳುತ್ತೇನೆ" ಎಂದು ಜೊನ್ನೆ ಹೇಳಿಕೆಯಿತ್ತಿದ್ದಾರೆ. ಸ್ವತಂತ್ರ ಹಿಂದುಸ್ಥಾನವು ಹೊರ ನಾಡಿನಲ್ಲಿರುವ ಭಾರತೀಯರ ಮತ್ತು ಇತರ ದಬ್ಬಾಳಿಕೆಗೊಳಗಾದ ಏಸಿಯನ್ನರ ಹಾಗೂ ಆಫ್ರಿಕನ್ನರ ಸಂಕಟಕಾಲದ ಕರೆಗೆ ಓಗೊಡಲು ತಡಮಾಡಲಾರದೆಂದು ನಂಬಬಹುದಲ್ಲವೇ?

ಹೈದರಾಬಾದವು ಸ್ವತಂತ್ರ ಆಗುವದು

ಸರಕಾರದ ನಿರ್ಧಾರ

ಬ್ರಿಟಿಶರು ಹಿಂದುಸ್ಥಾನದಿಂದ ಹೊರಟು ಹೋಗುವದನ್ನು ಹಾಗು ಅಧಿಕಾರ ತ್ಯಾಗದ ಅವರ ಇತ್ತೀಚಿನ ಯೋಜನೆಯನ್ನು ಅನುಲಕ್ಷಿಸಿ ನಿಜಾಮ ಸರಕಾರದವರು ಹೈದರಾಬಾದದ ಸ್ವಾತಂತ್ರ್ಯ ಘೋಷಿಸಲು ನಿಶ್ಚಯಿಸಿರುವರೆಂದು ತಿಳಿಯುತ್ತದೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ-ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟದ" ಪರವಾಗಿ ಹ. ರಾ. ಪುರೋಹಿತರವರಿಂದ ಮುದ್ರಿತವಾಗಿ ಪ್ರಕಟವಾಯಿತು.